

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 8 ಬುಧವಾರ 2025

ಸಂಪುಟ: 45 | ಸಂಚಿಕೆ: 262 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಡಾ.ಅಂಬೇಡ್ಕರ್ ವಿಚಾರದಲ್ಲಿ ಕೇಂದ್ರ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ವಿವಿಧ ಸಂಘಟನೆಗಳು ಕರೆ ನೀಡಿದ್ದ

‘ಮೈಸೂರು ಬಂದ್’ ಯಶಸ್ವಿ

ಮೈಸೂರು, ಜ.7(ಆರ್‌ಕೆ)–ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ವಿಚಾರವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ಡಾ.ಬಿ.ಆರ್.ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿ, ರೈತ ಸಂಘ ಸೇರಿದಂತೆ ವಿವಿಧ ಸಂಘಟನೆಗಳು ಕರೆ ನೀಡಿದ್ದ ಮೈಸೂರು ಬಂದ್ ಇಂದು ಸಂಪೂರ್ಣ ಯಶಸ್ವಿಯಾಗಿದೆ.

ಇಂದು ಬೆಳಗ್ಗೆ 10 ಗಂಟೆಯಿಂದಲೇ ಮೈಸೂರು ನಗರ ಸಂಪರ್ಕಿಸುವ ಮೈಸೂರು–ಬೆಂಗಳೂರು, ಕೆಆರ್‌ಎಸ್, ಹುಣಸೂರು, ಬೋಗಾದಿ, ಹೆಚ್.ಡಿ. ಕೋಟೆ, ನಂಜನಗೂಡು, ತಿ.ನರಸೀಪುರ, ಬನ್ನೂರು ಹಾಗೂ ಮಹದೇವಪುರ ರಸ್ತೆಗಳಲ್ಲಿ ಮಾನವ ಸರಪಳಿ ನಿರ್ಮಿಸುವ ಮೂಲಕ ರಸ್ತೆತಡೆ ನಡೆಸಿದ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಸಾರಿಗೆ ಬಸ್, ಸರಕು ಸಾಗಣೆ ವಾಹನಗಳು ಮೈಸೂರು ನಗರ ಪ್ರವೇಶಿಸದಂತೆ ತಡೆಯೊಡ್ಡಿದ ಹಿನ್ನೆಲೆಯಲ್ಲಿ ಪ್ರಯಾಣಿಕರು ಹಾಗೂ ವಾಣಿಜ್ಯ ಸಂಸ್ಥೆಗಳಿಗೆ ಭಾರಿ ತೊಂದರೆ ಉಂಟಾಯಿತು.

ನೀಲಿ ಬಾವುಟಗಳನ್ನಿಡಿದ ಸಂಘಟನೆಗಳ ಕಾರ್ಯಕರ್ತರು, ಕಾರು ಹಾಗೂ ಬೈಕ್‌ಗಳಲ್ಲಿ ಮೈಸೂರಿನಾದ್ಯಂತ ಸಂಚರಿಸಿ ಅಂಗಡಿ–ಮುಂಗಟ್ಟುಗಳು, ಖಾಸಗಿ, ಸರ್ಕಾರಿ ■6ನೇ ಪುಟಕ್ಕೆ





ಡಾ.ಬಿ.ಆರ್.ಅಂಬೇಡ್ಕರ್ ವಿಚಾರವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ವಿವಿಧ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದವು. ಬಲಚಿತ್ರದಲ್ಲಿ ಮೈಸೂರು ನಗರ ಸಾರಿಗೆ ಬಸ್‌ಸ್ಟ್ಯಾಂಡ್ ಬಿಕೋ ಎನ್ನುತ್ತಿರುವುದು.



ಮೈಸೂರಿನ ದೇವರಾಜ ಅರಸು ರಸ್ತೆ ವ್ಯಾಪಾರ–ವಹಿವಾಟು ಇಲ್ಲದೇ ಬಿಕೋ ಎನ್ನುತ್ತಿರುವುದು.

ಮಂಡ್ಯ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಅಂಗಡಿ ಮುಚ್ಚಿಸಿದ ಪ್ರತಿಭಟನಾಕಾರರು; ಹೋರಾಟಗಾರರು ತೆರಳುತ್ತಿದ್ದಂತೆ ವ್ಯಾಪಾರ–ವಹಿವಾಟು ಪುನರಾರಂಭಿಸಿದ ವರ್ತಕರು

ಮಂಡ್ಯ,ಜ.7–ಡಾ.ಬಿ.ಆರ್.ಅಂಬೇಡ್ಕರ್ ವಿಚಾರವಾಗಿ ಸಂಸತ್‌ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದ ಹೇಳಿಕೆ ಖಂಡಿಸಿ ಪ್ರಗತಿಪರ ಒಕ್ಕೂಟ ಕರೆ ನೀಡಿದ್ದ ಮಂಡ್ಯ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು. ದಲಿತ, ರೈತ, ಅಲ್ಪಸಂಖ್ಯಾತ, ಕಾರ್ಮಿಕ, ಹಿಂದುಳಿದ ವರ್ಗಗಳ ಮಹಾ ಒಕ್ಕೂಟ ಕರೆ ನೀಡಿದ್ದ ಮಂಡ್ಯ ಬಂದ್ ಪೈಕಿ ನಗರದ ಹಲವೆಡೆ ವರ್ತಕರ ಜೊತೆ ಮಾತಿನ ಚಕಮಕಿ, ಮಾಲ್‌ಗೆ ನುಗ್ಗಲು ಯತ್ನ ಹೀಗೆ ಸಣ್ಣಪುಟ್ಟ ಅಹಿತಕರ ಘಟನೆ ನಡೆದದ್ದು ಬಿಟ್ಟರೆ ಸಂಪೂರ್ಣ ಶಾಂತಿಯುತವಾಗಿತ್ತು. ■6ನೇ ಪುಟಕ್ಕೆ






ಚೀನಾ ವೈರಸ್ ಬಗ್ಗೆ ನಿಗಾ ಇರಲಿ

ರಾಜ್ಯಗಳಿಗೆ ಕೇಂದ್ರದ ಸೂಚನೆ

ದೇಶದಲ್ಲಿ ಸೋಂಕಿತರ ಸಂಖ್ಯೆ 7ಕ್ಕೆ ಏರಿಕೆ

ಬೆಂಗಳೂರು, ಜ.7(ಕೆಎಂಶಿ)–ಎಚ್‌ಎಂಪಿ ವೈರಾಣು (ಹ್ಯೂಮನ್ ಮೆಟಾನ್ಯೂಮೋ ವೈರಸ್) ಬಗ್ಗೆ ತೀವ್ರ ನಿಗಾ ವಹಿಸುವಂತೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಸೂಚಿಸಿದೆ. ಈ ಮಧ್ಯೆ ಸೋಂಕಿತರ ಸಂಖ್ಯೆ ದೇಶದಲ್ಲಿ 7ಕ್ಕೆ ಏರಿಕೆಯಾಗಿದೆ.

ಕರ್ನಾಟಕ ಸೇರಿದಂತೆ ರಾಷ್ಟ್ರದ ವಿವಿಧ ಭಾಗಗಳಲ್ಲಿ ಎಚ್‌ಎಂಪಿ ವೈರಾಣು ಪ್ರಕರಣಗಳು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಆರೋಗ್ಯ ಸಚಿವಾಲಯ ದೆಹಲಿಯಲ್ಲಿಂದು ರಾಜ್ಯ ಸರ್ಕಾರಗಳಿಗೆ ಕೆಲವು ಮಾರ್ಗಸೂಚಿಗಳನ್ನು ಅನುಸರಿಸುವಂತೆ ತಿಳಿಸಿದೆ. ಉಸಿರಾಟ ಸಂಬಂಧಿ ಕಾಯಿಲೆ



ಮತ್ತು ಎಚ್‌ಎಂಪಿವಿ ಪ್ರಕರಣಗಳ ನಿರ್ವಹಣೆಗಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಹೇಳಿದೆ. ಚೀನಾದಲ್ಲಿ ಈ ವೈರಾಣು ಪ್ರಕರಣಗಳು ಏರಿಕೆ ಆಗುತ್ತಿರುವ ಬೆನ್ನಲ್ಲೇ ರಾಷ್ಟ್ರದ ಐದು ರಾಜ್ಯಗಳಲ್ಲಿ ಪ್ರಕರಣ ಪತ್ತೆಯಾಗಿದೆ, ಮುಂದಿನ ದಿನಗಳಲ್ಲಿ ವೈರಾಣು ಹರಡದಂತೆ ■9ನೇ ಪುಟಕ್ಕೆ

ಹೈಕಮಾಂಡ್ ಮಧ್ಯ ಪ್ರವೇಶ;ಗೃಹ ಸಚಿವ ಡಾ.ಪರಮೇಶ್ವರ್ ಡಿನ್ನರ್ ಪಾಲಿಟಿಕ್ಸ್‌ಗೆ ಬ್ರೇಕ್

ಬೆಂಗಳೂರು, ಜ.7– ಸಚಿವ ಜಿ.ಪರಮೇಶ್ವರ್ ನಾಳೆ ನಡೆಸಲು ಉದ್ದೇಶಿಸಿದ್ದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಚಿವರು, ಶಾಸಕರು, ಸಂಸದರು ಹಾಗೂ ಮುಖಂಡರ ಸಭೆ ರದ್ದಾಗಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಸೂಚನೆ ಮೇರೆಗೆ ಪರಮೇಶ್ವರ್ ಅವರು ನಾಳೆ ನಡೆಸಲು ಉದ್ದೇಶಿಸಲಾಗಿದ್ದ ಡಿನ್ನರ್ ಸಭೆಯನ್ನು ರದ್ದುಗೊಳಿಸಲಾಗಿದೆ. ಈ ಸಂಬಂಧ ಗೃಹ ಸಚಿವ ಜಿ.ಪರಮೇಶ್ವರ್ ಪ್ರಕಟಣೆ ಹೊರಡಿಸಿದ್ದಾರೆ.

ಬೆಂಗಳೂರಿನ ಹೋಟೆಲ್ ರಾಡಿಸನ್ ಬ್ಲೂನಲ್ಲಿ ಆಯೋಜಿಸಲಾಗಿತ್ತು. ರಾಜ್ಯ ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಜಾತಿ ಹಾಗೂ ಪಂಗಡದ ಜನಪ್ರತಿನಿಧಿಗಳು ಮತ್ತು ಮುಖಂಡರ ಸಭೆಯನ್ನು ರಾಜ್ಯದ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಅವರ ಸೂಚನೆಯ ಮೇರೆಗೆ ಮುಂದೂಡಲಾಗಿದೆ. ಸದರಿ ಸಭೆಯ ಮುಂದಿನ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು ಎಂದು ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ. ಸಚಿವ ಸತೀಶ್ ಜಾರಕಿಹೊಳಿ ಡಿನ್ನರ್ ಸಭೆ ಬಳಿಕ ಗೃಹ ಸಚಿವ ಜಿ.ಪರಮೇಶ್ವರ್ ಮತ್ತೊಂದು ಡಿನ್ನರ್ ಸಭೆ ನಡೆಸಲು ಉದ್ದೇಶಿಸಿರುವುದು ರಾಜಕೀಯ ವಲಯದಲ್ಲಿ ಸಾಕಷ್ಟು ಸಂಚಲನ ಮೂಡಿಸಿತ್ತು. ಡಿನ್ನರ್ ಸಭೆ ಮಾಡುವ ಮೂಲಕ ತಪ್ಪು ಸಂದೇಶ ರವಾನೆಯಾಗುವ ಬಗ್ಗೆ ಕೂಗು ಕೇಳಿ ಬಂದಿತ್ತು. ಇತ್ತ ಡಿಸಿಎಂ ಡಿ.ಕೆ. ಶಿವಕುಮಾರ್ ಕೂಡ ಡಿನ್ನರ್ ಸಭೆ ಬಗ್ಗೆ ಅಸಮಾಧಾನ ಹೊರಹಾಕಿದ್ದರು. ಇದೀಗ ಎಐಸಿಸಿ ಮಧ್ಯ ಪ್ರವೇಶಿಸಿ ಸಚಿವ ಪರಮೇಶ್ವರ್ ನೇತೃತ್ವದ ಡಿನ್ನರ್ ಸಭೆಗೆ ತಾತ್ಕಾಲಿಕ ಬ್ರೇಕ್ ಹಾಕಿದೆ.



ಗೃಹ ಸಚಿವ ಜಿ.ಪರಮೇಶ್ವರ್

ಇಂದು ಬೆಳಗ್ಗೆ ಗೃಹ ಸಚಿವ ಜಿ.ಪರಮೇಶ್ವರ್ ಮಾತನಾಡಿ, ಪಕ್ಷದ ವ್ಯಾಪ್ತಿಯಲ್ಲಿಯೇ ಅನುಮತಿ ಪಡೆದು ಸಭೆ ನಡೆಸುತ್ತೇವೆ. ನಾಳೆ ಸಂಜೆ ಏಳು ಗಂಟೆಗೆ ಸಭೆ ಕರೆದಿದ್ದೇವೆ ಎಸ್ಸಿ–ಎಸ್ಟಿ ಶಾಸಕರು, ಸಚಿವರು ಬಿಟ್ಟು ■6ನೇ ಪುಟಕ್ಕೆ

ದೆಹಲಿಯಲ್ಲಿ ಡಿ.ಕೆ.ಶಿವಕುಮಾರ್ ಹವಾ...!

ಸಿದ್ದರಾಮಯ್ಯ, ಬೆಂಬಲಿಗರ ದಿಲ್ಲಿ ಭೇಟಿಗೆ ವರಿಷ್ಠರ ಬ್ರೇಕ್

- ಕಾಂಗ್ರೆಸ್‌ನಲ್ಲಿ ಮತ್ತೆ ಮೇಲಾಟ ಶುರು
- ತೀವ್ರ ‘ಕುತೂಹಲ ಕೆರಳಿಸಿರುವ ಕೇಂದ್ರ ಸಚಿವರ ಡಿಕೆಶಿ ರಹಸ್ಯ ಭೇಟಿ

ಬೆಂಗಳೂರು, ಜ.7(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಬೆಂಬಲಿಗ ಸಚಿವರು ದೆಹಲಿ ಪ್ರವಾಸವನ್ನು ಹಠಾತ್ತಾಗಿ ರದ್ದುಗೊಳಿಸಿದ್ದಾರೆ. ಸಿದ್ದರಾಮಯ್ಯ ಅವರನ್ನು ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿ ಮುಂದುವರೆಸಬೇಕು, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಬೇಕೆಂದು ಒತ್ತಾಯಿಸಲು ವರಿಷ್ಠರ ಭೇಟಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬಣ ಮುಂದಾಗಿತ್ತು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರೋಧಿ ಬಣದ ಶಾಸಕರು ಮತ್ತು ಸಚಿವರು ಜಾರಕಿಹೊಳಿ ನೇತೃತ್ವದಲ್ಲಿ ವರಿಷ್ಠರನ್ನು ಭೇಟಿ ಮಾಡಲು ಸಮಯವನ್ನೂ ನಿಗದಿ ಮಾಡಿಕೊಂಡಿದ್ದರು.



ತಮ್ಮ ವಿರುದ್ಧ ಔತಣಕೂಟ ರಾಜಕೀಯ ಜೋರಾಗುತ್ತಿದ್ದಂತೆ ವಿದೇಶ ಪ್ರವಾಸದಲ್ಲಿದ್ದ ಶಿವಕುಮಾರ್ ನಿನ್ನೆ ದಿಢೀರನೆ ದೆಹಲಿಗೆ ಹಿಂತಿರುಗಿ, ವರಿಷ್ಠರನ್ನು ಭೇಟಿ ಮಾಡಿದ್ದಲ್ಲದೆ, ದೆಹಲಿ ವಿಧಾನಸಭಾ ಚುನಾವಣಾ ಕಣಕ್ಕೂ ಪ್ರವೇಶ ಮಾಡಿಬಿಟ್ಟರು. ಶಿವಕುಮಾರ್ ವರಿಷ್ಠರನ್ನು ಭೇಟಿ ಆಗುತ್ತಿದ್ದಂತೆ ಮುಖ್ಯಮಂತ್ರಿ ಹಾಗೂ ಸಚಿವರ ತಂಡದ ದೆಹಲಿ ■9ನೇ ಪುಟಕ್ಕೆ

ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಭಕ್ತಾದಿಗಳ ಒತ್ತಡ ನಿವಾರಣೆಗೆ

ಚಾಮುಂಡಿಬೆಟ್ಟಕ್ಕೆ ಸಾರ್ವಜನಿಕ ವಾಹನಗಳಿಗೆ ನಿರ್ಬಂಧ ಚಿಂತನೆ

- ಬೆಟ್ಟದ ತಪ್ಪಲಲ್ಲಿ ಸಾರ್ವಜನಿಕರು, ಗಣ್ಯರ ವಾಹನ ನಿಲುಗಡೆಗೆ ಸರ್ಕಾರಿ ಜಾಗ ಗುರುತಿಸುವ ಪ್ರಕ್ರಿಯೆ ಆರಂಭ
- ಹಿಮವದ್ ಗೋಪಾಲಸ್ವಾಮಿ ಬೆಟ್ಟ, ತಮಿಳುನಾಡಿನ ಪಳನಿ ಮಾದರಿ ಸರ್ಕಾರಿ ವಾಹನಗಳ ಸೌಲಭ್ಯ
- ವಾಹನಗಳ ಒತ್ತಡದಿಂದ ಬೆಟ್ಟ ಕುಸಿತ, ನಿಲುಗಡೆ ಸಮಸ್ಯೆಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಶ್ರೀ ಚಾಮುಂಡೇಶ್ವರಿ ದೇವಾಲಯ ಅಭಿವೃದ್ಧಿ ಪ್ರಾಧಿಕಾರ ಯೋಜನೆ



ಎಸ್.ಟಿ.ರವಿಕುಮಾರ್

ಮೈಸೂರು, ಜ. 7(ಆರ್‌ಕೆ)– ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನಕ್ಕಾಗಿ ಬರುವ ಲಕ್ಷಾಂತರ ಭಕ್ತಾದಿಗಳ ಒತ್ತಡ ಮತ್ತು ಪಾರ್ಕಿಂಗ್ ಸಮಸ್ಯೆ ನಿರ್ವಹಣೆ ದೃಷ್ಟಿಯಿಂದ ಚಾಮುಂಡಿ ಬೆಟ್ಟಕ್ಕೆ ಎಲ್ಲಾ ಬಗೆಯ ವಾಹನಗಳ ಪ್ರವೇಶ ನಿರ್ಬಂಧಿಸಿ ಸೂಕ್ತ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಮೈಸೂರು ಜಿಲ್ಲಾಡಳಿತ ಹಾಗೂ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಮುಂದಾಗಿದೆ.

ದಿನದಿಂದ ದಿನಕ್ಕೆ, ಅದರಲ್ಲೂ ವಿಶೇಷ ದಿನಗಳಂದು ಚಾಮುಂಡೇಶ್ವರಿ ದರ್ಶನಕ್ಕೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುವ ಭಕ್ತರ ಸಂಖ್ಯೆ ಹೆಚ್ಚಾಗುತ್ತಿದ್ದು, ಪರಿಣಾಮ ಬೆಟ್ಟದಲ್ಲಿ ವಾಹನ ಸಂಚಾರ ಮತ್ತು ನಿಲುಗಡೆಗೆ ಸ್ಥಳದ ಅಭಾವ ಉಂಟಾಗುವುದಲ್ಲದೇ, ಆವರಣದಲ್ಲಿ ಒತ್ತಡ ಹೆಚ್ಚಾಗುತ್ತಿದೆ.

ಇತ್ತೀಚೆಗೆ ಸಾಮಾನ್ಯ ದಿನಗಳಲ್ಲೂ ಚಾಮುಂಡೇಶ್ವರಿ ದರ್ಶನಕ್ಕೆ ಲಕ್ಷಾಂತರ ಮಂದಿ ಬರುತ್ತಿದ್ದು, ವಾರಾಂತ್ಯ, ವರ್ಷಾಂತ್ಯ, ಹೊಸ ವರ್ಷದ ಮೊದಲ ದಿನ ದಸರಾ ಮಹೋತ್ಸವ ಸಂದರ್ಭ ನವರಾತ್ರಿ ಉತ್ಸವ, ಆಷಾಢ ಮಾಸದ ಶುಕ್ರವಾರಗಳು, ಕ್ರಿಸ್‌ಮಸ್, ಬೇಸಿಗೆ ರಜೆಗಳಲ್ಲಿ ದೇಶ–ವಿದೇಶಗಳಿಂದ ಲಕ್ಷಾಂತರ ಭಕ್ತಾದಿಗಳು, ಪ್ರವಾಸಿಗರು, ಶಾಲಾ, ಕಾಲೇಜು ವಿದ್ಯಾರ್ಥಿಗಳು ಚಾಮುಂಡಿಬೆಟ್ಟಕ್ಕೆ ಬರುತ್ತಿದ್ದಾರೆ.

ರಾಜ್ಯ ಸರ್ಕಾರ ಸ್ತ್ರೀಯರಿಗೆ ಬಸ್ ಉಚಿತ ಪ್ರಯಾಣದ ‘ಶಕ್ತಿ’ ಯೋಜನೆಯನ್ನು ಜಾರಿಗೊಳಿಸಿದ ನಂತರವಂತೂ ಸಾರಿಗೆ ಬಸ್ಸುಗಳಲ್ಲಿ ಮಹಿಳೆಯರು ತಂಡೋಪತಂಡವಾಗಿ ಉಚಿತ ಪ್ರಯಾಣ ಸೌಲಭ್ಯ ಬಳಸಿಕೊಂಡು ಚಾಮುಂಡಿಬೆಟ್ಟಕ್ಕೆ ಬರುತ್ತಿದ್ದಾರೆ. ಪರಿಣಾಮ ಚಾಮುಂಡಿಬೆಟ್ಟದಲ್ಲಿ ವಾಹನ ಒತ್ತಡ, ನಿಲುಗಡೆ ಸಮಸ್ಯೆ ಹೆಚ್ಚುತ್ತಿದೆ. ಜೊತೆಗೆ ಪ್ರವಾಸಿಗರ ವಾಹನಗಳನ್ನು ರಸ್ತೆ ಬದಿಯೇ ನಿಲ್ಲಿಸಿ ಒಂದೂವರೆ–ಎರಡು ಕಿಲೋಮೀಟರ್ ದೂರದಿಂದ ನಡೆದುಕೊಂಡು ಹೋಗಿ ದೇವರ ದರ್ಶನ ಮಾಡಿ ಹಿಂತಿರುಗಬೇಕಾಗಿರುವುದರಿಂದ ಹಿರಿಯ ನಾಗರಿಕರು, ಅನಾರೋಗ್ಯ ಪೀಡಿತರು, ಅಂಗವಿಕಲರು, ವೃದ್ಧರಿಗೆ ತ್ರಾಸವಾಗುವುದಲ್ಲದೇ ಭದ್ರತಾ ಸಮಸ್ಯೆಯೂ ಉಂಟಾಗುತ್ತಿದೆ. ■6ನೇ ಪುಟಕ್ಕೆ



ಚಾಮುಂಡಿಬೆಟ್ಟ ಭಕ್ತರು, ಗಣ್ಯರಿಗೆ ಒದಗಿಸಲುದ್ದೇಶಿಸಿರುವ ವಾಹನಗಳ ಮಾದರಿ



ದಿನೇ ದಿನೆ ಚಾಮುಂಡಿಬೆಟ್ಟಕ್ಕೆ ಬರುವ ಭಕ್ತರು, ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ಹಾಗಾಗಿ ಬೆಟ್ಟದ ಒತ್ತಡ ತಪ್ಪಿಸಿ, ಸುಗಮ ರೀತಿ ದೇವರ ದರ್ಶನಕ್ಕೆ ಅವಕಾಶವಾಗುವಂತೆ ಎಲ್ಲಾ ಬಗೆಯ ವಾಹನಗಳನ್ನು ಬೆಟ್ಟ ಪ್ರವೇಶಿಸದಂತೆ ಶಾಶ್ವತವಾಗಿ ನಿರ್ಬಂಧಿಸಬೇಕೆಂದು ಸಲ್ಲಿಸಿದ ಪ್ರಸ್ತಾವನೆಗೆ ಜಿಲ್ಲಾಧಿಕಾರಿಗಳು ಸಮ್ಮತಿಸಿದ್ದು, ಬೆಟ್ಟದ ತಪ್ಪಲಿನಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಿ ಸರ್ಕಾರದಿಂದಲೇ ಪರ್ಯಾಯ ಸಾರ್ವಜನಿಕ ವಾಹನ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ.

– ಎಂ.ಜೆ.ರೂಪಾ, ಕಾರ್ಯದರ್ಶಿ, ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ



ಭಕ್ತರು, ವಾಹನ ದಟ್ಟಣೆಯ ಒತ್ತಡ ತಪ್ಪಿಸಲು ಚಾಮುಂಡಿಬೆಟ್ಟಕ್ಕೆ ಎಲ್ಲಾ ಮಾದರಿಯ ವಾಹನ ಪ್ರವೇಶ ನಿರ್ಬಂಧಿಸಬೇಕೆಂಬ ಪ್ರಸ್ತಾವನೆಗೆ ಜಿಲ್ಲಾ ಪರಿಶೀಲನಾ ಸಮಿತಿ ಸಮ್ಮತಿಸಿದ್ದು, ಪರ್ಯಾಯವಾಗಿ ಬೆಟ್ಟದ ತಪ್ಪಲಿನಿಂದ ವಾಹನ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಸರ್ಕಾರಿ ಜಾಗ ಹುಡುಕಿಕೊಡುವಂತೆ ರೆವಿನ್ಯೂ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಭಕ್ತರು, ಪ್ರವಾಸಿಗರು ಹಾಗೂ ಗಣ್ಯರಿಗೆ ಸರ್ಕಾರದಿಂದಲೇ ವಾಹನ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದ್ದು, ಅತೀ ಶೀಘ್ರ ಈ ಯೋಜನೆಗೆ ಚಾಲನೆ ನೀಡಲಾಗುವುದು.

–ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾಧಿಕಾರಿ

ಭೇರ್ಯ ರಾಮಕುಮಾರ್‌ಗೆ ಸ್ವಾಮಿ ವಿವೇಕಾನಂದ ಪ್ರಶಸ್ತಿ ಪ್ರದಾನ



ಪರಿಸರ ಪ್ರೇಮಿ ಡಾ.ಭೇರ್ಯ ರಾಮಕುಮಾರ್ ಅವರಿಗೆ ಬೆಂಗಳೂರಿನ ಚೈತನ್ಯ ಅಂತರರಾಷ್ಟ್ರೀಯ ಆರ್ಟ್ಸ್ ಅಕಾಡೆಮಿ ವತಿಯಿಂದ ಸ್ವಾಮಿ ವಿವೇಕಾನಂದ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಜ.7–ಮೈಸೂರಿನ ಹಿರಿಯ ಸಾಹಿತಿ, ಕನ್ನಡಪರ ಚಿಂತಕ ಹಾಗೂ ಪರಿಸರ ಪ್ರೇಮಿ ಡಾ.ಭೇರ್ಯ ರಾಮ ಕುಮಾರ್ ಅವರಿಗೆ ಬೆಂಗಳೂರಿನ ಚೈತನ್ಯ ಅಂತರರಾಷ್ಟ್ರೀಯ ಆರ್ಟ್ಸ್ ಅಕಾಡೆಮಿ ವತಿಯಿಂದ ಸ್ವಾಮಿ ವಿವೇಕಾನಂದ ರಾಜ್ಯಪ್ರಶಸ್ತಿಯನ್ನು ಬೆಂಗಳೂರಿನ ಕೆಂಪೇಗೌಡನಗರದ ಉದಯ ಭಾನು ಕಲಾ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಯಿತು.

ಲೇಖಕಿ, ಸಮಾಜ ಸೇವಕಿ ಡಾ.ಸೌಜನ್ಯ ಶರತ್‌ಚಂದ್ರ ಪ್ರಶಸ್ತಿ ಪ್ರದಾನ ಮಾಡಿದರು. ಹಿರಿಯ ಸಂಘಟಕ ನೀಲಕಂಠ ಅಡಿಗ, ಹಾಸನದ ಸಮಾಜ ಸೇವಕ ಡಾ.ಎಂ.ಸಿ.ರಾಜು, ಕೊಡಗಿನ ಕವಿ ಎಂ.ಡಿ. ಅಯ್ಯಪ್ಪ, ಆಧ್ಯಾತ್ಮಿಕ ಚಿಂತಕ ಮುದ್ದಪ್ಪ ಆರಾಧ್ಯ, ಚೈತನ್ಯ ಅಂತರ ರಾಷ್ಟ್ರೀಯ ಆಕಾಡೆಮಿ ಅಧ್ಯಕ್ಷೆ ಡಾ.ವಸುಧಾ ಶ್ರೀನಿವಾಸ್ ವೇದಿಕೆಯಲ್ಲಿ ಇದ್ದರು.

ಗ್ರಾಮಾಂತರ ಬುದ್ಧಿಜೀವಿಗಳ ಬಳಗದ ಅಧ್ಯಕ್ಷರಾಗಿ 354 ಸಾಹಿತ್ಯ ಕಾರ್ಯಕ್ರಮಗಳ ಸಂಘಟನೆ, ಉದಯೋನ್ಮುಖ ಬರಹಗಾರರ 303 ಸಾಹಿತ್ಯ ಕೃತಿಗಳ ಪ್ರಕಟಣೆ, ಸಾಮೂಹಿಕ ನೇತ್ರದಾನ ಕಾರ್ಯಕ್ರಮದ ಮೂಲಕ ನೇತ್ರದಾನ ಮಾಡಲು 8 ಸಾವಿರಕ್ಕೂ ಹೆಚ್ಚು ಜನರ ಮನ ಒಲಿಸುವಿಕೆ, 500ಕ್ಕೂ ಹೆಚ್ಚು ಶಾಲಾ ಕಾಲೇಜುಗಳಲ್ಲಿ ಪರಿಸರ ಸಂರಕ್ಷಣೆ ಕುರಿತು ಉಪನ್ಯಾಸ ಹಾಗೂ ಹತ್ತು ಸಾವಿರಕ್ಕೂ ಹೆಚ್ಚು ಸಸಿಗಳ ಉಚಿತ ವಿತರಣೆ ಈ ಸಾಧನೆಗಳನ್ನು ಪರಿಗಣಿಸಿ ಸ್ವಾಮಿ ವಿವೇಕಾನಂದ ಪ್ರಶಸ್ತಿ ನೀಡಿ ಇವರನ್ನು ಗೌರವಿಸಲಾಗಿದೆ.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ಜೆ.ಕೆ.ಟೈರ್ಸ್ ಕಾರ್ಮಿಕರ ಸಂಘದ ವತಿಯಿಂದ ಬಸವೇಶ್ವರ ಗೆಳೆಯರ ಬಳಗದ ಕ್ಯಾಲೆಂಡರ್ ಅನ್ನು ಸಿದ್ಧಗಂಗಾ ಕಿರಿಯ ಶ್ರೀಗಳು ಬಿಡುಗಡೆಗೊಳಿಸಿದರು.

ಜ.11, 12ರಂದು ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ

ಮೈಸೂರು,ಜ.7–ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವವು 49 ತಿಂಗಳ ಯಶಸ್ವಿ ಉತ್ಸವಗಳನ್ನು ಪೂರೈಸಿ 50ನೇ ತಿಂಗಳಿನ ಚಿನ್ನದ ಹಬ್ಬದ ಉತ್ಸವವನ್ನು ಜ.11 ಮತ್ತು 12ರಂದು ಕಲೆಮನೆ ಸಭಾಂಗಣದಲ್ಲಿ ಮಧ್ಯಾಹ್ನ 2:30ಕ್ಕೆ ವೈವಿಧ್ಯಮಯ ನೃತ್ಯ ಕಾರ್ಯಕ್ರಮಗಳು ಮತ್ತು ಹಲವಾರು ಕ್ಷೇತ್ರಗಳಲ್ಲಿ ಗಣನೀಯವಾಗಿ ಸೇವೆಗೈದಿರುವ ಮಹನೀಯರಿಗೆ "ಕಲೆಮನೆ ಕಲಾಶ್ರೀ" ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಂಡಿದೆ.

ಮೊದಲನೇ ದಿನದ ಕಾರ್ಯಕ್ರಮವನ್ನು ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. 2ನೇ ದಿನದ ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಲಿದ್ದಾರೆ. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೆ.ವಿ ಚೇತನ್ ಉಪಸ್ಥಿತರಿರಲಿದ್ದಾರೆ.

ಇದೇ ವೇಳೆ ಕಲೆಮನೆ ಕಲಾಶ್ರೀ ಪ್ರಶಸ್ತಿಯನ್ನು ಕಾ.ತ.ಚಿಕ್ಕಣ್ಣ (ಸಾಹಿತ್ಯ), ಗೊಲ್ಲಹಳ್ಳಿ ಶಿವಪ್ರಸಾದ್ (ಜಾನಪದ), ಗುರು ಪಳನಿಯಪ್ಪನ್ ಪಿಳ್ಳೈ (ನೃತ್ಯ), ಗುರು ಕರ್ನಾಟಕ ಕಲಾಶ್ರೀ ಸತ್ಯನಾರಾಯಣ ರಾಜು (ನೃತ್ಯ), ಪ್ರೊ.ಎಸ್.ಮಲ್ಲಣ್ಣ (ಸುಗಮ ಸಂಗೀತ), ಗುರು ಶ್ರೀಮತಿ ಮಂಜುಳಾ ವಿಶ್ವನಾಥ್ (ನೃತ್ಯ), ಗುರು ಶ್ರೀಮತಿ ಶ್ರದ್ಧಾ ಶಿವಪ್ರಕಾಶ್, (ನೃತ್ಯ), ಡಾ.ಸಿ.ಎಸ್ ದ್ವಾರಕಾನಾಥ್ (ಸಾಮಾಜಿಕ ಮತ್ತು ಪತ್ರಿಕೋದ್ಯಮ), ಡಾ.ಟಿ.ಅಮರನಾಥ್ (ವೈದ್ಯಕೀಯ), ರಂಗನಾಥ್ (ಪತ್ರಿಕೋದ್ಯಮ), ಡಾ.ಸಂಜಯ್ ಶಾಂತರಾಮ್ (ನೃತ್ಯ), ವಿದ್ವಾನ್ ಶ್ರೀ ಪಾರ್ಶ್ವನಾಥ್ (ನೃತ್ಯ) ಪ್ರದಾನ ಮಾಡಲಾಗುವುದು.

ಎರಡು ದಿನಗಳ ಉತ್ಸವಗಳಲ್ಲಿ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವಿದ್ಯಾರ್ಥಿಗಳಿಂದ ಭರತನಾಟ್ಯ ನೃತ್ಯ, ಗುರು ಶ್ರೀ ಪಳನಿಯಪ್ಪನ್ ಪಿಳ್ಳೈ ಮತ್ತು ಇವರ ಶಿಷ್ಯರಿಂದ ಭರತನಾಟ್ಯ ನೃತ್ಯ, ಗುರು ಶ್ರೀಮತಿ ಮಂಜುಳ ವಿಶ್ವನಾಥ್ ಮತ್ತು ಇವರ ಶಿಷ್ಯರಿಂದ ಭರತನಾಟ್ಯ ನೃತ್ಯ, ಗುರು ಶ್ರೀಮತಿ ಶ್ರದ್ಧಾ ಶಿವಪ್ರಕಾಶ್ ಇವರ ಶಿಷ್ಯರಿಂದ ಭರತನಾಟ್ಯ ನೃತ್ಯ, ಗುರು ಡಾ.ಸಂಜಯ್ ಶಾಂತರಾಮ್ ಮತ್ತು ಇವರ ಶಿಷ್ಯರಿಂದ ಭರತನಾಟ್ಯ ನೃತ್ಯ, ಗುರು ವಿದ್ವಾನ್ ಪಾರ್ಶ್ವನಾಥ್ ಅವರು ವೈವಿಧ್ಯಮಯ ನೃತ್ಯ ಕಾರ್ಯಕ್ರಮ ನಡೆಸಿಕೊಡುವರು.

ನಿಧನ


ಶ್ರೀಮತಿ ರತ್ನಮ್ಮ ಎಚ್.ಸಿ.ಬಸವಣ್ಣ



ಮೈಸೂರು, ಜ.7– ಮೈಸೂರಿನ ಸರಸ್ವತಿಪುರಂ ಬಡಾವಣೆ ನಿವಾಸಿ, ಜೆಎಸ್‌ಎಸ್ ಮಹಾವಿದ್ಯಾಪೀಠ ಸಂಸ್ಥಾಪಕ ಕಾರ್ಯದರ್ಶಿ ಹಾಗೂ ಮಹಾನಂದಿ ದಿನಪತ್ರಿಕೆ ಸಂಸ್ಥಾಪಕ ಸಂಪಾದಕರೂ ಆದ ದಿವಂಗತ ಎಚ್.ಸಿ. ಬಸವಣ್ಣ ಅವರ ಧರ್ಮಪತ್ನಿ ಶ್ರೀಮತಿ ರತ್ನಮ್ಮ ಎಚ್.ಸಿ.ಬಸವಣ್ಣ ಅವರು ಅಲ್ಪಕಾಲದ ಅಸ್ವಸ್ಥತೆಯಿಂದ ಮಂಗಳವಾರ ಮಧ್ಯಾಹ್ನ ನಿಧನರಾದರು.

ಮೃತರಿಗೆ 87 ವರ್ಷ ವಯಸ್ಸಾಗಿತ್ತು. ಮೃತರು ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್ ಮಾಲೀಕರಾದ ಹೆಚ್.ಬಿ. ಶಿವಕುಮಾರ್(ಬಾಬು), ಪುತ್ರಿ ಪ್ರಸೂತಿ ತಜ್ಞೆ ಡಾ.ಲೀಲಾವತಿ ಸೇರಿದಂತೆ ಆರು ಮಕ್ಕಳು, ಮಕ್ಕಳ ತಜ್ಞ ಡಾ.ಎಸ್.ಎಸ್. ರಾಜೇಶ್, ಜೆಎಸ್‌ಎಸ್ ನಿವೃತ್ತ ಪ್ರಾಧ್ಯಾಪಕ ಪ್ರೊ. ಸುಬ್ಬಪ್ಪ, ಜೆಸಿಇ ನಿವೃತ್ತ ಪ್ರೊ.ಸದಾಶಿವಮೂರ್ತಿ ಸೇರಿದಂತೆ ಐವರು ಅಳಿಯಂದಿರು, ಮೊಮ್ಮಕ್ಕಳು, ಸ್ನೇಹಿತರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ (ಬುಧವಾರ) ಮಧ್ಯಾಹ್ನ 12 ಗಂಟೆಗೆ ಮೈಸೂರು–ನಂಜನಗೂಡು ರಸ್ತೆಯ ಟೋಲ್ ಹತ್ತಿರವಿರುವ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿ.ಜಿ.ಸೋಂದೆ



ಮೈಸೂರು: ಮೈಸೂರಿನ ಬೃಂದಾವನ ಬಡಾವಣೆಯ 1ನೇ ಹಂತದ ನಿವಾಸಿ, ಸಿಎಫ್‌ಟಿಆರ್‌ಐನ ತೋಟಗಾರಿಕೆ ವಿಭಾಗದಲ್ಲಿ ಮುಖ್ಯಸ್ಥರಾಗಿದ್ದ ಡಿ.ಜಿ. ಸೋಂದೆ(86) ಅವರು ಜ.5ರ ಭಾನುವಾರ ಸಂಜೆ ನಿಧನರಾದರು. ಮೃತರಿಗೆ ಪತ್ನಿ ಮನೋರಮಾ ಸೋಂದೆ, ಪುತ್ರ ವಿನಯ್ ಸೋಂದೆ, ಪುತ್ರಿ ಅಪರ್ಣಾ, ಮೊಮ್ಮಕ್ಕಳು ಇದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಸಿದ್ದಪ್ಪ



ಮೈಸೂರು: ಮೈಸೂರಿನ ವಿನಾಯಕನಗರ(ಪಡುವಾರಹಳ್ಳಿ)ದ ಸಿದ್ದಪ್ಪ(65) ನಿಧನರಾದರು. ಇವರು ಮಕ್ಕಳಾದ ಎಸ್.ಶಂಕರ್, ಎಸ್.ನಾಗೇಶ್, ವಿಜಯಲಕ್ಷ್ಮೀ, ರತ್ನ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.


ಮರಿಸ್ವಾಮಪ್ಪ



ತಿ.ನರಸೀಪುರ: ತಾಲೂಕಿನ ಚನ್ನಬಸವಯ್ಯಹುಂಡಿ ನಿವಾಸಿ ಮರಿಸ್ವಾಮಪ್ಪ(80) ಅವರು ನಿಧನರಾದರು. ಇವರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಜಮೀನಿನಲ್ಲಿ ಅಂತ್ಯಸಂಸ್ಕಾರ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಚ್‌ಎಂಪಿವಿ ವೈರಸ್ ಬಗ್ಗೆ ಆತಂಕಪಡುವ ಅಗತ್ಯವಿಲ್ಲ

ಇದು ಮಾರಣಾಂತಿಕವಲ್ಲ, ಪರೀಕ್ಷೆ ಮಾಡುವ ಅಗತ್ಯವೂ ಇಲ್ಲ: ಸಿದ್ದರಾಮಯ್ಯ



ಬೆಂಗಳೂರು: ಎಚ್‌ಎಂಪಿವಿ ವೈರಸ್ ಬಗ್ಗೆ ಆತಂಕಪಡುವ ಅಗತ್ಯವಿಲ್ಲ. ಇದು ಮಾರಣಾಂತಿಕವಲ್ಲ. ಅಲ್ಲದೇ, ಪರೀಕ್ಷೆ ಮಾಡುವ ಅಗತ್ಯವು ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮಂಗಳವಾರ ಗೃಹ ಕಚೇರಿ ಕೃಷ್ಣಾದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಮುಖ ಕಾರ್ಯಕ್ರಮಗಳ ಕುರಿತು ಪ್ರಗತಿ ಪರಿಶೀಲನೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 11,182 ಕೋಟಿ ರೂ.ಅನುದಾನ ಒದಗಿಸಲಾಗಿದ್ದು, ಇದು ವರೆಗೆ 6593 ಕೋಟಿ ರೂ.ವೆಚ್ಚ ಮಾಡಲಾಗಿದೆ. ಅನುದಾನಕ್ಕೆ ಶೇ.58.96 ಪ್ರಗತಿ ಸಾಧಿಸಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ತಾಯಂದಿರ ಮರಣ ಅನುಪಾತ ದೇಶಕ್ಕೆ ಹೋಲಿಸಿದರೆ ಕಡಿಮೆಯಿದೆ. 2018–20ರ ಅವಧಿಯಲ್ಲಿ ರಾಜ್ಯದಲ್ಲಿ ಒಂದು ಲಕ್ಷಕ್ಕೆ 69 ಮರಣ ಸಂಭವಿಸುತ್ತಿದ್ದು, ದೇಶದ ಅನುಪಾತ 97 ಇದೆ. 2022–24ರ ಅವಧಿಯಲ್ಲಿ ರಾಜ್ಯದಲ್ಲಿ ಇದರ ಪ್ರಮಾಣ 55ಕ್ಕೆ ಇಳಿದಿದೆ. ತಾಯಂದಿರ ಮರಣವನ್ನು ಶೂನ್ಯಕ್ಕೆ ಇಳಿಸಲು ವ್ಯಾಪಕ ಅಭಿಯಾನ ಆರಂಭಿಸಬೇಕು. ತಾಯಂದಿರ ಮರಣ ತಡೆಗಟ್ಟಲು ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

ಹೆರಿಗೆ ಪ್ರಮಾಣಕ್ಕೆ ಅನುಗುಣವಾಗಿ ಆಸ್ಪತ್ರೆಗಳಲ್ಲಿ ಪ್ರಸೂತಿ ತಜ್ಞರು ಮತ್ತು ಅರವಳಿಕೆ ತಜ್ಞರನ್ನು ನೇಮಕ ಮಾಡಬೇಕು. ಇದಕ್ಕಾಗಿ ಕಡಿಮೆ ಹೆರಿಗೆ ಪ್ರಮಾಣವಿರುವ ಆಸ್ಪತ್ರೆಗಳ ವೈದ್ಯಾಧಿಕಾರಿಗಳನ್ನು ಪುನರ್ ನಿಯೋಜನೆ ಮಾಡಬೇಕು. ತಾಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯಾಧಿಕಾರಿಗಳ ಲಭ್ಯತೆಯನ್ನು ಖಾತ್ರಿಪಡಿಸಬೇಕು. ಔಷಧಿ ಖರೀದಿ ಪ್ರಕ್ರಿಯೆಯನ್ನು ಇನ್ನಷ್ಟು ಪಾರದರ್ಶಕಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿದ್ದರಾಮಯ್ಯ ತಿಳಿಸಿದರು.

ಒಟ್ಟು 3927 ಎಎನ್‌ಎಂ ಖಾಲಿ ಹುದ್ದೆಗಳ ಪೈಕಿ 1205 ಹಾಗೂ 2990 ಎಚ್‌ಐಒ ಖಾಲಿ ಹುದ್ದೆಗಳ ಪೈಕಿ 300 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಈಗಾಗಲೇ ಅನುಮೋದನೆ ನೀಡಿದೆ. ಅಗತ್ಯ ಸೇವೆಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿಳಂಬ ಮಾಡಬಾರದು. ಅಲ್ಲದೇ, ಹೆಣ್ಣು ಭ್ರೂಣ ಹತ್ಯೆ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಎಲ್ಲ ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ತಾಕೀತು ಮಾಡಿದರು.

ಆಸ್ಪತ್ರೆಗಳಲ್ಲಿ ಸ್ವಚ್ಛತೆ, ಅಗತ್ಯ ಮೂಲಸೌಕರ್ಯಗಳ ನಿರ್ವಹಣೆಗೆ ವ್ಯವಸ್ಥೆ ಮಾಡಬೇಕು. ನಗರ ಪ್ರದೇಶಗಳಲ್ಲಿ 817 ನಮ್ಮ ಕ್ಲಿನಿಕ್‌ಗಳನ್ನು ಮಂಜೂರು ಮಾಡಲಾಗಿದ್ದು, ಪ್ರಸಕ್ತ 512 ಕಾರ್ಯಾಚರಿಸುತ್ತಿವೆ. ಇವುಗಳನ್ನು ಇನ್ನಷ್ಟು ಬಲಪಡಿಸಲು ಕ್ರಮ ಕೈಗೊಳ್ಳಬೇಕು. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ ಚಿಕಿತ್ಸಾ ಪ್ಯಾಕೇಜ್ ಮೊತ್ತ ಹೆಚ್ಚಳ ಮಾಡುವ ಕುರಿತು ಪರಿಶೀಲನೆ ಮಾಡಬೇಕು ಎಂದು ಅವರು ಹೇಳಿದರು.

ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸಮಗ್ರ ಸುಧಾರಣೆಯಾಗಬೇಕು. ಸರಕಾರಿ ಆಸ್ಪತ್ರೆಗಳಲ್ಲಿ ಉತ್ತಮ ಚಿಕಿತ್ಸೆ ಖಾತ್ರಿಪಡಿಸಿದರೆ ಮಾತ್ರ ಜನರ ಖಾಸಗಿ ಆಸ್ಪತ್ರೆಗಳ ಅವಲಂಬನೆ ಕಡಿಮೆ ಮಾಡಬಹುದು ಎಂದು ಸಿದ್ದರಾಮಯ್ಯ ನುಡಿದರು.

ಸಭೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಿಎಸ್‌ವೈ ವಿರುದ್ಧದ ಪೋಕ್ಸೊ ಪ್ರಕರಣ: ವಿಚಾರಣೆ ಮುಂದೂಡಿಕೆ

ಬೆಂಗಳೂರು: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ವಿರುದ್ಧದ ದೂರನ್ನು ರದ್ದುಗೊಳಿಸಬೇಕು ಎಂದು ಕೋರಲಾಗಿರುವ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಇದೇ 10ಕ್ಕೆ ಮುಂದೂಡಿದೆ.

ನನ್ನ ವಿರುದ್ಧ ದಾಖಲಾಗಿರುವ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಪ್ರಕರಣ ರದ್ದುಪಡಿಸಬೇಕು ಎಂದು ಕೋರಿ ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರ ವಿಚಾರಣೆ ನಡೆಸಿದರು. ವಿಚಾರಣೆ ವೇಳೆ ಯಡಿಯೂರಪ್ಪ ಪರ ಹಿರಿಯ ವಕೀಲ ಸಿ.ವಿ.ನಾಗೇಶ್, ಸತ್ಯವನ್ನು ಬಯಲು ಮಾಡಲಿಕ್ಕಾಗಿ ತನಿಖೆ ನಡೆಸಲಾಗುತ್ತದೆ. ಆದರೆ, ತನಿಖೆ ಪಕ್ಷಪಾತಿಯಾಗಿರಬಾರದು. ನ್ಯಾಯಯುತವಾಗಿರಬೇಕು ಮತ್ತು ಕಾನೂನಿನ ಅನ್ವಯ ನಡೆಯಬೇಕು ಎಂದರು.

ದೂರಿಗೆ ಸಂಬಂಧಿಸಿದಂತೆ ಸಂಜ್ಞೇಯ ಅಪರಾಧ ಪರಿಗಣಿಸುವ ಸಂದರ್ಭದಲ್ಲಿ ವಿಚಾರಣಾ ನ್ಯಾಯಾಲಯವು ತನಿಖಾಧಿಕಾರಿಯ ಅಭಿಪ್ರಾಯವನ್ನು ಒಪ್ಪಲಾಗದು. ದೂರು ದಾಖಲಿಸುವುದಕ್ಕೂ ಮುನ್ನ ದೂರುದಾರರ...

ಓದು, ಗ್ರಂಥಗಳ ಅಧ್ಯಯನದಿಂದ ಸ್ವ ಅವಲೋಕನವಾಗಬೇಕು

ವಿಶೇಷ ಉಪನ್ಯಾಸದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಲಕ್ಷ್ಮೀಶ ತೋಳ್ಪಾಡಿ ಅಭಿಮತ



ವಿಶೇಷ ಉಪನ್ಯಾಸದಲ್ಲಿ ಚಿಂತಕ, ವಿದ್ವಾಂಸ ಲಕ್ಷ್ಮೀಶ ತೋಳ್ಪಾಡಿ ಮಾತನಾಡಿದರು.

ಮೈಸೂರು, ಜ. 7– ಸಮಾಜವನ್ನು ಸರಿಯಾಗಿ ಅರ್ಥೈಸಿಕೊಳ್ಳಲು ನಮ್ಮ ಒಳಗಣ್ಣಿಂದ ಪರಂಪರೆಯ ಪ್ರಜ್ಞೆಯನ್ನು ಅರಿಯಬೇಕು. ಪ್ರತಿಯೊಬ್ಬರೂ ವ್ಯವಸ್ಥಿತವಾಗಿ ಚಿಂತಿಸುವುದನ್ನು ರೂಢಿಸಿಕೊಳ್ಳಬೇಕು. ಓದು, ಗ್ರಂಥಗಳ ಅಧ್ಯಯನದಿಂದ ಸ್ವ ಅವಲೋಕನವಾಗಬೇಕು ಎಂದು ಚಿಂತಕರು, ವಿದ್ವಾಂಸರು ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಲಕ್ಷ್ಮೀಶ ತೋಳ್ಪಾಡಿ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನಲ್ಲಿ ಜರುಗಿದ ವಿಶೇಷ ಉಪನ್ಯಾಸದಲ್ಲಿ 'ಜೀವನ ಮೌಲ್ಯಗಳು' ವಿಷಯವಾಗಿ ಅವರು ಮಾತನಾಡಿದರು.


ಲೋಕದಲ್ಲಿ ಸಮರ್ಥವಾಗಿ ಜೀವನ ನಿರ್ವಹಿಸಲು ಶಕ್ತಿ ಸಾಮರ್ಥ್ಯಗಳ ಜೊತೆಗೆ ವಿಶಾಲವಾದ ಆಲೋಚನಾ ಮನೋಭಾವವಿರಬೇಕು. ಯಾರೋ ನಮ್ಮನ್ನು ಗುರುತಿಸಬೇಕೆಂಬ ಹೆಚ್ಚುಗಾರಿಕೆಯಿಂದ, ಹಂಬಲದಿಂದ ನಾವು ಬದುಕಬಾರದು. ಇದರಿಂದ ನಾವು ಮನಃಶಾಂತಿಯನ್ನು ಕಳೆದುಕೊಳ್ಳಬೇಕಾಗಬಹುದು. ಇಂದು ನಾವು ರೂಪಿಸಿಕೊಂಡಿರುವ ಸಾಮಾಜಿಕ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ಇರುವಂತೆ ಉಳಿಸಿಕೊಳ್ಳಲು ಹೋರಾಡುವವರು ಕೆಲವು ನಿಯಂತ್ರಣಗಳಿಂದ ಮುಕ್ತರಾಗಿರಬೇಕು. ನಮ್ಮ ಆಲೋಚನೆಗಳು ನಮ್ಮ ಭೌತಿಕ ಸಾಮರ್ಥ್ಯದ ಮೇಲೆ ಪ್ರಭಾವ ಬೀರುತ್ತವೆ. ಕೇವಲ ಪ್ರತಿಷ್ಠೆಯನ್ನು ಹಂಬಲಿಸಿದರೆ ನಮ್ಮ ಸಾಮರ್ಥ್ಯದ ಮಟ್ಟ ಕಡಿಮೆಯಾಗುತ್ತದೆ. ಇಂದು ಕೆಡುಕನ್ನುಂಟುಮಾಡುವ ಜನರ ಕೈಯಲ್ಲಿ ವಿಜ್ಞಾನ ಹಿಡಿತಕ್ಕೆ ಸಿಕ್ಕಿರುವುದು ಅಪಾಯವನ್ನು ಮುಂದೆ ತಂದೊಡ್ಡಬಹುದು. ನಾವು ಪಡೆಯುತ್ತಿರುವ ಶಿಕ್ಷಣ ನಮ್ಮನ್ನು, ನಾವು ಸ್ವ ಅಧ್ಯಯನ ಮಾಡಿಕೊಳ್ಳುವಂತೆ ಪ್ರೇರೇಪಿಸಬೇಕು ಎಂದು ನುಡಿದರು. ಮುದ್ದುರಾಮ ಖ್ಯಾತಿಯ ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ, ಜೆಎಸ್‌ಎಸ್ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ.ಸಾಂಬಶಿವಯ್ಯ ಉಪಸ್ಥಿತರಿದ್ದರು.

ಡಾಲ್ಫಿನ್‌ನ 25ನೇ ವಾರ್ಷಿಕೋತ್ಸವ: ಮೆಗಾ ಲಕ್ಕಿ ಡ್ರಾ ಕೂಪನ್

ಮೈಸೂರು, ಜ.7(ಜಿಎ)–ಮೈಸೂರಿನ ಹೆಸರಾಂತ ಡಾಲ್ಫಿನ್ ಬೇಕ್ಸ್ ಎನ್ ಐಸ್‌ಕ್ರೀಮ್ ಬೇಕರಿಯು ತನ್ನ 25ನೇ ವರ್ಷದ ಸಂಭ್ರಮಾಚರಣೆ ಅಂಗವಾಗಿ ಮೆಗಾ ಲಕ್ಕಿ ಡ್ರಾ ಕೂಪನ್ ವಿತರಿಸುತ್ತಿದೆ. 25ನೇ ವರ್ಷದ ಸಂಭ್ರಮಾಚರಣೆಯ ಹಿನ್ನೆಲೆಯಲ್ಲಿ 25 ದಿನಗಳು 25 ಬಹುಮಾನಗಳನ್ನು ಮೆಗಾ ಲಕ್ಕಿ ಡ್ರಾ ಮೂಲಕ ಹಮ್ಮಿಕೊಂಡಿದ್ದು, ಡಿ.20ರಿಂದ ಜ.13ರವರೆಗೆ ಕೂಪನ್ ಅನ್ನು 500 ರೂ.ಗಳ ಮೇಲ್ಪಟ್ಟ ಡಾಲ್ಫಿನ್ ಪದಾರ್ಥಗಳ ಖರೀದಿಗೆ ನೀಡುತ್ತಿದ್ದು, ಇದರ ಸದುಪಯೋಗವನ್ನು ಎಲ್ಲಾ ಗ್ರಾಹಕರು ಪಡೆದುಕೊಳ್ಳಬಹುದಾಗಿದೆ.

ಜ.20ರಂದು ಸಂಜೆ 5 ಗಂಟೆಗೆ ಸಿಟಿ ಬಸ್ ನಿಲ್ದಾಣದ ಮುಂಭಾಗವಿರುವ ಡಬಲ್ ಡೆಕ್ಕರ್ ಬಸ್ ಬ್ರಾಂಚ್‌ನಲ್ಲಿ ಲಕ್ಕಿ ಡ್ರಾ ನಡೆಯಲಿದ್ದು, ಜ.26ರಂದು ಬಹುಮಾನವನ್ನು ವಿತರಿಸಲಾಗುತ್ತದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಮ್ಯಾನೇಜರ್ ಎಂ.ದರ್ಶನ್ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.01.2025 ಬುಧವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ನೆಗಡಿ, ಕೆಮ್ಮು ಮತ್ತು ಅಸ್ತಮಾಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಕಾಯಿಲೆ, ಸಂಧಿವಾತ, ಮಂಡಿ ನೋವು, ಕೀಲು ನೋವು ಮತ್ತು ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಅಚೀವರ್ಸ್ ಪದವಿಪೂರ್ವ ಕಾಲೇಜು :** ಮೈಸೂರು ದಕ್ಷಿಣ ವಲಯ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರಿಗೆ ಕಾರ್ಯಾಗಾರ, ಅಧ್ಯಕ್ಷತೆ : ಜ್ಞಾನರಶ್ಮಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಪಿ. ಪುಟ್ಟಸ್ವಾಮಿಗೌಡ, ಉದ್ಘಾಟನೆ : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಟಿ. ಜವರೇಗೌಡ, ಮುಖ್ಯ ಅತಿಥಿಗಳು: ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ. ವೆಂಕಟೇಶ್, ಬಿಇಓ ಸಿ.ಎನ್.ರಾಜು, ಬಿ.ಎ. ಸೋಮಶೇಖರ್, ಎಂ.ಬಿ. ಶ್ರೀಕಂಠಸ್ವಾಮಿ, ಪಿ. ಯೋಗಾನಂದ, ಡಾ. ಬಿ.ಸಿ. ವಿಜಯ್ ಕುಮಾರ್, ಸುರೇಶ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಸ್ಟಾರ್ಟ್ ಅಪ್ ಮತ್ತು ಇನ್‌ಕ್ಯೂಬೇಷನ್ ಸೆಂಟರ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಸ್ಟಾರ್ಟ್ ಅಪ್ ಮೆಂಟರ್ ಎನ್. ರವಿಶಂಕರ್, ಅಧ್ಯಕ್ಷತೆ : ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಬಿ.ವಿ. ಸಾಂಬಶಿವಯ್ಯ, ಅತಿಥಿಗಳು : ಅನಿತಾ ಸದಾನಂದ, ಪ್ರಿನ್ಸಿಪಾಲ್ ಡಾ.ಎಂ. ಪ್ರಭು, ಸ್ಥಳ: ಗೋಲ್ಡನ್ ಜ್ಯೂಬಿಲಿ ಹಾಲ್, ಬೆಳಗ್ಗೆ 10ಕ್ಕೆ.

■ **ರಾಮಕೃಷ್ಣ ವಿದ್ಯಾಕೇಂದ್ರ :** ಮಕ್ಕಳ ಸಂತೆ, ಅಧ್ಯಕ್ಷತೆ : ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು : ಬಿಇಓ ಸಿ.ಎನ್. ರಾಜು, ಪರಿಸರವಾದಿ ಸ್ವಾಮಿ ಆನಂದ್, ಪ್ರೊ. ಜಿ. ಚಂದ್ರಶೇಖರ್, ಜಿ.ಎನ್. ವಿಶ್ವನಾಥ್, ಶ್ರೀಮತಿ ವೀಣಾ ಕೆ. ಹೆಗಡೆ, ಸ್ಥಳ: ಶಾಲೆ ಆವರಣ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಕ್ಯಾಶ್ಯೂ ಮ್ಯಾನ್ಯೂಫ್ಯಾಕ್ಚರರ್ಸ್ ಅಸೋಸಿಯೇಷನ್:** ಗೋಡಂಬಿ ಪ್ರಚಾರ ಮತ್ತು ಜಾಗೃತಿ ಕಾರ್ಯಕ್ರಮ, ಉದ್ಘಾಟನೆ: ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಅಧ್ಯಕ್ಷತೆ: ಅಸೋಸಿಯೇಷನ್ ಅಧ್ಯಕ್ಷ ಎಸ್.ಅನಂತ ಕೃಷ್ಣರಾವ್, ಅತಿಥಿಗಳು: ಪಾಂಡುರಂಗ ಸತೀಶ್, ಪಿ. ಅಮಿತ್ ಪೈ, ಸ್ಥಳ: ಹೋಟೆಲ್ ಓನರ್ಸ್ ಅಸೋಸಿಯೇಷನ್, ಕುತ್ತೆತ್ತೂರು ಸೀತಾರಾಮ ಭವನ, ಬೆಳಗ್ಗೆ 11ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ, ಅಭಿನಂದನಾ ನುಡಿ : ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕ ಪ್ರೊ. ಮೈಸೂರು ಕೃಷ್ಣಮೂರ್ತಿ, ಪ್ರಶಸ್ತಿ ಪುರಸ್ಕೃತರು : ಸಾಹಿತಿ ಡಾ. ಎಂ.ಎಸ್. ವೇದಾ, ಸಮಾಜ ಸೇವಕ ಎಸ್. ಮಹಾದೇವಯ್ಯ, ಉಪಸ್ಥಿತರು : ಡಾ. ಶಕುಂತಲ ಜಯದೇವ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 11ಕ್ಕೆ.

■ **ನವದೆಹಲಿಯ ಕೇಂದ್ರ ಜವಳಿ ಮಂತ್ರಾಲಯದ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ :** 'ಸಿಲ್ಕ್ ಫ್ಯಾಬ್' ರೇಷ್ಮೆ ಸೀರೆಗಳು ಮತ್ತು ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮೇಳ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 11 ರಿಂದ ರಾತ್ರಿ 8.30 ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ರಂಗ ದಿಗ್ಗಜರು' ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ಲೇಖನ–ಎಸ್. ರಾಮನಾಥ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಅಂಬಯ್ಯನುಲಿ, ದೀಪಿಕಾ ಪಾಂಡುರಂಗಿ, ಎಂ.ಎ. ಶೋಭಾ, ವ್ಯಾಖ್ಯಾನ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ನಂದನ–ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 'ಸಂತಾನಹೀನತೆಯನ್ನು ಗೆದ್ದ ಭರವಸೆಯ ಕಥೆಗಳು' ಕುರಿತು ತಿಳಿಸಿಕೊಡಲಿದ್ದಾರೆ ಗೈನಕಾಲಜಿಸ್ಟ್ ಮತ್ತು ಫರ್ಟಿಲಿಟಿ ಸ್ಪೆಷಲಿಸ್ಟ್ ಡಾ. ಮಾಧುರಿ. ಎನ್., ಪ್ರಾಯೋಜಕರು : ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ ಕುವೆಂಪುನಗರ, ಮೈಸೂರು ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಹರಿಪ್ರಸಾದ್ ಚೌರಾಸಿಯಾ–ಕೊಳಲು ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕೆ.ಪಿ. ಉಪಾಧ್ಯ–ಕೊಳಲು ವಾದನ, 4.00 ಮಹಿಳಾರಂಗ, 4.45 ಹಿಂದಿ ಪಾಠ–ಡಾ. ಸ್ಮಿತಾ ಚಿಪ್ಲೂಣ್‌ಕರ್, 6.50 ಕೃಷಿರಂಗ: ಮೇವು, ಮೆಲುಕು– ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ. ಮೇವಿನ ಬೆಳೆಗಳ ಸುಧಾರಿತ ಬೀಜೋತ್ಪಾದನ ತಾಂತ್ರಿಕತೆಗಳು. ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಬೀಜೋತ್ಪಾದನಾ ತಜ್ಞರಾದ ಡಾ. ಎ.ಬಿ. ನಾರಾಯಣರೆಡ್ಡಿ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

■ **ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ :** ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನೋತ್ಸವ, ಉದ್ಘಾಟನೆ : ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ. ಚಿದಾನಂದಗೌಡ, ಕುವೆಂಪು ಸಭಾಂಗಣ ನಾಮಫಲಕ ಅನಾವರಣ : ರಾಷ್ಟ್ರಕವಿ ಕುವೆಂಪು ಅವರ ಪುತ್ರಿ ಶ್ರೀಮತಿ ತಾರಿಣಿ ಕೆ. ಚಿದಾನಂದಗೌಡ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ವಿದ್ವಾಂಸ ಡಾ. ಗುರುಪಾದ ಹೆಗಡೆ, ಪ್ರೊ. ಎಂ. ನಂಜಯ್ಯ ಹೊಂಗನೂರು, ಸ್ಥಳ: ಪ್ರಸಾರಾಂಗ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಆಯುಷ್ ನಿರ್ದೇಶನಾಲಯ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮತ್ತು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ :** ವಿಶ್ವ ಧ್ಯಾನ ದಿನ ಮತ್ತು ರಾಷ್ಟ್ರೀಯ ಯುವ ದಿನದ ಪ್ರಯುಕ್ತ ಸುವರ್ಣ ಧ್ಯಾನ ಯುವ ಮಹೋತ್ಸವ ಮತ್ತು ಸುವರ್ಣ ಕರ್ನಾಟಕ ಆಯುಷ್4ಯು ಕನ್ನಡ ವೈಜ್ಞಾನಿಕ ಸಂಚಿಕೆ ಲೋಕಾರ್ಪಣೆ, ಸಾನ್ನಿಧ್ಯ : ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಶ್ರೀಯುಕ್ತೇಶಾನಂದಜಿ ಮಹಾರಾಜ್, ಉದ್ಘಾಟನೆ: ಆರ್ಕಧಾಮ ಸಂಸ್ಥಾಪಕ ಶ್ರೀನಿವಾಸ ಅರ್ಕ ಗುರೂಜಿ, ಅಧ್ಯಕ್ಷತೆ: ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಪ್ರಾಧ್ಯಾಪಕ ಡಾ. ಕೆ.ಎಸ್. ಸದಾನಂದ, ಮುಖ್ಯ ಅತಿಥಿಗಳು : ಯೋಗ ಫೆಡರೇಷನ್‌ನ ಶ್ರೀಹರಿ, ಡಾ. ರಾಧಾಕೃಷ್ಣ ರಾಮರಾವ್, ಡಾ. ಮೈತ್ರಿ ಆರ್.ಸಿ., ಡಾ. ಲಕ್ಷ್ಮೀನಾರಾಯಣ ಶೆಣೈ, ಸ್ಥಳ: ಆಡಿಟೋರಿಯಂ, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮಧ್ಯಾಹ್ನ 2ಕ್ಕೆ.

■ **ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್ :** ವಿವೇಕ ಕುಟುಂಬಕಂ, ವಾರ್ಷಿಕೋತ್ಸವ ಸಮಾರಂಭ, ಸಾನ್ನಿಧ್ಯ: ಶ್ರೀ ರಾಮಕೃಷ್ಣ ಶ್ರದ್ಧಾಶ್ರಮದ ಅಧ್ಯಕ್ಷ ಸ್ವಾಮಿ ಪರಹಿತಾನಂದ ಮಹಾರಾಜ್, ಮುಖ್ಯ ಅತಿಥಿಗಳು: ಡಾ.ಎನ್.ಸೋಮೇಶ್ವರ್, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ದೇಸಿರಂಗ ರಂಗೋತ್ಸವದ ಸಮಾರೋಪ ಸಮಾರಂಭ, ಸಮಾರೋಪ ನುಡಿ: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಮಾಣ ಪತ್ರ ವಿತರಣೆ: ಹಿರಿಯ ರಂಗಕರ್ಮಿ ಕೆ.ಜೆ.ನಾರಾಯಣ ಶೆಟ್ಟಿ, ಉಪಸ್ಥಿತರು: **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್** ಉಪಾಧ್ಯಕ್ಷ ಕುಮಾರಸ್ವಾಮಿ, ಕಾರ್ಯದರ್ಶಿ ಡಾ.ಬಿ.ಎಸ್.ದಿನಮಣಿ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6ಕ್ಕೆ

■ **ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್, ಮೈಸೂರು ಬುಕ್ ಕ್ಲಬ್ಸ್ :** ಮರಣದ ಕಡೆಗೆ ಒಂದು ಪ್ರಯಾಣ, ನಾವೇಕೆ ಸಾಯುತ್ತೇವೆ ಪುಸ್ತಕ ಕುರಿತು ಚರ್ಚೆ, ವಯಸ್ಸಾದ ಮತ್ತು ದೀರ್ಘಾಯುಷ್ಯದ ಹೊಸ ವಿಜ್ಞಾನ ನೊಬೆಲ್ ಪ್ರಶಸ್ತಿ ವಿಜೇತ ಮಾಲಿಕ್ಯೂಲರ್ ಜೀವಶಾಸ್ತ್ರಜ್ಞ ಮತ್ತು ಲೇಖಕ ವೆಂಕಿ ರಾಮಕೃಷ್ಣ ಅವರು ಪ್ರೊ. ಸಿ. ನಾಗಣ್ಣ ಅವರೊಂದಿಗೆ ಸಂವಾದ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಸಂಜೆ 6ಕ್ಕೆ

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ.ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

ಮೈಸೂರು ಮಿತ್ರ

ಬುಧವಾರ 8 ಜನವರಿ 2025

ಜ.14ರಿಂದ 19ರವರೆಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ



ಕನ್ನಡವೂ ಸೇರಿದಂತೆ ವಿವಿಧ ಭಾಷೆಯ 22 ಸದಭಿರುಚಿಯ ನಾಟಕ ಪ್ರದರ್ಶನ

- 'ಬಿಡುಗಡೆ; ಸಾಮಾಜಿಕ ನ್ಯಾಯ ಚಳವಳಿಗಳು ಮತ್ತು ರಂಗಭೂಮಿ' ಆಶಯ ಶೀರ್ಷಿಕೆಯಡಿ ನಾಟಕೋತ್ಸವ; ಬಾಲಿವುಡ್ ನಟ ಅತುಲ್ ಕುಲಕರ್ಣಿ ಚಾಲನೆ
- ಎರಡು ದಿನ 8 ಔಚಿತ್ಯಪೂರ್ಣ ಗೋಷ್ಠಿಗಳು; ತಮಿಳು ರಂಗಭೂಮಿ ಕಲಾವಿದೆ ರೇವತಿ ಉದ್ಘಾಟನೆ
- 16 ಚಲನಚಿತ್ರ ಪ್ರದರ್ಶನ; ಎರಡು ದಿನ ಮಕ್ಕಳ ಚಲನ ಚಿತ್ರೋತ್ಸವ

ಮೈಸೂರು, ಜ.7 (ಎಂಟಿವೈ)– ಮೈಸೂರಿನ ರಂಗಾಯಣದ ಆವರಣದಲ್ಲಿ ಜ.14ರಿಂದ 19ರವರೆಗೆ ಪ್ರತಿಷ್ಠಿತ 'ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ –2025' ನಡೆಯಲಿದ್ದು, ಕನ್ನಡ ಸೇರಿದಂತೆ ವಿವಿಧ ಭಾಷೆಗಳ ಸದಭಿರುಚಿಯ 22 ನಾಟಕ ಪ್ರದರ್ಶನದ ಜೊತೆಗೆ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.

ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ಮಂಗಳವಾರ ಬಹುರೂಪಿ ನಾಟಕೋತ್ಸವ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಈ ಸಾಲಿನ ಪ್ರತಿಷ್ಠಿತ 'ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ'ವನ್ನು 'ಬಿಡುಗಡೆ; ಸಾಮಾಜಿಕ ನ್ಯಾಯ– ಚಳವಳಿಗಳು ಮತ್ತು ರಂಗಭೂಮಿ' ಆಶಯದ ಶೀರ್ಷಿಕೆಯೊಂದಿಗೆ ಆಯೋಜಿಸಲಾಗಿದೆ. ಈ ರಂಗ ಉತ್ಸವದಲ್ಲಿ ದೇಶದ ಬೇರೆ ಪ್ರದೇಶಗಳ, ಬೇರೆ ಭಾಷೆಗಳ ಮಹತ್ವದ ನಾಟಕ, ಕನ್ನಡದ ಸಮಕಾಲೀನ ಸ್ಪಂದನೆಯ ನಾಟಕ, ಕನ್ನಡದ ಸೋದರ ಭಾಷೆಯ ನಾಟಕಗಳೂ ಪ್ರದರ್ಶನಗೊಳ್ಳಲಿವೆ. ಒಟ್ಟು 22 ನಾಟಕಗಳು ಪ್ರದರ್ಶನಗೊಳ್ಳಲಿವೆ. ತೆಲಂಗಾಣ, ಮುಂಬೈ, ಪಾಂಡಿಚೇರಿ, ಮಧ್ಯಪ್ರದೇಶ, ಕೇರಳ, ಅಸ್ಸಾಂ ಸೇರಿದಂತೆ ರಾಜ್ಯಗಳ 7 ನಾಟಕಗಳು, ಕನ್ನಡದ ಭಾಷೆಯ 13, ಇಂಗ್ಲಿಷ್ ಭಾಷೆಯ 2 ನಾಟಕಗಳು ಪ್ರದರ್ಶನಗೊಳ್ಳಲಿವೆ. ಭೂಮಿಗೀತ, ವನರಂಗ, ಕಲಾಮಂದಿರ, ಕಿರುರಂಗಮಂದಿರದಲ್ಲಿ ನಾಟಕಗಳ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಬಹುರೂಪಿ ನಾಟಕೋತ್ಸವವನ್ನು ಜ.14ರಂದು ಸಂಜೆ 5.30ಕ್ಕೆ ರಂಗಕರ್ಮಿ, ಬಾಲಿವುಡ್ ನಟ ಅತುಲ್ ಕುಲಕರ್ಣಿ ಉದ್ಘಾಟಿಸಲಿದ್ದಾರೆ. ಪ್ರತಿ ವರ್ಷದಂತೆ ಈ ಬಾರಿಯೂ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಜ.18ರಂದು ಬೆಳಗ್ಗೆ 10ಕ್ಕೆ ವಿಚಾರ ಸಂಕಿರಣವನ್ನು ಕನ್ನಡ ಮತ್ತು ತಮಿಳು ರಂಗಭೂಮಿ ಕಲಾವಿದೆ ಎ.ರೇವತಿ ಉದ್ಘಾಟಿಸಲಿದ್ದಾರೆ. ಎರಡು ದಿನ 8 ಗೋಷ್ಠಿಗಳಲ್ಲಿ ನಾಡಿನ ಹೆಸರಾಂತ ವಿದ್ವಾಂಸರು ತಮ್ಮ ವಿಚಾರ ಮಂಡಿಸಲಿದ್ದಾರೆ ಎಂದು ತಿಳಿಸಿದರು. ಬಹುರೂಪಿಯಲ್ಲಿ ಈ ಬಾರಿ ಇದೇ ಮೊದಲ ಬಾರಿಗೆ 'ಮಕ್ಕಳ ಬಹುರೂಪಿ' ಏರ್ಪಡಿಸಲಾಗಿದೆ. ಕಲಾಮಂದಿರದಲ್ಲಿ ಜ.15ರಂದು ಸಂಜೆ 6ಕ್ಕೆ ಇದಕ್ಕೆ ಬಹುಭಾಷಾ ನಟ ಪ್ರಕಾಶ ರೈ ಮಕ್ಕಳ ಬಹುರೂಪಿಗೆ ಚಾಲನೆ ನೀಡಲಿದ್ದಾರೆ. ಇದರಲ್ಲಿ ಮಕ್ಕಳಿಗೆ ಸಂಬಂಧಿಸಿದ 6 ನಾಟಕ, 9 ಚಲನಚಿತ್ರಗಳು ಪ್ರದರ್ಶನವಾಗಲಿವೆ ಎಂದು ತಿಳಿಸಿದರು. ಬಹುರೂಪಿ ರಾಷ್ಟ್ರೀಯ ಚಲನಚಿತ್ರೋತ್ಸವ ಶ್ರೀರಂಗ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ. ಜ.14ರಿಂದ 19ರವರೆಗೆ ದಿನಕ್ಕೆ ಮೂರರಂತೆ 16 ಚಲನಚಿತ್ರಗಳ ಪ್ರದರ್ಶನ ಆಯೋಜಿಸಲಾಗಿದೆ. ಅದರಲ್ಲಿ ಜ.18 ಮತ್ತು 19ರಂದು ಮಕ್ಕಳ ಚಲನಚಿತ್ರೋತ್ಸವ ನಡೆಯಲಿದೆ. ಬಹುರೂಪಿಯಲ್ಲಿ ಈ ಬಾರಿ ಯಕ್ಷಗಾನ ಪ್ರಸಂಗವು ಇರಲಿದೆ. ಎಂದಿನಂತೆ ಕಿಂದರಜೋಗಿ ಆವರಣದಲ್ಲಿ ವಿವಿಧ ಜಿಲ್ಲೆಗಳ ಜಾನಪದ ಕಲಾ ತಂಡಗಳಿಂದ ಜಾನಪದ ಕಲೆಗಳ ಪ್ರದರ್ಶನ ನಡೆಯಲಿದೆ ಎಂದರು.

ರಂಗಾಯಣದ ಆವರಣದಲ್ಲಿ ಪುಸ್ತಕ ಮೇಳ, ಕರಕುಶಲಮೇಳ, ಚಿತ್ರಕಲಾ ಪ್ರದರ್ಶನ, ಲಂಕೇಶ್ ಕಲಾ ಗ್ಯಾಲರಿಯಲ್ಲಿ ಮೈಸೂರು ಶೈಲಿಯ ಚಿತ್ರಕಲೆಗಳು, ಕಲಾಮಂದಿರದ ಸುಚಿತ್ರ ಕಲಾಗ್ಯಾಲರಿಯಲ್ಲಿ ವಾಸ್ತವಿಕ ಚಿತ್ರಕಲಾ ಕೃತಿಗಳ ಪ್ರದರ್ಶನ ಇರಲಿದೆ. ಬಹುರೂಪಿಯ ನಾಟಕದ ಟಿಕೆಟ್ ದರ 100 ರೂ. ನಿಗದಿಪಡಿಸಲಾಗಿದೆ. 'ಮಕ್ಕಳ ಬಹುರೂಪಿ'ಯಲ್ಲಿ ಮಕ್ಕಳಿಗೆ 50 ರೂ. ಟಿಕೆಟ್ ಇರಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ರಂಗ ಸಮಾಜದ ಸದಸ್ಯ ಸುರೇಶ್ ಬಾಬು ಹಾಗೂ ರಂಗಾಯಣದ ಹಿರಿಯ ಕಲಾವಿದರು ಉಪಸ್ಥಿತರಿದ್ದರು.



ಮೈಸೂರಿನ ರಂಗಾಯಣದ ರಂಗಚಾವಡಿಯಲ್ಲಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಪೋಸ್ಟರ್ ಅನ್ನು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಹಾಗೂ ರಂಗಾಯಣದ ಹಿರಿಯ ಕಲಾವಿದರು ಬಿಡುಗಡೆ ಮಾಡಿದರು.

ಭೂಮಿಗೀತದಲ್ಲಿ ಜ.14ರಿಂದ 19ರವರೆಗೆ ಪ್ರತಿದಿನ ಸಂಜೆ 6.30ಕ್ಕೆ ನಾಟಕ

ಜ.14ರಂದು ಸಂಜೆ 6.30ಕ್ಕೆ ಕಾಣೆ ಆದವರು (ಕನ್ನಡ) ತಂಡ: ಹಿರಿಯ ಕಲಾವಿದರು, ರಂಗಾಯಣ ರೆಪರ್ಟರಿ, ಮೈಸೂರು.
ಜ.15ರಂದು ಮೆಘ್ಞೋಕ್ (ಬಹುಭಾಷಾ) ತಂಡ: ಮೆಘ್ಞೋಕ್ ತಂಡ, ಮುಂಬೈ
ಜ.16ರಂದು ಊರ್ಮಿಳಾ(ಇಂಗ್ಲಿಷ್), ತಂಡ: ಆದಿಶಕ್ತಿ ಥಿಯೇಟರ್, ಪಾಂಡಿಚೇರಿ.
ಜ.17 ಮುರ್ದಾ ಘರ್ (ಹಿಂದಿ), ತಂಡ: ಅಂಕೂರ್ ರಂಗಮಂಚ್.
ಜ.18ರಂದು ದಶಾನನ ಸ್ವಪ್ನಸಿದ್ಧಿ(ಕನ್ನಡ). ತಂಡ: ಭಳೀರೇ ವಿಚಿತ್ರಮ್, ಸಾಗರ.
ಜ.19ರಂದು ಊಂಚಾಯಿ (ಹಿಂದಿ). ತಂಡ: ಸೀಗಲ್ ಥಿಯೇಟರ್, ಅಸ್ಸಾಂ.

ಕಿರು ರಂಗಮಂದಿರದಲ್ಲಿ ಸಂಜೆ 7 ಗಂಟೆಗೆ

ಜ.14ರಂದು ಪಾಕುದೂರಾಳ್ಳು (ತೆಲುಗು). ತಂಡ: ನಿಭಾ ಥಿಯೇಟರ್ ಎನ್ಸೆಂಬಲ್, ಹೈದರಾಬಾದ್, ತೆಲಂಗಾಣ.
ಜ.15ರಂದು ಧರ್ಮನಟಿ (ಕನ್ನಡ). ತಂಡ: ರಂಗರಥ ಟ್ರಸ್ಟ್, ಬೆಂಗಳೂರು.
ಜ.16ರಂದು ನಡಪಾವಾಡೈ (ತಮಿಳು). ತಂಡ: ವೆಲಿಪ್ಪಡೈ ಥಿಯೇಟರ್ ಮೂವ್‌ಮೆಂಟ್, ಪಾಂಡಿಚೇರಿ.
ಜ.17ರಂದು ಅನಾಮಿಕನ ಸಾವು (ಕನ್ನಡ). ತಂಡ: ಸ್ಪಿನ್ನಿಂಗ್ ಟ್ರೀ ಥಿಯೇಟರ್, ವಿಜಯಪುರ.
ಜ.18ರಂದು ತಮಾಷಾ (ಮಲಯಾಳಂ). ತಂಡ: ಕ್ಯಾಲಿಕಟ್ ಯೂನಿವರ್ಸಿಟಿ ಲಿಟಲ್ ಥಿಯೇಟರ್, ತ್ರಿಶೂರ್, ಕೇರಳ.
ಜ.19ರಂದು ಅಯಾನ್ ಶಾಂತಿ ಕುಟೀರ (ಕನ್ನಡ). ತಂಡ: ಸಮತೆಂತೋ, ಮೈಸೂರು.

ವನರಂಗ ಸಂಜೆ 7 ಗಂಟೆಗೆ

ಜ.14ರಂದು ಸಂಜೆ 5ಕ್ಕೆ ಉದ್ಘಾಟನಾ ಸಮಾರಂಭ
ಜ.15ರಂದು ಮುದುಕನ ಮದುವೆ (ಕನ್ನಡ). ತಂಡ:ಶ್ರೀ ಕುಮಾರೇಶ್ವರ ನಾಟಕ ಸಂಘ(ರಿ), ಚಿತ್ರದುರ್ಗ.
ಜ.16ರಂದು ಕೃಷ್ಣಾರ್ಜುನ ಕಾಳಗ (ಕನ್ನಡ). ತಂಡ: ಯಶಸ್ವಿ ಕಲಾವೃಂದ ಮಕ್ಕಳ ಮೇಳ, ತೆಕ್ಕಟ್ಟೆ, ಕುಂದಾಪುರ.
ಜ.17ರಂದು ಮತ್ತಾಯ 22:39 (ಕನ್ನಡ). ತಂಡ: ಅಸ್ತಿತ್ವ(ರಿ), ಮಂಗಳೂರು.
ಜ.18ರಂದು 'ತಲ್ಕಿ–ಟ್ರುಥ್ ಡ್ರೀಮ್ ವಯಾ ಬೆಂಗಳೂರು' (ಕನ್ನಡ). ತಂಡ: ಪಯಣ ರಂಗ ತಂಡ, ಬೆಂಗಳೂರು.
ಜ.19ರಂದು ಕೇರಿ ಹಾಡು(ಕನ್ನಡ). ತಂಡ: ಸಾವಿತ್ರಿ ಬಾಯಿಫುಲೆ ಸ್ತ್ರೀಶಕ್ತಿ, ತಂಡ: ದಿಂಡಿಗನೂರು, ಹಾಸನ.

ಕಲಾಮಂದಿರ ಸಂಜೆ 7.30 ಗಂಟೆಗೆ

ಜ.15ರಂದು ಮೊಗ್ಲಿ (ಕನ್ನಡ). ತಂಡ: ಧಮನಿ(ರಿ) ಕುಂದಾಪುರ, ಕಲಾಭಿ ಚಿಲ್ಡ್ರನ್ಸ್ ಥಿಯೇಟರ್, ಮಂಗಳೂರು.
ಜ.16ರಂದು ದ ಬೋಟ್ ಬಾಯ್ (ಮಲಯಾಳಂ). ತಂಡ: ಲೋಕಧರ್ಮಿ, ಕೊಚ್ಚಿ, ಕೇರಳ.
ಜ.17ರಂದು ಎ ಫ್ರೆಂಡ್ ಬಿಯಾಂಡ್ ದ ಫೆನ್ಸ್ (ಕನ್ನಡ). ಕಲಾಭಿ ಥಿಯೇಟರ್, ಮಂಗಳೂರು.
ಜ.18ರಂದು ಕಾಬುಲಿವಾಲಾ ಕಾಲಿಂಗ್ (ಇಂಗ್ಲೀಷ್). ತಂಡ: ಬೆಂಗಳೂರು ಲಿಟಲ್ ಥಿಯೇಟರ್ ಫೌಂಡೇಶನ್, ಬೆಂಗಳೂರು.
ಜ.19ರಂದು ಮೈ ಫ್ಯಾಮಿಲಿ (ಕನ್ನಡ). ತಂಡ: ರಂಗಾಯಣ ರೆಪರ್ಟರಿ, ಮೈಸೂರು.

ಅಭಿವೃದ್ಧಿ ಫೌಂಡೇಷನ್ ಮೈಸೂರು ಶಾಖೆ ಉದ್ಘಾಟನೆ



ಅಭಿವೃದ್ಧಿ ಫೌಂಡೇಷನ್ ಮೈಸೂರು ನೂತನ ಶಾಖೆಯನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ಮೈಸೂರು,ಜ.7(ಪಿಎಂ)– ಅಭಿವೃದ್ಧಿ ಫೌಂಡೇಷನ್ ಮೈಸೂರು ನೂತನ ಶಾಖೆಯನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಎಲ್ಲಾ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ವಿಶೇಷಚೇತನರಿಗೆ ಸೂಕ್ತ ಸೌಲಭ್ಯ ಕಲ್ಪಿಸಬೇಕು. ಆ ಮೂಲಕ ಅವರೂ ಸಮಾಜದಲ್ಲಿ ಸ್ವಾಭಿಮಾನದಿಂದ ಬದುಕಲು ಅವಕಾಶ ಕಲ್ಪಿಸಬೇಕು ಎಂದು ಹೇಳಿದರು.

ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಶಂಕರ್‌ಗೌಡ ಪಾಟೀಲ್ ಮಾತನಾಡಿ, ವಿಕಲಚೇತನರಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಫೌಂಡೇಷನ್ ಮೈಸೂರಿನಲ್ಲಿ ನೂತನವಾಗಿ ಆರಂಭಗೊಂಡಿರುವುದು ಉತ್ತಮ ಬೆಳವಣಿಗೆಯಾಗಿದೆ. ಇದನ್ನು ವಿಶೇಷ ಚೇತನ ಸಮುದಾಯ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಈ ಫೌಂಡೇಷನ್ ಸುಮಾರು 10 ವರ್ಷಗಳಿಂದ ದೇವನಹಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇಲ್ಲಿ ಊಟ–ವಸತಿ ಹಾಗೂ ತರಬೇತಿಯನ್ನು ಉಚಿತವಾಗಿ ನೀಡುವ ಮೂಲಕ 2,500ಕ್ಕೂ ಹೆಚ್ಚು ವಿಶೇಷಚೇತನರಿಗೆ ಉದ್ಯೋಗ ಕಲ್ಪಿಸಿಕೊಟ್ಟಿದೆ. ಅದೇ ರೀತಿಯಲ್ಲಿ ಇದೀಗ ಮೈಸೂರಿನಲ್ಲಿ ಕಾರ್ಯ ನಿರ್ವಹಿಸುವಲ್ಲಿ ಫೌಂಡೇಷನ್ ಯಶಸ್ವಿಯಾಗಲಿದೆ ಎಂದು ಹಾರೈಸಿದರು. ಅಭಿವೃದ್ಧಿ ಫೌಂಡೇಷನ್ ಅಧ್ಯಕ್ಷೆ ಭಾಗ್ಯ ಭಾಸ್ಕರ್, ವ್ಯವಸ್ಥಾಪಕ ನಿರ್ದೇಶಕ ಆರ್.ಭಾಸ್ಕರ್, ಕಾನೂನು ಸಲಹೆಗಾರ ಜಿ.ಸುನೀಲ್, ಕೆಎಸ್‌ಎಫ್‌ಡಿಸಿ ಅಧ್ಯಕ್ಷ ಎನ್.ಶ್ರೀಧರ್ ದೀಕ್ಷಿತ್, ಪ್ರಧಾನ ಕಾರ್ಯದರ್ಶಿ ಬಿ.ಕುಮಾರ್, ಪಂಕ್ ಗ್ರೂಪ್‌ನ ದಕ್ಷಿಣ ಪ್ರಾದೇಶಿಕ ವ್ಯವಸ್ಥಾಪಕ ಡಾಮ್ನಿಕ್, ಕರ್ನಾಟಕ ಪ್ರಾದೇಶಿಕ ವ್ಯವಸ್ಥಾಪಕ ಬಸವರಾಜ್ ಮತ್ತಿತರರು ಹಾಜರಿದ್ದರು.

ಪರಿಶಿಷ್ಟ ಜಾತಿ, ಪಂಗಡದ ಹಣ ಖರ್ಚು ಮಾಡದ ವಿವಿಧ ನಿಗಮಗಳ ಎಂಡಿಗಳಿಗೆ ನೋಟಿಸ್ ನೀಡಲು ಸಿಎಂ ಆದೇಶ

- ಅಂಬೇಡ್ಕರ್ ನಿಗಮದಲ್ಲಿ 900 ಕೋಟಿ; ಬೋವಿ ನಿಗಮದಲ್ಲಿ 107 ಕೋಟಿ ವೆಚ್ಚವಾಗಿಲ್ಲ
- ನೋಟಿಸ್‌ಗೆ ಸಮರ್ಪಕ ಉತ್ತರ ಬಾರದಿದ್ದಲ್ಲಿ ಅಮಾನತಿಗೆ ಸೂಚನೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾಜ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಬೆಂಗಳೂರು, ಜ.7 (ಕೆಎಂಶಿ)–ಪರಿಶಿಷ್ಟ ಜಾತಿ ಹಾಗೂ ಪಂಗಡದಡಿ ಬರುವ ನಿಗಮಗಳಲ್ಲಿ ಹಣ ವೆಚ್ಚ ಮಾಡದೆ, ಮಜಾ ಮಾಡುತ್ತಿರುವ ಎಂಡಿಗಳಿಗೆ ತಕ್ಷಣ ನೋಟಿಸ್ ನೀಡಿ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಇಂದಿಲ್ಲಿ ಆದೇಶ ಮಾಡಿದ್ದಾರೆ.

ದೆಹಲಿ ಪ್ರವಾಸ ರದ್ದಾದ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನೆ ಮಾಡಿದ ಮುಖ್ಯಮಂತ್ರಿ ಅವರು, ಡಾ.ಅಂಬೇಡ್ಕರ್ ನಿಗಮದಲ್ಲಿ 900 ಕೋಟಿ ರೂ., ಬೋವಿ ನಿಗಮದಲ್ಲಿ 107 ಕೋಟಿ ರೂ. ಸೇರಿದಂತೆ ಹಲವು ನಿಗಮಗಳಲ್ಲಿ ಕೋಟಿ ಕೋಟಿ ಹಣ ಇದ್ದರೂ ವೆಚ್ಚ ಮಾಡದಿರುವುದಕ್ಕೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು, ಈ ಆದೇಶ ಮಾಡಿದರು. ಫಲಾನುಭವಿಗಳಿಗೆ ಮೀಸಲಿಟ್ಟ ಹಣವನ್ನು ವೆಚ್ಚ ಮಾಡದೆ, ಬ್ಯಾಂಕ್ ಖಾತೆಗಳಲ್ಲಿ ಇಟ್ಟುಕೊಂಡು ಏನು ಮಾಡುತ್ತಿದ್ದೀರಿ ಎಂದು ಖಾರವಾಗಿ ಪ್ರಶ್ನಿಸಿದರು.

ಈ ಸಂಬಂಧ ಎಲ್ಲಾ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ನೋಟಿಸ್ ಜಾರಿ ಮಾಡಿ, ನೋಟಿಸ್‌ಗೆ ಸಮರ್ಪಕ ಉತ್ತರ ದೊರೆಯದಿದ್ದರೆ, ಅವರನ್ನು ತಕ್ಷಣ ಅಮಾನತು ಮಾಡುವಂತೆ ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚಿಸಿದರು.

ಹಣಕಾಸು ವರ್ಷದ ಕೊನೆ ತಿಂಗಳಲ್ಲೇ ಖರ್ಚು ಮಾಡುವ ಅಸಹ್ಯ ಅಭ್ಯಾಸ ಬೆಳೆಸಿಕೊಂಡಿದ್ದೀರಿ, ಬಡವರಿಗೆ, ಅರ್ಹ ಫಲಾನುಭವಿಗಳಿಗೆ ಖರ್ಚು ಮಾಡಲು ಕೊಟ್ಟ ಹಣ ಖರ್ಚು ಮಾಡದೆ ಇಟ್ಟುಕೊಂಡು ಕೂರುವುದಕ್ಕಾ ನೀವು ಇರುವುದು ಎಂದು ಗುಡುಗಿದರು. 2024–25ನೇ ಸಾಲಿನ ಆಯವ್ಯಯದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ 5,377 ಕೋಟಿ ರೂ. ಅನುದಾನ ಒದಗಿಸಲಾಗಿದೆ, ಅದರಲ್ಲಿ 3,631 ಕೋಟಿ ರೂ. ಬಿಡುಗಡೆಯಾಗಿದ್ದು ಈ ಮೊತ್ತವೂ ಪೂರ್ತಿ ಖರ್ಚು ಆಗಿಲ್ಲ ಏಕೆ ಎಂದು ಪ್ರಶ್ನಿಸಿದರು.

ಇಲಾಖೆಗೆ ಕೊಟ್ಟ ಹಣದಲ್ಲಿ 2,892 ಕೋಟಿ ರೂ. ಮಾತ್ರ ವೆಚ್ಚ ಮಾಡಲಾಗಿದೆ, ಉಳಿದ ಹಣದ ವೆಚ್ಚಕ್ಕೆ ಮಾರ್ಚ್ ಅಂತ್ಯದವರೆಗೆ ಕಾಯದೆ, ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಸಮರ್ಪಕ ವೆಚ್ಚ ಮಾಡಲು ಕ್ರಮ ಕೈಗೊಳ್ಳಬೇಕು.

ವರ್ಷಾಂತ್ಯದವರೆಗೆ ವಿದ್ಯಾರ್ಥಿ ವೇತನ ಪಾವತಿ ಬಾಕಿ ಉಳಿಸಬಾರದು, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಪ್ರತಿ ವರ್ಷ ಸೆಪ್ಟಂಬರ್ ಒಳಗೆ, ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ನವೆಂಬರ್ ಅಂತ್ಯದ ಒಳಗೆ ಪಾವತಿಸಲು ಕ್ರಮ ಕೈಗೊಳ್ಳಬೇಕು, ಆಧಾರ್ ದಾಖಲೆ ಆಗದಿರುವ ಕಾರಣಕ್ಕೆ ವಿದ್ಯಾರ್ಥಿ ವೇತನ ವಿಳಂಬವಾಗಬಾರದು, ಎಲ್ಲಾ ವಿದ್ಯಾರ್ಥಿಗಳಿಗೆ ಆಧಾರ್ ಮಾಡಿಸಲು ಕ್ರಮ ಕೈಗೊಳ್ಳಬೇಕು.

ಎಲ್ಲಾ ಹೋಬಳಿಗಳಲ್ಲಿ ವಸತಿ ಶಾಲೆ ಸ್ಥಾಪನೆ ಸರ್ಕಾರದ ಗುರಿಯಾಗಿದೆ, ಈ ವರ್ಷ 20 ಹೊಸ ವಸತಿ ಶಾಲೆ ಆರಂಭಿಸಲಾಗಿದೆ, ರಾಜ್ಯದಲ್ಲಿ ಒಟ್ಟು 841 ವಸತಿ ಶಾಲೆಗಳಿವೆ, ಇನ್ನೂ 92 ಹೋಬಳಿಗಳಲ್ಲಿ ವಸತಿ ಶಾಲೆ ಆರಂಭಿಸಬೇಕಿದೆ, ಮುಂದಿನ ಎರಡು ವರ್ಷದಲ್ಲಿ ಇವನ್ನು ಪೂರ್ಣಗೊಳಿಸಬೇಕು.

ಹೊಸದಾಗಿ ಆರಂಭಿಸಲಾದ ಎಲ್ಲಾ ವಸತಿ ಶಾಲೆಗಳಲ್ಲಿ ಶಿಕ್ಷಕರು ಸೇರಿದಂತೆ ಅಗತ್ಯ ಮೂಲಸೌಕರ್ಯ ಒದಗಿಸಿ ಗುಣಮಟ್ಟದ ಶಿಕ್ಷಣ ನೀಡಬೇಕು. ಮಂಜೂರಾದ ಎಲ್ಲಾ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಬೇಕು, ಶಿಕ್ಷಕರಿಗೆ ನಿರಂತರ ತರಬೇತಿ ನೀಡಬೇಕು ಮತ್ತು ಅತಿಥಿ ಶಿಕ್ಷಕರ ಗೌರವಧನ ಹೆಚ್ಚಿಸುವ ಬಗ್ಗೆ ಪರಿಶೀಲನೆ ನಡೆಸಬೇಕು.

ಪ್ರತಿ ತಾಲೂಕು ಮಟ್ಟದಲ್ಲಿ ಕನಿಷ್ಠ ಒಂದು ಪಿಯು ವಸತಿ ಶಾಲೆ ಆರಂಭಿಸಬೇಕು, ಎಲ್ಲಾ ವಸತಿ ಶಾಲೆಗಳಲ್ಲಿ ಊಟದ ಗುಣಮಟ್ಟ ಕಾಯ್ದುಕೊಳ್ಳಬೇಕು, ಹಾಸಿಗೆ ಸೇರಿದಂತೆ ಮೂಲಸೌಕರ್ಯಗಳನ್ನು ಒದಗಿಸಬೇಕು, ಮಕ್ಕಳ ಆರೋಗ್ಯ, ಪೌಷ್ಟಿಕಾಂಶಗಳ ತಪಾಸಣೆ ನಿಯಮಿತವಾಗಿ ನಡೆಸಬೇಕು.

ವಿವಿಧ ನಿಗಮಗಳಲ್ಲಿ ಗಂಗಾಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳ ಸಂಖ್ಯೆ ಹೆಚ್ಚು ಮಾಡುವ ಕುರಿತು ಪರಿಶೀಲನೆ ಮಾಡಬೇಕು. ನಿಗಮಗಳಲ್ಲಿ ಹಿಂದಿನ ವರ್ಷದ ಬಾಕಿ ಹಾಗೂ ಪ್ರಸ್ತುತ ವರ್ಷದ ಭೌತಿಕ ಗುರಿಯನ್ನು ಕಡ್ಡಾಯವಾಗಿ ಸಾಧಿಸಬೇಕು, ವಿವಿಧ ಯೋಜನೆಗಳಡಿ ಫಲಾನುಭವಿಗಳ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು.

ವಸತಿ ನಿರ್ಮಾಣಕ್ಕೆ ಲಭ್ಯವಿರುವ ಅನುದಾನದಲ್ಲಿ ಮನೆಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು, ಇದಕ್ಕಾಗಿ ಮನೆ ನಿರ್ಮಾಣದ ಯೂನಿಟ್ ವೆಚ್ಚ ಪರಿಷ್ಕರಿಸುವ ಕುರಿತು ಪರಿಶೀಲನೆ ನಡೆಸುವಂತೆ ಸೂಚಿಸಿದರು.

ನಕ್ಕರೆ ಅದೇ ಸ್ವರ್ಗ

ಫ್ರೆಂಡ್ಸ್ : ನಮ್ಮ ಮನೆ ಓಪನಿಂಗ್‌ಗೆ ಯಾಕೆ ಬರಲಿಲ್ಲ?
ಸರ್ದಾರ್ : ಬರಬೇಕು ಅಂತ ಇದ್ದೆ. ಆದರೆ ಯಾವ ಕಲ್ಯಾಣ ಮಂಟಪದಲ್ಲಿದೆ ಅಂತ ಗೊತ್ತಿರಲಿಲ್ಲ. ಅದಕ್ಕೆ ಬರಲಿಲ್ಲ.

ಮೈಸೂರು ಮಿತ್ರ
ಬುಧವಾರ, 8 ಜನವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಮನವೇ ದೇಗುಲ ಮತ್ತೆ ಇಳೆಯೇ ಗುಡಿಯೆಂದೆ,
ಬಾಳನುಳಿದಿನ್ನಾವ ದೇವನಲ್ಲೆಂದೆ. –ವಿ.ಕೃ.ಗೋಕಾಕ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಡ್ಡನಿಗೆ ಹಗಲು ಕಳೆಯುವುದಿಲ್ಲ, ಒಳ್ಳೆಯವನಿಗೆ ರಾತ್ರಿ ಸಾಲುವುದಿಲ್ಲ.

ನಿಮ್ಮ ಪತ್ರಗಳು

■ ಗಬ್ಬು ನಾರುತ್ತಿರುವ ಗ್ರಾಮದ ಹೃದಯ ಭಾಗ

ಮಾನ್ಯರೆ,

ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು, ತಗಡೂರು ಗ್ರಾಮದ ಬಸವೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಅಂಚೆ ಮತ್ತು ತಂತಿ ಕಚೇರಿಯವರು ಗ್ರಾಮ ಪಂಚಾಯಿತಿಯಿಂದ ಜಾಗ ಪಡೆದುಕೊಂಡು ಕಟ್ಟಡವನ್ನು ಕಟ್ಟದೆ ತಂತಿ ಬೇಲಿಯನ್ನು ಹಾಕಿ ಹಾಗೇ ಖಾಲಿ ಬಿಟ್ಟಿದ್ದಾರೆ. ಈ ಖಾಲಿ ಬಿದ್ದಿರುವ ಜಾಗಕ್ಕೆ ಸಾರ್ವಜನಿಕರು ಕಸ ತಂದು ರಾಶಿ ಹಾಕುತ್ತಿದ್ದಾರೆ. ಈ ಕಸವೆಲ್ಲಾ ಕೊಳೆತು ಗಬ್ಬು ನಾರುತ್ತಿದೆ. ಗ್ರಾಮದವರು ಹಾಗೂ ಅಕ್ಕಪಕ್ಕದಿಂದ ಬರುವ ಗ್ರಾಮಸ್ಥರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಬಂದಿದೆ. ಈ ವಾಸನೆಯಿಂದ ಗ್ರಾಮದಲ್ಲಿ ಸಾಂಕ್ರಾಮಿಕ ರೋಗ ಹರಡುವ ಭೀತಿ ಇದೆ. ಆದ್ದರಿಂದ ಗ್ರಾಮ ಪಂಚಾಯಿತಿಯವರು ಕೊಳೆತು ನಾರುತ್ತಿರುವ ಕಸದ ದುರ್ವಾಸನೆಯನ್ನು ತಪ್ಪಿಸಬೇಕೆಂದು ಮನವಿ ಮಾಡುತ್ತೇವೆ. ಈ ಅಂಚೆ ಕಚೇರಿಯವರು ಎಲ್ಲಾ ಊರಿನಲ್ಲಿಯೂ ಅಂಚೆ ಕಚೇರಿಗೆ ಸ್ಥಳವನ್ನು ನಿಗದಿಪಡಿಸಿಕೊಂಡು ಎಲ್ಲಿಯೂ ಸ್ವಂತ ಕಟ್ಟಡವನ್ನು ನಿರ್ಮಿಸಿಕೊಳ್ಳದೆ ಬಾಡಿಗೆ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟವರು ಇತ್ತ ಕಡೆ ಗಮನಹರಿಸಬೇಕೆಂದು ಗ್ರಾಮಸ್ಥರ ಮನವಿ.



–ಎಂ.ಶಿವರಾಮ್ ತಗಡೂರು, ಮೈಸೂರು.

■ ಚೀನಾ ವೈರಾಣು ಬಗ್ಗೆ ಎಚ್ಚರಿಕೆ ಇರಲಿ

ಮಾನ್ಯರೆ,

ಕೋವಿಡ್–19 ಹೊಡೆತದಿಂದ ಇನ್ನೂ ಜಗತ್ತು ಸುಧಾರಿಸಿಕೊಳ್ಳುತ್ತಿರುವ ಬೆನ್ನಲ್ಲೇ ಕೋವಿಡ್ ಮಾದರಿಯಂತೆ ಉಸಿರಾಟ ತೊಂದರೆ ಲಕ್ಷಣ ಇರುವ ಹ್ಯೂಮನ್ ಮೆಟಾಪ್ನ್ಯೂಮೊವೈರಸ್ (HMPV) ವ್ಯಾಪಕವಾಗಿ ಹರಡುತ್ತಿದ್ದು ಜನರಲ್ಲಿ ಅನಗತ್ಯ ಗೊಂದಲ ಹಾಗೂ ಆತಂಕ ಸೃಷ್ಟಿಸಿದೆ. ಇದು ಚಳಿಗಾಲದಲ್ಲಷ್ಟೇ ಕಾಣಿಸಿಕೊಳ್ಳುವ ಸಾಮಾನ್ಯ ವೈರಾಣು ಜ್ವರ, ಶೀತ ಬಿಟ್ಟರೆ ಗಂಭೀರ ಅಪಾಯಗಳಿಲ್ಲ. ಈ ಬಗ್ಗೆ ಭಯ ಬೇಡ ಎಂದು ಚೀನಾ ಸಮಜಾಯಿಷಿ ನೀಡಿದ್ದರೂ, ಜಗತ್ತಿನ ಇತರ ದೇಶಗಳಿಗೆ ಆ ಬಗ್ಗೆ ಸಣ್ಣದೊಂದು ಅನುಮಾನ ಇದ್ದೆ ಇದೆ.

ಏಕೆಂದರೆ ಈ ಹಿಂದೆ ಕೊರೊನಾ ಸಾಂಕ್ರಾಮಿಕದಲ್ಲಿ ಚೀನಾ ಪಾರದರ್ಶಕತೆ ಕಾಪಾಡಿಕೊಳ್ಳದೆ ಇದ್ದುದರಿಂದ ಜಗತ್ತಿನ ಕೋಟ್ಯಾಂತರ ಮಂದಿ ಪ್ರಾಣ ಕಳೆದುಕೊಂಡಿದ್ದು ದುರದೃಷ್ಟಕರ. ಹೀಗಾಗಿಯೇ ಮತ್ತೊಮ್ಮೆ ಚೀನಾದಲ್ಲಿ ಹರಡಿರುವ ವೈರಸ್ ಬಗ್ಗೆ ಜಗತ್ತಿನ ಉಳಿದ ರಾಷ್ಟ್ರಗಳಲ್ಲಿ ಆತಂಕ ಮನೆ ಮಾಡಿರುವುದು ಸಹಜ. ಏಕೆಂದರೆ ಹ್ಯೂಮನ್ ಮೆಟಾಪ್ನ್ಯೂಮೋವೈರಸ್ (HMPV) ಸಾಮಾನ್ಯವಾಗಿ ಉಸಿರಾಟ ತೊಂದರೆ ಉಂಟು ಮಾಡುವ ಲಕ್ಷಣ ಹೊಂದಿದೆ. ಸಾಮಾನ್ಯ ಜ್ವರ ಕಾಣಿಸಿಕೊಳ್ಳುತ್ತದೆ. ಚಳಿಗಾಲದಲ್ಲಿ ಹೆಚ್ಚು ಹರಡುತ್ತದೆ. ಶ್ವಾಸಕೋಶಗಳ ಸೋಂಕಿಗೆ ಈ ವೈರಸ್ ಕಾರಣವಾಗಬಹುದು. ಕೋವಿಡ್–19ರ ರೀತಿ ಎಚ್‌ಎಂಪಿವಿಗೆ ಯಾವುದೇ ಲಸಿಕೆಯಾಗಲಿ, ಚಿಕಿತ್ಸೆಯಾಗಲಿ ಇಲ್ಲ. ಹೆಚ್ಚು ರೋಗಲಕ್ಷಣ ಇರುವ ರೋಗಿಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಬೇಕಾಗುತ್ತದೆ. ಕಡಿಮೆ ರೋಗ ಲಕ್ಷಣ ಇದ್ದರೆ ಮನೆಯಲ್ಲಿ ವಿಶ್ರಾಂತಿ ಪಡೆದರೂ ಸಾಕಾಗುತ್ತದೆ ಎಂದು ಈಗಾಗಲೇ ವೈದ್ಯಾಧಿಕಾರಿಗಳು ತಿಳಿಸಿದ್ದಾರೆ. ಹೀಗಾಗಿ ಚೀನಾ ಕೂಡ ತನ್ನ ದೇಶದಲ್ಲಿ ಏರುಗತಿಯಲ್ಲಿ ಹರಡುತ್ತಿರುವ ವೈರಾಣು ಆಪತ್ತಿನ ಕುರಿತ ಮಾಹಿತಿಯನ್ನು ವಿಶ್ವ ಆರೋಗ್ಯ ಸಂಸ್ಥೆ ಜೊತೆ ಮುಕ್ತವಾಗಿ ಹಂಚಿಕೊಳ್ಳುವುದು ಅವಶ್ಯಕ. ಏಕೆಂದರೆ ಪ್ರವಾಸೋದ್ಯಮ ಹಾಗೂ ವ್ಯಾಪಾರ ವಹಿವಾಟು ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತನ್ನದೇ ಆದ ಅಧಿಪತ್ಯವನ್ನು ಹೊಂದಿರುವ ಚೀನಾ, ಜಗತ್ತಿನ ಇತರ ದೇಶಗಳೊಡನೆ ಒಂದಲ್ಲ ಒಂದು ರೀತಿಯಲ್ಲಿ ಸಂಪರ್ಕವನ್ನು ಹೊಂದಿದೆ. ಹೀಗಾಗಿ ಪ್ರಸ್ತುತ ಚೀನಾದಲ್ಲಿ ಹರಡಿರುವ ಸಾಂಕ್ರಾಮಿಕ ಹೊಸ ವೈರಾಣು ಇಡೀ ಜಗತ್ತಿಗೆ ಆಕ್ರಮಿಸಿಕೊಳ್ಳುವುದು ದೊಡ್ಡ ಸಂಗತಿಯೇನಲ್ಲ.

ಈಗಾಗಲೇ ಚೀನಾ ಸೇರಿದಂತೆ ನಮ್ಮ ಭಾರತದ ವೈದ್ಯಾಧಿಕಾರಿಗಳು ಅಲರ್ಟ್ ಆಗಿದ್ದು ಮುಂಜಾಗ್ರತೆ ವಹಿಸಿದ್ದರೂ, ಈ ಹೊಸ ವೈರಾಣುವಿನ ಬಗ್ಗೆ ಜನರು ಅನಗತ್ಯ ಗೊಂದಲಗಳನ್ನು ಮಾಡಿಕೊಳ್ಳದೆ, ಬಹಳ ಎಚ್ಚರಿಕೆಯಿಂದ ವೈರಾಣುವಿನ ವಿರುದ್ಧ ಹೋರಾಡುವ ಕ್ರಮಗಳ ಬಗ್ಗೆ ಸರ್ಕಾರದ ಜೊತೆಗೆ ಕೈಜೋಡಿಸಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಕೆಪಿಎಸ್ಸಿ ಶುದ್ಧೀಕರಣ ಈ ಜನ್ಮದಲ್ಲಿ ಸಾಧ್ಯವೇ? ಮಿಲಿಯನ್ ಡಾಲರ್ ಪ್ರಶ್ನೆ!

ಮಾನ್ಯರೆ,

ಕಳೆದ ವರ್ಷದ ಡಿಸೆಂಬರ್ 29ರ ಭಾನುವಾರ ನಡೆದ ಕೆಎಎಸ್ ಮರು ಪರೀಕ್ಷೆಯಲ್ಲಿ ಕೂಡ ನೀಡಲಾದ ಪ್ರಶ್ನೆಗಳು ತೀರಾನೇ ಅನುವಾದ ದೋಷದಿಂದ ಕೂಡಿದ್ದವು. ನಾಡಿನ ಪ್ರತಿಷ್ಠಿತ ಪರೀಕ್ಷೆಯಲ್ಲೇ ಇಂತಹ ತಪ್ಪುಗಳು ಮರುಕಳಿಸುತ್ತಿವೆಯಲ್ಲಾ! ಇದಕ್ಕೆಲ್ಲಾ ಮುಕ್ತಿ ಎಂದು? ಕರ್ನಾಟಕ ಲೋಕಸೇವಾ ಆಯೋಗ ಹಿಂದೆ ನಡೆಸಿರುವ ಪರೀಕ್ಷೆಗಳ ಫಲಿತಾಂಶವನ್ನೇ ಪ್ರಕಟಿಸಲು ಸಾಧ್ಯವಾಗುತ್ತಿಲ್ಲ. ಈಗ ಹೊಸದಾಗಿ ನಡೆಸಿದ ಪರೀಕ್ಷೆಗಳಲ್ಲೂ ನಾನಾ ಲೋಪದೋಷ. ಈ ನಡುವೆ ಬಲಿಪಶು ಆಗುತ್ತಿರುವುದು ಮಾತ್ರ ಸರ್ಕಾರಿ ಕೆಲಸಕ್ಕಾಗಿ ಹಗಲು–ಇರುಳು ಎನ್ನದೆ ನಿರಂತರವಾಗಿ ಪರಿಶ್ರಮ ಪಟ್ಟು ಓದುತ್ತಿರುವ ಅಭ್ಯರ್ಥಿಗಳು.

ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಯಾವುದೇ ಪರೀಕ್ಷೆಯಲ್ಲಿ ಪ್ರತಿ ಬಾರಿಯೂ ಒಂದಲ್ಲ ಒಂದು ರೀತಿಯಲ್ಲಿ ತಪ್ಪುಗಳು ಪುನರಾವರ್ತನೆಯಾಗುತ್ತಿದ್ದು, ಸಹಜವಾಗಿ ಅಭ್ಯರ್ಥಿಗಳಿಗೆ ಆಯೋಗದ ಮೇಲೆ ವಿಶ್ವಾಸ ಹೊರಟು ಹೋಗಿದೆ. ಬಹುತೇಕ ಸರ್ಕಾರಿ ನೇಮಕಾತಿಗಳ ಪರೀಕ್ಷಾ ಹೊಣೆ ಕೆಪಿಎಸ್ಸಿಯದ್ದಾಗಿದ್ದು, ಅವರ ಕಾರ್ಯ ನಿರ್ವಹಣೆ ಬಗ್ಗೆ ಆಗಾಗ ಆಕ್ಷೇಪ, ಖಂಡನೆ ವ್ಯಕ್ತವಾಗುತ್ತಲೇ ಇದೆ. ಹೀಗಿದ್ದರೂ ಕೆಪಿಎಸ್ಸಿಯಲ್ಲಿ ಇನ್ನೂ ಸುಧಾರಣೆ ಆಗಿಲ್ಲ. ಲೋಕಸೇವಾ ಆಯೋಗ ಕಳೆದ ನಾಲ್ಕೈದು ದಶಕಗಳಿಂದಲೂ ಪದೇ ಪದೆ ಜನರ ನಂಬಿಕೆ ಕಳೆದುಕೊಳ್ಳುತ್ತಿದ್ದು, ಅದನ್ನು ಶಾಶ್ವತವಾಗಿ ರದ್ದು ಮಾಡಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ಕ್ಕೆ ಸಂಪೂರ್ಣ ಪರೀಕ್ಷಾ ಜವಾಬ್ದಾರಿ ನೀಡಿದರೆ ಉತ್ತಮ.

ರಾಜ್ಯದಲ್ಲಿ ಆಡಳಿತರೂಢ ಯಾವುದೇ ಸರ್ಕಾರವಿದ್ದರೂ ಕೆಪಿಎಸ್ಸಿ ಭ್ರಷ್ಟಾಚಾರ, ಪಕ್ಷಪಾತ, ಲಂಚ, ರಾಜಕಾರಣಿಗಳ ಪ್ರಭಾವ ತಡೆಯಲು ಸಾಧ್ಯವಾಗದೆ ಇರುವುದು ಸಾರ್ವಜನಿಕ ವಲಯದ ದುರ್ಗತಿಯಾಗಿದೆ.

–ಅನಿಲ್‌ಕುಮಾರ್, ನಂಜನಗೂಡು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಕೌಟಿಲ್ಯನ ಅರ್ಥಶಾಸ್ತ್ರ

ಭಾರತೀಯ ಸಂಸ್ಕೃತಿಯನ್ನು ಸಮರ್ಥವಾಗಿ ನಿರೂಪಿಸುವ ಶಾಸ್ತ್ರಗಳಲ್ಲಿ ಅಗ್ರಸ್ಥಾನವನ್ನು ಪಡೆಯುವುದು ಕೌಟಿಲ್ಯನ ಅರ್ಥಶಾಸ್ತ್ರ. ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ, ಎಂದರೆ ಸುಮಾರು ಎರಡು ಸಾವಿರದ ನಾಲ್ಕು ನೂರು ವರ್ಷಗಳ ಹಿಂದೆ ರಚಿತವಾಗಿದ್ದ ಅರ್ಥಶಾಸ್ತ್ರ ಇಂದು ನಮಗೆ ಉಪಲಬ್ಧವಾಗಿರುವುದು ಡಾ. ಆರ್. ಶಾಮಶಾಸ್ತ್ರಿಗಳೆಂಬ ದೊಡ್ಡ ವಿದ್ವಾಂಸರ ಪರಿಶ್ರಮದಿಂದ. ರುದ್ರಪಟ್ಟಣದಲ್ಲಿ ಶಾಮಶಾಸ್ತ್ರಿಗಳು 1868ನೆಯ ಇಸವಿ ಜನವರಿ ಹನ್ನೆರಡನೆಯ ತಾರೀಖಿನಂದು ಜನಿಸಿದರು. ಎಪ್ಪತ್ತೇಳು ವರ್ಷ ಬದುಕಿದ್ದ ಅವರು ವಿಧಿವಶರಾಗಿದ್ದು 1944ನೆಯ ಇಸವಿ ಜನವರಿ ಇಪ್ಪತ್ತಮೂರನೆಯ ತಾರೀಖಿನಂದು. ಆದ್ದರಿಂದ ಜನವರಿ ತಿಂಗಳಿನಲ್ಲಿ ಅವರು ಮಾಡಿದ ಸರಸ್ವತೀ ಸೇವೆಯನ್ನು ನೆನೆಸಿಕೊಳ್ಳುವುದು ಉಚಿತವಾಗಿದೆ.


ಆರ್. ಶಾಮಶಾಸ್ತ್ರಿಗಳು ಇಂದು ಪ್ರಾಚ್ಯ ವಿದ್ಯಾ ಸಂಶೋಧನಾಲಯವೆಂದು ಪ್ರಸಿದ್ಧವಾದ, ಹಿಂದೆ ಗವರ್ನಮೆಂಟ್ ಓರಿಯೆಂಟಲ್ ಲೈಬ್ರರಿ ಎಂದು ಕರೆಯಲಾಗುತ್ತಿದ್ದ ಸಂಸ್ಥೆಯಲ್ಲಿ ಗ್ರಂಥಪಾಲಕರಾಗಿ ಕೆಲಸ ಮಾಡುತ್ತಿದ್ದರು. ವಿವಿಧ ಸ್ಥಳಗಳಿಂದ, ಹಳ್ಳಿಗಳಿಂದ, ಪಟ್ಟಣಗಳಿಂದ, ಮಠಗಳಿಂದ ಪ್ರಾಚೀನ ತಾಳೆಪತ್ರ ಗ್ರಂಥಗಳನ್ನು ಸಂಗ್ರಹಿಸಿ, ಪರೀಕ್ಷಿಸಿ ಅವುಗಳಲ್ಲಿ ಯಾವ ಕೃತಿಗಳಿವೆ, ಅವು ಯಾವ ಲಿಪಿಯಲ್ಲಿವೆ. ಪೂರ್ಣವೆ, ಅಪೂರ್ಣವೇ ಎಂದು ನಿರ್ಧರಿಸುವುದು ಅವರ ಕರ್ತವ್ಯವಾಗಿತ್ತು. ಆ ಕಾರ್ಯವನ್ನು ಮಾಡುತ್ತಿದ್ದಾಗ ಗ್ರಂಥಲಿಪಿಯಲ್ಲಿ ಬರೆಯಲಾಗಿದ್ದ ಅರ್ಥಶಾಸ್ತ್ರವು ಅವರಿಗೆ ಸಿಕ್ಕಿತು.

ಕೌಟಿಲ್ಯನ ಅರ್ಥಶಾಸ್ತ್ರದಂತಹ ಐತಿಹಾಸಿಕ ಮಹತ್ತ್ವವನ್ನು ಹೊಂದಿದ್ದ ಪುಸ್ತಕವೂ ಅತ್ಯಂತ ದುರ್ಲಭವಾಗಿ ಅದು ಕಳೆದೇ ಹೋಗಿದೆ ಎಂಬ ಭಾವನೆ ಆಗ ವಿದ್ವಾಂಸರಲ್ಲಿತ್ತು. ಇದಕ್ಕೆ ಕಾರಣ ಜನರು ಪ್ರಾಚೀನ ತಾಳೆಪತ್ರ ಗ್ರಂಥಗಳನ್ನು ರಕ್ಷಿಸುವುದರಲ್ಲಿ ತೋರಿಸುತ್ತಿದ್ದ ಅನಾಸಕ್ತಿ. ಅದರಿಂದಲೇ ನಮ್ಮ ಭಾಷೆಗಳ ಅನೇಕ ಶ್ರೇಷ್ಠ ನಾಟಕಗಳು, ಕಾವ್ಯಗಳು, ನಿಬಂಧಗಳು ಇಂದು ಕಣ್ಮರೆಯಾಗಿವೆ. ಅರ್ಥಶಾಸ್ತ್ರದ ಕೆಲವು ವಾಕ್ಯಗಳೂ ಶ್ಲೋಕಗಳೂ ಉದ್ಧರಣ (Quotation) ರೂಪವಾಗಿ ಅಲ್ಲಲ್ಲಿ ದೊರಕುತ್ತಿದ್ದುವಷ್ಟೆ, ಸಮಗ್ರ ಕೃತಿಯು ಎಲ್ಲೂ ದೊರಕುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಆರ್.ಶಾಮಶಾಸ್ತ್ರಿಗಳಿಗೆ ಅರ್ಥಶಾಸ್ತ್ರದ ಪೂರ್ಣಗ್ರಂಥವು ದೊರಕಿದ್ದು ಅಮೂಲ್ಯರತ್ನವೇ ಸಿಕ್ಕಿದಂತಾಯಿತು. ಅವರು ಅದನ್ನು ದೇವನಾಗರೀ ಲಿಪಿಯಲ್ಲಿ ಬರೆದು ಮುದ್ರಣಕ್ಕೆ ಸಿದ್ಧಪಡಿಸಿದರು. ಗವರ್ನಮೆಂಟ್ ಓರಿಯೆಂಟಲ್ ಲೈಬ್ರರಿಯ ಮುಖ್ಯಾಧಿಕಾರಿ (Curator) ಆಗಿದ್ದ ಎ. ಮಹಾದೇವಶಾಸ್ತ್ರಿಗಳಿಗೆ ತುಂಬ ಸಂತೋಷವಾಗಿ ಅರ್ಥಶಾಸ್ತ್ರದ ಮುದ್ರಣ ಮಾಡಿಸಿದರು. ಹೀಗೆ ಕೌಟಿಲ್ಯನ ಅರ್ಥಶಾಸ್ತ್ರವು ಬೆಳಕಿಗೆ ಬಂದಿತು. ಶಾಮಶಾಸ್ತ್ರಿಗಳೂ ಮೈಸೂರೂ ಜಗತ್‌ಪ್ರಸಿದ್ಧಿಯನ್ನು ಪಡೆಯುವಂತಾಯಿತು.

ಸಂಸ್ಕೃತದಲ್ಲಿರುವ ಅರ್ಥಶಾಸ್ತ್ರದ ಅರ್ಥ ಎಲ್ಲ ಜನರಿಗೂ ತಿಳಿಯುವಂತಾಗಬೇಕೆಂದು ಶಾಮಶಾಸ್ತ್ರಿಗಳು ಅದನ್ನು ಇಂಗ್ಲೀಷಿಗೆ ಭಾಷಾಂತರಿಸಿದರು. ಆ ಅನುವಾದವು 1915 ರಲ್ಲಿ ಪ್ರಕಟವಾಯಿತು. ವಿಶ್ವದ ಎಲ್ಲ ಪ್ರಾಚ್ಯ ವಿದ್ಯಾಪರಿಣತರಿಗೆ ಅರ್ಥಶಾಸ್ತ್ರದ ಮಹತ್ತ್ವ ಅರಿವಿಗೆ ಬಂದಿತು. ರಾಜ್ಯಾಡಳಿತದಲ್ಲಿ ಎರಡು ಸಾವಿರ ವರ್ಷಗಳ ಹಿಂದೆ ಭಾರತೀಯರ ನೈಪುಣ್ಯವು ಜಗತ್ತಿಗೆ ತಿಳಿಯಿತು.

ಅಮೆರಿಕದ ಓರಿಯೆಂಟಲ್ ವಿಶ್ವವಿದ್ಯಾಲಯವು ಆರ್. ಶಾಮಶಾಸ್ತ್ರಿಗಳಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು. ಅಂದು ಭಾರತವನ್ನು ಆಳುತ್ತಿದ್ದ ಬ್ರಿಟಿಷ್ ಸರ್ಕಾರವೂ ಅವರಿಗೆ ಮಹಾಮಹೋಪಾಧ್ಯಾಯ ಎಂಬ ಬಿರುದನ್ನು ನೀಡಿತು.

ಆಗ ಮೈಸೂರು ರಾಜ್ಯವನ್ನು ಆಳುತ್ತಿದ್ದ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಯೂರೋಪ್ ಪ್ರವಾಸಕ್ಕೆ ಹೋಗಿದ್ದರಂತೆ. ಜರ್ಮನಿಯಲ್ಲಿ ಅವರನ್ನು ಮೈಸೂರಿನ ಮಹಾರಾಜರು ಎಂದು ಸಭೆಯಲ್ಲಿ ಪರಿಚಯಿಸಿದಾಗ ಅಲ್ಲಿದ್ದವರು 'ನೀವು ಶಾಮಶಾಸ್ತ್ರಿಗಳ ಮೈಸೂರಿನ ಮಹಾರಾಜರೇ?' ಎಂದು ಕೇಳಿದರಂತೆ. ಶಾಮಶಾಸ್ತ್ರಿಗಳು ಇಷ್ಟೊಂದು ಪ್ರಸಿದ್ಧರಾಗಿದ್ದುದು ಅವರ ವಿದ್ವತ್ತಿಗೆ ಸಂದ ಗೌರವ. **ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ ಎಂಬ ವಾಕ್ಯ ಸತ್ಯವಾಯಿತು.**



ಡಾ. ಆರ್. ಶಾಮಶಾಸ್ತ್ರಿ

ಡಾ. ಆರ್. ಶಾಮಶಾಸ್ತ್ರಿಗಳು ಬೆಳಕಿಗೆ ತಂದ ಅರ್ಥಶಾಸ್ತ್ರದಲ್ಲೇನಿದೆ ಎಂದು ನೋಡೋಣ. ಇದನ್ನು ಬರೆದದ್ದು ಕೌಟಿಲ್ಯನೇ ಎಂಬುದು ಗ್ರಂಥದ ವಾಕ್ಯದಿಂದಲೇ ಸ್ಪಷ್ಟವಾಗುತ್ತದೆ.

ಸುಖಗ್ರಹಣ ವಿಜ್ಞೇಯಂ ತತ್ತ್ವಾರ್ಥಪದನಿಶ್ಚಿತಮ್ ।
ಕೌಟಿಲ್ಯೇನ ಕೃತಂ ಶಾಸ್ತ್ರಂ ವಿಮುಕ್ತ ಗ್ರಂಥವಿಸ್ತರಮ್ ॥

ಸುಖವಾಗಿ ಗ್ರಹಿಸಲು ಆಗುವುದೂ ತತ್ತ್ವವನ್ನು ತಿಳಿಸುವ ಪದಗಳನ್ನುಳ್ಳದ್ದೂ, ಅವಶ್ಯವಲ್ಲದ ಅಧಿಕ ಶಬ್ದಗಳನ್ನು ಬಿಟ್ಟಿರುವುದೂ ಆದ ಈ ಶಾಸ್ತ್ರವು ಕೌಟಿಲ್ಯನಿಂದ ರಚಿತವಾಗಿದೆ ಎಂದು ಈ ಶ್ಲೋಕದ ತಾತ್ಪರ್ಯ. ಇಷ್ಟೇ ಅಲ್ಲದೆ ನಂದರಾಜರನ್ನು ಉನ್ಮೂಲರನ್ನಾಗಿ ಮಾಡಿದವನೇ ಈ ಶಾಸ್ತ್ರವನ್ನು ರಚಿಸಿದನೆಂಬುದೂ ಗ್ರಂಥದಲ್ಲಿಯೇ ಹೇಳಲ್ಪಟ್ಟಿದೆ.

ಯೇನ ಶಾಸ್ತ್ರಂ ಚ ಶಸ್ತ್ರಂ ಚ ನಂದರಾಜಗತಾ ಚ ಭೂಃ।
ಅಮರ್ಷೇಣೋದ್ಧೃತಾನ್ಯಾಶು ತೇನ ಶಾಸ್ತ್ರಮಿದಂ ಕೃತಮ್ ॥

ಕೌಟಿಲ್ಯನಿಗೆ ವಿಷ್ಣುಗುಪ್ತ, ಚಾಣಕ್ಯ ಎಂಬ ಹೆಸರುಗಳೂ ಇದ್ದುವು. ಗ್ರಂಥದ ಕೊನೆಯಲ್ಲಿ

ದೃಷ್ಟ್ವಾ ವಿಪ್ರತಿಪತ್ತಿಂ
ಬಹುಧಾ ಶಾಸ್ತ್ರೇಷು ಭಾಷ್ಯಕಾರಾಣಾಮ್ ।
ಸ್ವಯಂಮೇನ ವಿಷ್ಣುಗುಪ್ತಃ
ಚಕಾರ ಸೂತ್ರಂ ಚ ಭಾಷ್ಯಂ ಚ ॥

ಎಂಬ ಪದ್ಯವಿದೆ. ಶಾಸ್ತ್ರಗಳಲ್ಲಿ ಅನೇಕ ಭಾಷ್ಯಕಾರರು ಪರಸ್ಪರ ವಿರುದ್ಧ ಅಭಿಪ್ರಾಯಗಳನ್ನು ತೋರಿಸುವುದನ್ನು ಕಂಡು ವಿಷ್ಣುಗುಪ್ತನು ತಾನೇ ಸೂತ್ರಗಳನ್ನೂ ಭಾಷ್ಯವನ್ನೂ ರಚಿಸಿದನು ಎಂದು ಇದರ ಅಭಿಪ್ರಾಯ.

ವಿಷಯದ ದೃಷ್ಟಿಯಿಂದ ನೋಡುವುದಾದರೆ ಅರ್ಥಶಾಸ್ತ್ರವು ಅತ್ಯಂತ ವ್ಯಾಪಕವಾಗಿದೆ. ಸಾಮ್ರಾಜ್ಯವನ್ನು ಕಾಪಾಡುವ ವಿದ್ಯೆಯೇ ಅರ್ಥ. ಜನರು ವಾಸಿಸುವ ದೇಶವನ್ನೇ ಇಲ್ಲಿ ಅರ್ಥವೆಂದು ಕರೆದಿದ್ದಾರೆ. ವಿನಯಾಧಿಕಾರಿಕ, ಅಧ್ಯಕ್ಷ ಪ್ರಚಾರ, ಧರ್ಮಸ್ಥೀಯ, ಕಂಟಕಶೋಧನ, ಯೋಗವೃತ್ತ, ಮಂಡಲಯೋನಿ, ಷಾಡ್ಗುಣ್ಯ, ವ್ಯಸನಾಧಿಕಾರಿಕ, ಅಭಿಯಾಸ್ಯತ್‌ಕರ್ಮ, ಸಾಂಗ್ರಾಮಿಕ, ಉಪಾಂಶು ದಂಡ, ಆಬಲೀಯಸ, ದುರ್ಗಲಂಭೋಪಾಯ, ಔಪನಿಷದಿಕ, ತಂತ್ರಯುಕ್ತ ಎಂಬ ಹದಿನೈದು ಅಧಿಕರಣಗಳಲ್ಲ;ಇ ರಾಜ್ಯದ ಆಡಳಿತಕ್ಕೆ ಸಂಬಂಧಿಸಿದ ಸಮಸ್ತ ವಿಷಯಗಳನ್ನೂ ಕೌಟಿಲ್ಯನು ಪ್ರತಿಪಾದಿಸಿದ್ದಾನೆ. ಪ್ರಜಾ ರಕ್ಷಣೆಗೆ, ಪ್ರಜೆಗಳು ಪೀಡೆಯನ್ನು ಅನುಭವಿಸದೆ ಸುಖವಾಗಿರುವುದಕ್ಕೆ ರಾಜನು ಆದ್ಯ ಗಮನವನ್ನು ನೀಡಬೇಕು ಎಂಬುದು ಕೌಟಿಲ್ಯನ ಮುಖ್ಯ ಸಿದ್ಧಾಂತ. ಸ್ವಸುಖಂ ನ ಸುಖಂ ರಾಜ್ಞಃ ಪ್ರಜಾನಾಂತು ಹಿತಂ ಸುಖಮ್ ಎಂಬುದು ಅವನ ಮಾತು. ತನ್ನ ಸುಖ ರಾಜನಿಗೆ ನಿಜವಾದ ಸುಖವಲ್ಲ. ಪ್ರಜೆಗಳಿಗೆ ಯಾವುದು ಹಿತವೋ ಅದೇ ರಾಜನಿಗೆ ಸುಖ ಎಂದು ಅವನು ಬೋಧಿಸಿದ್ದಾನೆ.

ರಾಜನು ಯಾವ ರೀತಿಯಾದ ವಿದ್ಯಾಭ್ಯಾಸವನ್ನು ಪಡೆದಿರಬೇಕು. ದಿನದ ಒಂದೊಂದು ಯಾಮದಲ್ಲಿ ಯಾವ ಯಾವ ಕರ್ತವ್ಯಗಳನ್ನು ಮಾಡಬೇಕು ಎಂಬುದನ್ನು ಕೌಟಿಲ್ಯನು ನಿರ್ದೇಶಿಸಿದ್ದಾನೆ. ಮಂತ್ರಿಗಳನ್ನು ಆರಿಸಿಕೊಳ್ಳುವಾಗ ಯಾವ ಪರೀಕ್ಷೆಗಳಿಗೆ ಅಭ್ಯರ್ಥಿಗಳನ್ನು ಒಳಪಡಿಸಬೇಕು ಎಂಬುದನ್ನೂ ವಿವರಿಸಿದ್ದಾನೆ. ಯಾವನೇ ರಾಜನು ಎಲ್ಲ ಕೆಲಸಗಳನ್ನು ತಾನೇ ಮಾಡುವುದು ಶಕ್ಯವಲ್ಲ.

'ಸಹಾಯಸಾಧ್ಯಂ ರಾಜತ್ವಂ ಚಕ್ರಮೇಕಂ ನ ವರ್ತತೇ' ರಾಜತ್ವವು ಅನೇಕರ ಸಹಾಯದಿಂದ ಮುನ್ನಡೆಯುತ್ತದೆ. ಒಂದೇ ಚಕ್ರವು ದೂರ ಓಡಲಾರದು. ಆದ್ದರಿಂದ ರಾಜನಿಗೆ ಸಚಿವರಿರಬೇಕು ಎಂಬ ಉಪದೇಶವನ್ನೂ ಕೌಟಿಲ್ಯನು ನೀಡಿದ್ದಾನೆ.

ಕೌಟಿಲ್ಯನು ಅರ್ಥಶಾಸ್ತ್ರವನ್ನು ರಚಿಸುವುದಕ್ಕೂ ಮುಂಚೆ ನಮ್ಮ ದೇಶದಲ್ಲಿ ಅನೇಕ ಅರ್ಥಶಾಸ್ತ್ರಗಳಿದ್ದುವು. ಅವುಗಳ ಎಲ್ಲ ಅಭಿಪ್ರಾಯಗಳನ್ನು ಸಂಗ್ರಹಿಸಿ, ಪ್ರಾಬಲ್ಯ ದೌರ್ಬಲ್ಯಗಳನ್ನು ವಿಮರ್ಶಿಸಿ ಅನಂತರ ತನ್ನ ತೀರ್ಮಾನವನ್ನು ಕೊಡುವುದು ಕೌಟಿಲ್ಯನ ವೈಶಿಷ್ಟ್ಯ.

ಈ ಅರ್ಥಶಾಸ್ತ್ರವನ್ನು ಅನುಸರಿಸಿ ಕಾಮಂಧಕನೆಂಬ ವಿದ್ವಾಂಸನು ನೀತಿಸಾರ ಎಂಬ ಗ್ರಂಥವನ್ನು ರಚಿಸಿದನು. ಅದು ಕಾಮಂದಿಕೀಯ ಎಂದು ಪ್ರಸಿದ್ಧವಾಗಿದೆ. ಕರ್ನಾಟಕದವನೇ ಆದ ಸೋಮದೇವ ಸೂರಿಯು ಚಾಣಕ್ಯ ನೀತಿ ಸೂತ್ರ ಎಂಬ ಗ್ರಂಥವನ್ನು ಬರೆದಿದ್ದಾನೆ. ಈಗ ಪ್ರಪಂಚದ ನಾನಾ ಭಾಷೆಗಳಲ್ಲಿ ಅರ್ಥಶಾಸ್ತ್ರದ ಅನುವಾದಗಳಿವೆ.

ಆದರೆ ಕೌಟಿಲ್ಯನು ಹೇಳಿರುವುದೆಲ್ಲ ಸರಿ, ಅದು ಸಾರ್ವಕಾಲಿಕ ಸತ್ಯ ಎಂದು ನಂಬಬೇಕಾಗಿಲ್ಲ. ಅವನು ಹೇಳಿರುವ ಅನೇಕ ವಿಷಯಗಳು ಕೇವಲ ರಾಜಪ್ರಭುತ್ವಕ್ಕೆ ಅನ್ವಯಿಸುತ್ತವೆ, ಪ್ರಜಾಪ್ರಭುತ್ವಕ್ಕೆ ಅನ್ವಯಿಸುವುದಿಲ್ಲ.

ಪ್ರಾಯಶಃ ಅದೇ ಕಾಲದಲ್ಲಿ ಗ್ರೀಸ್ ದೇಶದಲ್ಲಿ ರಚಿತವಾದ ಪ್ಲೇಟೋ ಎಂಬ ದಾರ್ಶನಿಕನು ಬರೆದ ರಿಪಬ್ಲಿಕ್ ಎಂಬ ಗ್ರಂಥದಲ್ಲಿ ನಿರಂಕುಶ ರಾಜಪ್ರಭುತ್ವ, ಸರ್ವಾಧಿಕಾರಿಯ ಆಡಳಿತ, ಶ್ರೀಮಂತರ ಗುಂಪಿನ ಆಡಳಿತ, ಪ್ರಜಾಪ್ರಭುತ್ವ ಎಂಬ ಅನೇಕ ಆಡಳಿತ ವ್ಯವಸ್ಥೆಗಳ ವರ್ಣನೆಯಿದ್ದು ಅವುಗಳಲ್ಲಿರುವ ಒಳಿತು–ಕೆಡಕುಗಳನ್ನು ವಿಮರ್ಶಿಸಲಾಗಿದೆ. ಕೌಟಿಲ್ಯನು ಕೇವಲ ನಿರಂಕುಶ ರಾಜಪ್ರಭುತ್ವದ ಬಗೆಗೆ ಮಾತನಾಡುತ್ತಾನೆ. ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರುವ ನಮಗೆ ಕೌಟಿಲ್ಯನು ಹೇಳುವ ಹಲವು ಅಂಶಗಳು ಅಪೇಕ್ಷಿತವಲ್ಲ. ಅವನು ಹೇಳುವ ಕೆಲವು ಉಪಾಯಗಳು ಅಥವಾ ಸಾಧನಗಳು ವಿಜ್ಞಾನದ ಪ್ರಗತಿಯ ಈ ದಿನಗಳಲ್ಲಿ ಅರ್ಥಹೀನವಾಗಿರಬಹುದು. ಪಟ್ಟಣದ ಸುತ್ತಲೂ ಕೋಟೆಯನ್ನು ಕಟ್ಟುವುದು, ದುರ್ಗನಿರ್ಮಾಣ ಅಂದು (ಎರಡು ಸಾವಿರ ವರ್ಷಗಳ ಹಿಂದೆ ಅರ್ಥವತ್ತಾಗಿದ್ದಿರಬಹುದು. ಈಗ ವಿಮಾನ ಯುಗದಲ್ಲಿ ಅದೆಲ್ಲ ಅಪ್ರಯೋಜನವೆನಿಸುತ್ತದೆ.

ಔಪನಿಷದಿಕ ಎಂಬ ಭಾಗದಲ್ಲಿ ಶತ್ರುಗಳನ್ನು ಕೊಲ್ಲಲು ಕೌಟಿಲ್ಯನು ಹೇಳುವ ಉಪಾಯಗಳು ಧರ್ಮಸಮ್ಮತ, ನ್ಯಾಯಸಮ್ಮತ ಎನಿಸುವುದಿಲ್ಲ. ವಿಷ ನಿರ್ಮಾಣದಲ್ಲಿ ಅವನು ಹೇಳುವುದು ಎಷ್ಟು ವೈಜ್ಞಾನಿಕ ಎಂಬ ಪ್ರಶ್ನೆಯೂ ಹುಟ್ಟುತ್ತದೆ.

ಆದ್ದರಿಂದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇಂದು ಎಷ್ಟು ಗ್ರಾಹ್ಯ ಎಷ್ಟು ತ್ಯಾಜ್ಯ ಎಂಬುದನ್ನು ನಿಶ್ಚಯಿಸಬೇಕು. ಬಾಣನೇ ಮುಂತಾದ ಕವಿಗಳೂ ಪರೋಕ್ಷವಾಗಿ ಅರ್ಥಶಾಸ್ತ್ರದ ನಿಷ್ಕರುಣ ಕಾರ್ಯ ವಿಧಾನಗಳನ್ನು ನಿಂದಿಸಿದ್ದಾರೆ. ಯುಕ್ತಾಯುಕ್ತ ವಿವೇಚನೆಯನ್ನು ಇಟ್ಟುಕೊಂಡು ಅರ್ಥಶಾಸ್ತ್ರದ ಅಧ್ಯಯನ ಇಂದಿನ ಆವಶ್ಯಕತೆ.

ಜೆ.ಪಿ.ನಗರ ಲಯನ್ಸ್ ಕ್ಲಬ್‌ನ ವಾರ್ಷಿಕೋತ್ಸವ



ಮೈಸೂರು ಜೆ.ಪಿ.ನಗರ ಲಯನ್ಸ್ ಕ್ಲಬ್ಬಿನ 16ನೇ ವರ್ಷದ ಸಂಸ್ಥಾಪನ ದಿನದ ವಾರ್ಷಿಕೋತ್ಸವ ವಿಶ್ವೇಶ್ವರನಗರದ ರಾಹುಲ್ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಿತು. ಈ ವೇಳೆ ಲಯನ್ಸ್ ಜಿಲ್ಲೆ 317 ಜಿಯ ಜಿಲ್ಲಾ ರಾಜ್ಯಪಾಲರಾದ ಲಯನ್ ಎನ್.ಸುಬ್ರಹ್ಮಣ್ಯ, ಜಿಲ್ಲೆಯ ಪ್ರಥಮ ಮಹಿಳೆ ವಾಣಿ ಸುಬ್ರಹ್ಮಣ್ಯ, ಕ್ಲಬ್ಬಿನ ಅಧ್ಯಕ್ಷ ಲಯನ್ ಕೆ.ಎ.ಸಿದ್ದಲಿಂಗಪ್ಪ, ಪ್ರಾಂತ್ಯ ಮುಖ್ಯಸ್ಥ ಲಯನ್ ಬಿ.ಎಲ್.ಗಿರೀಶ್, ಜಿಲ್ಲಾ ಸಂಪುಟ ಕಾರ್ಯದರ್ಶಿ ಲಯನ್ ಸಿ.ಡಿ.ಕೃಷ್ಣ, ಜಿಲ್ಲಾ ಸಂಪುಟ ಕೋಶಾಧಿಕಾರಿ ಲಯನ್ ಸಿದ್ದೇಗೌಡ, ಕ್ಲಬ್ಬಿನ ಕಾರ್ಯದರ್ಶಿ ಲಯನ್ ವಿ.ಸತ್ಯನಾರಾಯಣ, ಕೋಶಾಧಿಕಾರಿ ಕೆ.ಸುರೇಶ್, ಸಂಸ್ಥಾಪನಾ ಕಾರ್ಯಕ್ರಮದ ಮುಖ್ಯಸ್ಥ ಲಯನ್ ಬಿ.ಎನ್.ಸುಧಾಕರ್, ಉಪಾಧ್ಯಕ್ಷ ಲಯನ್ ಧನ್ಯ ಮೂರ್ತಿ ಉಪಸ್ಥಿತರಿದ್ದರು.

ಮಾಸಿಕ ವ್ಯಾಸಂಗ ವೇತನ, ಫೆಲೋಶಿಪ್‌ಗೆ ಅರ್ಜಿ

ಮೈಸೂರು,ಜ.7–2024–25ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ), ಹಾಗೂ 3(ಬಿ)ಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಜ.20ರೊಳಗೆ ಅರ್ಜಿ ಸಲ್ಲಿಸಬೇಕು. ಆಸಕ್ತರು https://bcwd.karnataka.gov.in ಮೂಲಕ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ. ವಿದ್ಯಾರ್ಥಿಯು ರಾಜ್ಯದ ಖಾಯಂ ನಿವಾಸಿಯಾಗಿದ್ದು, ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ), ಹಾಗೂ 3(ಬಿ)ಗೆ ಸೇರಿರಬೇಕು. ಪ್ರವರ್ಗ–1, ರೂ.4.50 ಲಕ್ಷ 2(ಎ), 3(ಎ) ಹಾಗೂ 3(ಬಿ) 3.50 ಲಕ್ಷ ರೂ. ವಾರ್ಷಿಕ ಆದಾಯ ಮಿತಿ ಹೊಂದಿರಬೇಕು. ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕು, ಅಭ್ಯರ್ಥಿಗಳು ಪೂರ್ಣಾವಧಿ ಪಿಎಚ್.ಡಿ ಅಧ್ಯಯನಕ್ಕಾಗಿ ಮಾಡಿಸುವ ನೋಂದಣಿ ದಿನಾಂಕವು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡುವ ವ್ಯಾಸಂಗ ವೇತನ, ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಹಿಂದಿನ 2 ವರ್ಷದೊಳಗಿದ್ದು, ಅರ್ಜಿ ಸಲ್ಲಿಸುವ ಸಾಲಿನಿಂದ ಪ್ರಥಮ ವರ್ಷದ ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿರಬೇಕು. ಮಾಹಿತಿಗೆ ದೂ.ಸಂಖ್ಯೆ: 8050 770004 ಅನ್ನು ಸಂಪರ್ಕಿಸಬಹುದು.

ದಂಡ, ಕಮಿಷನ್‌ರಹಿತ ತಂಬಾಕು ಮಾರಾಟಕ್ಕೆ ಅವಕಾಶ

ಮಾಜಿ ಸಂಸದ ಪ್ರತಾಪ್ ಸಿಂಹ ಮನವಿಗೆ ವಾಣಿಜ್ಯ ಕಾರ್ಯದರ್ಶಿ ಮನ್ನಣೆ

ನವದಹೆಲಿ, ಜ.7(ಬಿಎಲ್‌ಯು)– ಅನಧಿಕೃತ ಹೊಗೆಸೊಪ್ಪು ಕಾರ್ಡ್‌ದಾರರು ತಮ್ಮ ತಂಬಾಕನ್ನು ದಂಡ ಹಾಗೂ ಕಮಿಷನ್‌ರಹಿತವಾಗಿ ಮಾರಾಟಕ್ಕೆ ಅವಕಾಶ ಕಲ್ಪಿಸುವಂತೆ ಮಾಜಿ ಸಂಸದ ಪ್ರತಾಪ್ ಸಿಂಹ ಇಂದು ಕೇಂದ್ರ ವಾಣಿಜ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ರಾಜೇಶ್ ಅಗರವಾಲ್ ಅವರಿಗೆ ಮನವಿ ಮಾಡಿದ್ದಾರೆ.

ಕರ್ನಾಟಕದಲ್ಲಿ ಸುಮಾರು 40 ಸಾವಿರ ಅಧಿಕೃತ ತಂಬಾಕು ರೈತರಿದ್ದು, ಸುಮಾರು 11 ಸಾವಿರ ಅಂದರೆ ಶೇಕಡ 25ಕ್ಕಿಂತ ಹೆಚ್ಚು ಅನಧಿಕೃತ ತಂಬಾಕು ಬೆಳೆಗಾರರಿದ್ದಾರೆ. ಮಳೆ ಆಶ್ರಿತ ಪ್ರದೇಶದ ಜನರು ತಂಬಾಕು ಬೆಳೆಯನ್ನೆ ಅವಲಂಬಿಸಿದ್ದಾರೆ ಎಂದು ತಿಳಿಸಿದ್ದಾರೆ.

ಆದರೆ 2024–25 ನೇ ಸಾಲಿನಲ್ಲಿ ಅಧಿಕ ಮಳೆಯಾದ ಕಾರಣ ತಂಬಾಕು ಗುಣಮಟ್ಟ ಹಾಗೂ ಇಳುವರಿ ಕಡಿಮೆಯಾಗಿದೆ. ಇದರಿಂದ 100 ಮಿಲಿಯನ್ ಕೆಜಿ ಬೆಳೆ ನಿಗದಿ ಮಾಡಿದ್ದರೂ ಅಧಿಕೃತ ಹಾಗೂ ಅನಧಿಕೃತ ಬೆಳೆಗಾರರು ಸೇರಿ 95 ಮಿಲಿಯನ್ ಕೆಜಿ ತಂಬಾಕು ಮಾತ್ರ ಬೆಳೆಯಲು ಸಾಧ್ಯವಾಗಿದೆ ಎಂದು ಹೇಳಿದ್ದಾರೆ.



ನವದೆಹಲಿಯಲ್ಲಿ ಮಂಗಳವಾರ ಕೇಂದ್ರ ವಾಣಿಜ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ರಾಜೇಶ್ ಅಗರವಾಲ್ ಅವರನ್ನು ಭೇಟಿ ಮಾಡಿದ ಮಾಜಿ ಸಂಸದ ಪ್ರತಾಪ್ ಸಿಂಹ, ಅನಧಿಕೃತ ಕಾರ್ಡ್‌ದಾರರು ತಾವು ಬೆಳೆದ ತಂಬಾಕನ್ನು ದಂಡ ಹಾಗೂ ಕಮಿಷನ್‌ರಹಿತ ಮಾರಾಟಕ್ಕೆ ಅವಕಾಶ ನೀಡುವಂತೆ ಮನವಿ ಮಾಡಿದರು.

ಅನಧಿಕೃತ ತಂಬಾಕು ಬೆಳೆಗಾರರಿಗೆ ತಂಬಾಕು ಮಾರಾಟಕ್ಕೆ ಅವಕಾಶ ನೀಡದ ಕಾರಣ ಬೆಳೆದ ತಂಬಾಕನ್ನು ತಮ್ಮ ಬಳಿ ಇಟ್ಟುಕೊಂಡಿದ್ದಾರೆ. ಹಣದ ಅವಶ್ಯಕತೆ ಇರುವವರು ಬೇರೆಯವರ ಹೆಸರಿನಲ್ಲಿ ತಂಬಾಕು ಮಾರಾಟ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಅನಧಿಕೃತ ತಂಬಾಕು ಬೆಳೆಗಾರರು ತಂಬಾಕು ಮಾರಾಟ ಮಾಡಲು ಅವಕಾಶ ನೀಡುವಂತೆ ಪ್ರತಾಪ್ ಸಿಂಹ ಕೋರಿದ್ದಾರೆ.

ಜೊತೆಗೆ ಅನಧಿಕೃತ ಬೆಳೆಗಾರರಿಗೆ ತಕ್ಷಣವೇ ದಂಡ ರಹಿತವಾಗಿ ತಂಬಾಕು ಮಾರಾಟ ಮಾಡಲು ಅವಕಾಶ ನೀಡಬೇಕೆಂದು ಕೋರಿಕೊಂಡಿದ್ದಾರೆ.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ರಾಜೇಶ್ ಅಗರವಾಲ್ ಅವರು ಅನಧಿಕೃತ ಬೆಳೆಗಾರರು ತಂಬಾಕು ಮಾರಾಟ ಮಾಡಲು ಅವಕಾಶ ಮಾಡಿಕೊಡಲು ಎಲ್ಲಾ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದಾರೆ. ಪ್ರಸ್ತುತ ಪ್ರತಾಪ್ ಸಿಂಹ ಮಾಜಿ ಸಂಸದರಾಗಿದ್ದರೂ ಮೈಸೂರು ಭಾಗದ ತಂಬಾಕು ಬೆಳೆಗಾರರ ವಿಚಾರದಲ್ಲಿ ಕಾಳಜಿವುಳ್ಳವರಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

'ಕ್ರೀಡಾ ಮಿತ್ರ'

ಪ್ರತಿಷ್ಠಿತ ಮೈಸೂರು ಗಾಲ್ಫ್ ಲೀಗ್ ಪಂದ್ಯಾವಳಿಗೆ ಮೈಸೂರು ವಾರಿಯರ್ಸ್ ಗಾಲ್ಫ್ ತಂಡ ಪ್ರಕಟಿಸಿದ ಎನ್‌ಆರ್ ಗ್ರೂಪ್



ಪ್ರತಿಷ್ಠಿತ ಮೈಸೂರು ಗಾಲ್ಫ್ ಲೀಗ್ (ಎಂಜಿಎಲ್) ಪಂದ್ಯಾವಳಿಯಲ್ಲಿ ಸ್ಪರ್ಧಿಸಲು ಎನ್‌ಆರ್ ಗ್ರೂಪ್ ತನ್ನ ಹೊಸ ಮೈಸೂರು ವಾರಿಯರ್ಸ್ ಗಾಲ್ಫ್ ತಂಡವನ್ನು ಪ್ರಕಟಿಸಿದೆ.

ಜನವರಿ 11ರಿಂದ 25ರವರೆಗೆ ನಡೆಯಲಿರುವ ಗಾಲ್ಫ್ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ಗಾಲ್ಫ್ ತಂಡವು ಇತರ ಏಳು ತಂಡಗಳ ವಿರುದ್ಧ ಸೆಣೆಸಲಿದೆ.

ಮೈಸೂರು,ಜ.7–ಪ್ರತಿಷ್ಠಿತ ಮೈಸೂರು ಗಾಲ್ಫ್ ಲೀಗ್ (ಎಂಜಿಎಲ್) ಪಂದ್ಯಾವಳಿಯಲ್ಲಿ ಸ್ಪರ್ಧಿಸಲು ಎನ್‌ಆರ್ ಗ್ರೂಪ್ ತನ್ನ ಹೊಸ ಮೈಸೂರು ವಾರಿಯರ್ಸ್ ಗಾಲ್ಫ್ ತಂಡವನ್ನು ಪ್ರಕಟಿಸಿದೆ.

ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯೂಜಿಸಿ) ವತಿಯಿಂದ ನಡೆಯಲಿರುವ ಈ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್, ಗ್ರ್ಯಾಂಡ್ ಸೆರಿನ್ ರಾಯಲ್ಸ್, ಗ್ರಾವಿಟಿ ಒನ್ ವನಜ, ನಕ್ಷಾ ಮಾಸ್ಟರ್ಸ್, ಸ್ಯಾಂಡಲ್‌ವುಡ್ ಸ್ಟ್ರೈಕರ್ಸ್, ವಾಕ್‌ಮೇಟ್ ಏಸಸ್ ಮತ್ತು ಸಾನ್ವೀಸ್ ಮೈಸೂರು ಟೈಗರ್ಸ್ ಸೇರಿದಂತೆ ಒಟ್ಟು ಎಂಟು ತಂಡಗಳು ಪರಸ್ಪರ ಸೆಣೆಸಲಿವೆ.

ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕರಾದ ಅರ್ಜುನ್ ರಂಗ, ಮೈಸೂರು ವಾರಿಯರ್ಸ್ ಗಾಲ್ಫ್ ತಂಡದ ನಾಯಕರಾಗಿದ್ದು, ಅವರೊಂದಿಗೆ ಖ್ಯಾತ ಗಾಲ್ಫ್ ಆಟಗಾರ ಎಂ.ಜಿ.ಚೆಂಗಪ್ಪ ಆಡುತ್ತಿದ್ದಾರೆ.

ಹಲವು ಸುತ್ತುಗಳಲ್ಲಿ ನಡೆಯಲಿರುವ ಪಂದ್ಯಾವಳಿಯ ಮೊದಲ ಸುತ್ತು ಜನವರಿ 11 ರಂದು ಫೋರ್ ಬಾಲ್ ಸ್ವರೂಪದಲ್ಲಿ ನಡೆಯಲಿದೆ. ಎರಡನೇ ಸುತ್ತು ಜನವರಿ 12ರಂದು ಫೋರ್ ಸಮ್ (ಆಲ್ಟರ್‌ನೇಟ್ ಶಾಟ್) ಸ್ವರೂಪದಲ್ಲಿ ನಡೆಯಲಿದೆ. ಮೂರನೇ ಸುತ್ತು ಜನವರಿ 18ರಂದು ಟೀಮ್ ಸ್ಕ್ರಾಂಬಲ್ ಸ್ವರೂಪದಲ್ಲಿ ನಡೆಯಲಿದ್ದು, ನಾಲ್ಕನೇ ಸುತ್ತು ಜನವರಿ 19ರಂದು ಥ್ರೀ ಬಾಲ್ ಮ್ಯಾಚ್ ಪ್ಲೇ ಸ್ವರೂಪದಲ್ಲಿ ಜರುಗಲಿದೆ. ಆ ಸುತ್ತಿನಲ್ಲಿ ಅಂತಿಮ ಸುತ್ತಿನ ಸ್ಪರ್ಧಿಗಳ ಹೆಸರು ಘೋಷಣೆ ಮಾಡಲಾಗುತ್ತದೆ. ಅಂತಿಮ ಸುತ್ತು ಜನವರಿ 25ರಂದು ಎಲ್ಲಾ ಸ್ವರೂಪಗಳಲ್ಲಿ ನಡೆಯಲಿದೆ.

ಮೈಸೂರು ವಾರಿಯರ್ಸ್ ಗಾಲ್ಫ್ ತಂಡವು ಈಗಾಗಲೇ ಬೆಂಗಳೂರಿನ ಪ್ರತಿಷ್ಠಿತ ಟಿಎಸ್‌ಜಿ ಅಕಾಡೆಮಿಯಲ್ಲಿ ಎರಡು ದಿನಗಳ ಕಾಲ ಕಠಿಣ ತರಬೇತಿಯನ್ನು ಪಡೆದಿದೆ. ಪಂದ್ಯಾವಳಿಯ ಪೂರ್ವಭಾವಿಯಾಗಿ ಜನವರಿ 4ರಂದು ಜೆಡಬ್ಲ್ಯೂಜಿಸಿ ಸಮಿತಿ ಸದಸ್ಯರು ಮತ್ತು ಇತರ 7 ತಂಡಗಳ ಮಾಲೀಕರ ಸಮ್ಮುಖದಲ್ಲಿ ತಂಡಗಳ ಅಧಿಕೃತ ಜರ್ಸಿ ಮತ್ತು ಪಂದ್ಯಾವಳಿಯ ಆಂಥಮ್ ಅನ್ನು ಬಿಡುಗಡೆ ಮಾಡಲಾಗಿದೆ.

ಮೈಸೂರು ವಾರಿಯರ್ಸ್ ತಂಡವು ರಿಫಾರೆಸ್ಟ್ ಇಂಡಿಯಾ ಜೊತೆ ಸಹಭಾಗಿತ್ವ ಹೊಂದಿದ್ದು, ಪಂದ್ಯಾವಳಿಯಲ್ಲಿ ಗಳಿಸಿದ ಪ್ರತಿ ಪಾಯಿಂಟ್‌ಗೆ 10 ಸಸಿಗಳನ್ನು ನೆಡುವುದಾಗಿ ತಿಳಿಸಿದೆ. ಪಂದ್ಯಾವಳಿ ನಡೆಯಲಿರುವ ಮೂರು ವಾರಾಂತ್ಯಗಳಲ್ಲಿ ಸುಮಾರು 1,000 ಸಸಿಗಳನ್ನು ನೆಡುವ ಗುರಿಯನ್ನು ತಂಡವು ಹೊಂದಿದೆ.

ಈ ಕುರಿತು ಮಾತನಾಡಿದ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಅವರು, ಮೈಸೂರಿನ ಗಾಲ್ಫ್ ಇತಿಹಾಸದ ಮಹತ್ವದ ಭಾಗವಾಗಲು ನಮಗೆ ಹೆಮ್ಮೆ ಇದೆ. ಎಂಜಿಎಲ್ ಮಹತ್ವದ ವೇದಿಕೆಯನ್ನು ಒದಗಿಸುವುದರ ಜೊತೆಗೆ ಮೈಸೂರಿನ ಗಾಲ್ಫ್ ಸಮುದಾಯದ ಹುಮ್ಮಸ್ಸನ್ನು ಹೆಚ್ಚಿಸಲಿದೆ. ರಿಫಾರೆಸ್ಟ್ ಇಂಡಿಯಾ ಒಳಗೊಂಡು ಎಲ್ಲಾ ಪಾಲುದಾರರ ನೆರವಿಗೆ ನಾವು ಸದಾ ಕೃತಜ್ಞರು ಎಂದರು.

ದಕ್ಷಿಣ ವಲಯ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್ ಶಿಪ್: ಮೈಸೂರಿಗೆ 7 ಪದಕ

ಜಿಎಸ್‌ಎಯ ಜೀವಾಂಶ್ ರಾಷ್ಟ್ರೀಯ ದಾಖಲೆ

ಮೈಸೂರು, ಜ.7–ದಕ್ಷಿಣ ವಲಯ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಸುಬ್ರಹ್ಮಣ್ಯ ಜೀವಾಂಶ್, ರುತ್ವಾ ಮತ್ತು ಕೃತಿಕ್ ಒಟ್ಟು 7 ಪದಕ ಪಡೆದು, ಅತ್ಯುತ್ತಮ ಪ್ರದರ್ಶನದೊಂದಿಗೆ ಮೈಸೂರಿನ ಕೀರ್ತಿ ಮೆರೆದಿದ್ದಾರೆ.

ಆಂಧ್ರಪ್ರದೇಶ ಅಮೆಚೂರ್ ಅಕ್ವಾಟಿಕ್ ಅಸೋಸಿಯೇಷನ್ ವತಿಯಿಂದ ವಿಜಯವಾಡದಲ್ಲಿ ಡಿ.27ರಿಂದ 29ರವರೆಗೆ ನಡೆದ 35ನೇ ದಕ್ಷಿಣ ವಲಯ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್‌ಶಿಪ್ 2024ರಲ್ಲಿ ಮೈಸೂರಿನ ಜಿಎಸ್‌ಎ ತಂಡದ ಸುಬ್ರಹ್ಮಣ್ಯ ಜೀವಾಂಶ್ 2ಚಿನ್ನ ಹಾಗೂ 1ಬೆಳ್ಳಿ, ರುತ್ವಾ 3 ಬೆಳ್ಳಿ ಮತ್ತು ಕೃತಿಕ್ 1ಕಂಚಿನ ಪದಕ ಪಡೆದಿದ್ದಾರೆ.

ಜೆ.ಪಿ.ನಗರದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಈಜುಕೊಳದ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಕೋಚ್ ಪವನ್‌ಕುಮಾರ್ ಅವರ ಬಳಿ ತರಬೇತಿ ಪಡೆಯುತ್ತಿರುವ ಸುಬ್ರಹ್ಮಣ್ಯ ಜೀವಾಂಶ್ 200 ಮೀ. ಬಟರ್‌ಫ್ಲೈ ಹಾಗೂ 4x100 ಮೀ. ಬಟರ್ ಫ್ಲೈ ರಿಲೇಯಲ್ಲಿ 2 ಚಿನ್ನದ ಪದಕ ಹಾಗೂ 1500ಮೀ. ಫ್ರೀ ಸ್ಟೈಲ್‌ನಲ್ಲಿ ಒಂದು ಬೆಳ್ಳಿ ಪದಕ ಪಡೆದಿದ್ದಾರೆ.

ರುತ್ವಾ 50 ಮೀ. ಬಟರ್ ಫ್ಲೈ, 4X50ಮೀ. ಫ್ರೀ ಸ್ಟೈಲ್ ರಿಲೇ ಹಾಗೂ 4X50 ಮೀ. ಮೆಡ್ಲಿ ರಿಲೇಯಲ್ಲಿ 3 ಬೆಳ್ಳಿ ಪದಕ ಪಡೆದಿದ್ದು, ಕೃತಿಕ್ 100 ಮೀ. ಬಟರ್‌ಫ್ಲೈನಲ್ಲಿ ಕಂಚಿನ ಪದಕ ಪಡೆದಿದ್ದಾರೆ. ಇವರ ಅತ್ಯುತ್ತಮ ಸಾಧನೆಯನ್ನು ಜಿಎಸ್‌ಎ ತಂಡ ಅಭಿನಂದಿಸಿದೆ.

ರಾಷ್ಟ್ರೀಯ ದಾಖಲೆ : ಮೈಸೂರಿನ ಜೀವಾಂಶ್ ಹಾಗೂ ಬೆಂಗಳೂರಿನ ಅಗಸ್ತ್ಯ ಕರ್ನಾಟಕದ ಇಬ್ಬರು 4x100 ಮೀ. ಬಟರ್ ಫ್ಲೈ ರಿಲೇ (1.04.01)ಯಲ್ಲಿ ಚಿನ್ನದ ಪದಕ ಪಡೆದು, ದಕ್ಷಿಣ ವಲಯದ ರಾಷ್ಟ್ರೀಯ ದಾಖಲೆಯನ್ನು ಮುರಿದಿದ್ದಾರೆ.




ಆಂಧ್ರಪ್ರದೇಶದ ವಿಜಯವಾಡದಲ್ಲಿ ನಡೆದ ದಕ್ಷಿಣ ವಲಯ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಪದಕ ಪಡೆದ ಜೀವಾಂಶ್, ರುತ್ವಾ ಹಾಗೂ ಕೃತಿಕ ಜೊತೆ ಕೋಚ್ ಪವನ್‌ಕುಮಾರ್.

ಕರ್ನಾಟಕ ತಂಡವನ್ನು ಮುನ್ನಡೆಸಿದ ಪವನ್‌ಕುಮಾರ್ ಈ ದಕ್ಷಿಣ ವಲಯ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್ ಶಿಪ್‌ನಲ್ಲಿ ಕರ್ನಾಟಕ ತಂಡದ ಕೋಚ್ ಆಗಿ ಮೈಸೂರಿನ ಜಿಎಸ್‌ಎ ಮುಖ್ಯ ತರಬೇತುದಾರ ಪವನ್‌ಕುಮಾರ್ ಆಯ್ಕೆಯಾಗಿದ್ದರು. ಇವರ ನೇತೃತ್ವದಲ್ಲಿ ಕರ್ನಾಟಕ ತಂಡವು ಸಮಗ್ರ ಚಾಂಪಿಯನ್‌ಶಿಪ್ ಪಡೆದು ಕರ್ನಾಟಕಕ್ಕೆ ಹೆಮ್ಮೆ ತಂದಿದೆ.

ಜೂನಿಯರ್ ನ್ಯಾಷನಲ್ ಚಾಂಪಿಯನ್‌ಶಿಪ್‌ಗೆ ಕೆ.ರಾಜೇಶ್ವರಿ ಆಯ್ಕೆ

ಮೈಸೂರು, ಜ. 7– ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಜೂನಿಯರ್ ವಿಭಾಗದ ಮಹಿಳಾ ಕಬಡ್ಡಿ ಸ್ಟೇಟ್ ಚಾಂಪಿಯನ್‌ಶಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಜೂನಿಯರ್ ನ್ಯಾಷನಲ್ ಚಾಂಪಿಯನ್‌ಶಿಪ್‌ಗೆ ಕೆ.ರಾಜೇಶ್ವರಿ ಆಯ್ಕೆಯಾಗಿದ್ದಾರೆ.



ಜನವರಿ 8ರಿಂದ 11ರವರೆಗೆ ಉತ್ತರಾಖಂಡ್‌ನಲ್ಲಿ ನಡೆಯುವ ಜೂನಿಯರ್ ಕಬಡ್ಡಿ ನ್ಯಾಷನಲ್ ಚಾಂಪಿಯನ್‌ಶಿಪ್‌ಗೆ ಕರ್ನಾಟಕ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ.

ಕೆ.ರಾಜೇಶ್ವರಿ ಅವರು ನಗರದ ಕ್ಯಾತಮಾರನಹಳ್ಳಿ ಹ್ಯಾಪಿಗರ್ಲ್ ಕಬಡ್ಡಿ ತಂಡದಲ್ಲಿ ಕಳೆದ ಆರು ವರ್ಷಗಳಿಂದ ಕಬಡ್ಡಿ ತರಬೇತಿ ಪಡೆಯುತ್ತಿದ್ದಾರೆ. ಹ್ಯಾಪಿಗರ್ಲ್ ಕಬಡ್ಡಿ ತಂಡದ ಅಧ್ಯಕ್ಷ ರಘು, ಪ್ರಸನ್ನ ಕುಮಾರ್, ತರಬೇತುದಾರ ಇಲಿಯಾಸ್ ಪಾಷ, ಮೈಸೂರು ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಅಧ್ಯಕ್ಷ ಅನಿಲ್, ಪದಾಧಿಕಾರಿಗಳು ರಾಜೇಶ್ವರಿ ಅವರನ್ನು ಅಭಿನಂದಿಸಿದ್ದಾರೆ.



ಕರಾಟೆ ಪ್ರಶಸ್ತಿ

ಮೈಸೂರಿನ ನಾಗ ಮಾರ್ಷಲ್ ಅಕಾಡೆಮಿ ವತಿಯಿಂದ ನಡೆದ ರಾಷ್ಟ್ರೀಯ ಮಟ್ಟದ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ವಿಜಯನಗರದಲ್ಲಿರುವ ಅನಂತಗೀತ ವಿದ್ಯಾಲಯ 6ನೇ ತರಗತಿ ವಿದ್ಯಾರ್ಥಿನಿ ಗೌತಮಿ ಪ್ರಥಮ ಸ್ಥಾನ ಮತ್ತು 7ನೇ ತರಗತಿ ವಿದ್ಯಾರ್ಥಿ ಕಾರ್ತಿಕ್ ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ಕಾರ್ಯದರ್ಶಿ ಗೀತಾ ಅನಂತರಾಮಯ್ಯ, ನಿರ್ದೇಶಕಿ ಮಂಜುಳಾ ಕಲ್ಲೂರು, ಮುಖ್ಯ ಶಿಕ್ಷಕ ಲೋಕೇಶ್, ಶಿಕ್ಷಕರಾದ ಶಿಲ್ಪಾ, ವಿನುತಾ, ಪೋಷಕರು, ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ರೆಸ್ಟ್ ಇಲ್ಲವೇ ಟ್ರಿಪ್; ನಶೆಯಲ್ಲಿ ತೇಲಿದರು; ಮೊದಲು ಸ್ವಚ್ಛತೆ, ತರುವಾಯ ಪ್ರತಿಭಟನೆ; ಆಟೋಗಳಿಗೆ ಭಾರಿ ಡಿಮ್ಯಾಂಡ್



ಅಮಿತ್ ಶಾ ಪ್ರತಿಕೃತಿ ದಹನ.



ಮೈಸೂರು ಹೊರವಲಯದಲ್ಲಿ ವಾಹನಗಳ ಸಂಚಾರ ದಟ್ಟಣೆ.



ಮೈಸೂರಿನ ಹೃದಯ ಭಾಗದ ಪ್ರಮುಖ ರಸ್ತೆಯಲ್ಲಿ ಪೊಲೀಸರು ಮುನ್ನೆಚ್ಚರಿಕೆಯಾಗಿ ವಾಹನ ಸವಾರರನ್ನು ತಡೆದರು.

ಮೈಸೂರು ಬಂದ್ ವಿಶೇಷ



ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ಬಿಕೋ ಎನ್ನುತ್ತಿರುವುದು.



ಬಸ್‌ಗಾಗಿ ಕಾಯುತ್ತಿರುವ ವಿದ್ಯಾರ್ಥಿಗಳು.

ಮೈಸೂರು,ಜ.7(ಬಿಎಲ್‌ಯು)– ಡಾ. ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂಸತ್‌ನಲ್ಲಿ ಆಡಿರುವ ಹೇಳಿಕೆ ಖಂಡಿಸಿ ವಿವಿಧ ಸಂಘಟನೆಗಳು ಕರೆ ನೀಡಿದ್ದ 'ಮೈಸೂರು ಬಂದ್'ನಿಂದ ಕೆಲವು ಸರ್ಕಾರಿ ನೌಕರರಿಗೆ ರೆಸ್ಟ್, ಹಾಗಾಗಿ, ಕೆಲವು ಸರ್ಕಾರಿ ನೌಕರರು ಟ್ರಿಪ್‌ಗೆ ತೆರಳಲು ಸದವಕಾಶ ದೊರೆಯಿತು.

ಮೈಸೂರು ನಗರಪಾಲಿಕೆ, ಮುಡಾ, ನೀರಾವರಿ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆ, ಲೋಕೋಪಯೋಗಿ ಇಲಾಖೆ ಸೇರಿದಂತೆ ಹಲವು ಇಲಾಖೆಗಳ ಕಚೇರಿಗಳು ಇಂದು ಬೆಳಗ್ಗೆ 10.30 ಗಂಟೆಗೆ ಎಂದಿನಂತೆ ಕಾರ್ಯಾರಂಭ ಮಾಡಿದವು.

ಸುಮಾರು 11 ಗಂಟೆ ವೇಳೆಗೆ ಪ್ರತಿಭಟನಾಕಾರರು ಪ್ರತಿ ಸರ್ಕಾರಿ ಕಚೇರಿಗೆ ತೆರಳಿ ಕರ್ತವ್ಯ ನಿರತ ನೌಕರರನ್ನು ಹೊರಗೆ ಕಳುಹಿಸಿ ಬಲವಂತದಿಂದ ಬಾಗಿಲು ಹಾಕಿಸಿದರು. ಈ ಕ್ಷಣಕ್ಕೆ ಕಾಯುತ್ತಿದ್ದ ಸರ್ಕಾರಿ ನೌಕರರು ಮನೆಗೆ ಮರಳಿದರು.

ಮೈಸೂರು ಬಂದ್ ಹಿನ್ನೆಲೆಯಲ್ಲಿ ರಜೆ ಖಾತರಿಯಿಂದ ಕೆಲವು ಸರ್ಕಾರಿ ನೌಕರರು ಮೊದಲೇ ಟ್ರಿಪ್‌ಗೆ ಹೋಗಿದ್ದರು. ಇದರಿಂದ ಸರ್ಕಾರಿ ಕಚೇರಿಗಳಲ್ಲಿ ಬೆಳಿಗ್ಗೆ ಹಾಜರಾತಿ ಕಡಿಮೆ ಇತ್ತು.

ಸರ್ಕಾರಿ ನೌಕರರು ಸದಾ ರಜೆ ನಿರೀಕ್ಷೆಯಲ್ಲಿರುತ್ತಾರೆ ಎಂಬ ಮಾತಿದೆ. ಇನ್ನು ರಜೆ ದೊರೆತರೆ ಮಲಗುವವರಿಗೆ ಹಾಸಿಗೆ ಹಾಸಿಕೊಟ್ಟಂತಾಗುತ್ತದೆ. ರೋಗಿ ಬಯಸಿದ್ದು ಹಾಲು ಅನ್ನ, ಡಾಕ್ಟರ್ ಹೇಳಿದ್ದು ಹಾಲು ಅನ್ನ ಎಂಬಂತೆ ಸರ್ಕಾರಿ ನೌಕರರಿಗೆ ಫುಲ್ ರೆಸ್ಟ್.

ಸ್ವಯಂ ಪ್ರೇರಣೆಯಿಂದ ಬಂದ್: ಮೈಸೂರು ಬಂದ್‌ನಲ್ಲಿ ಕೆಲವರು ಸ್ವಯಂ ಪ್ರೇರಣೆಯಿಂದ ಅಂಗಡಿ ಮುಂಗಟ್ಟು ಬಂದ್ ಮಾಡಿದರೆ, ಕೆಲವೆಡೆ ಹೋರಾಟಗಾರ ಬಲವಂತಕ್ಕೆ ಜೋತುಬಿದ್ದು ಬಂದ್ ಮಾಡಿದರು. ಮೈಸೂರಿನ ದೇವರಾಜ ಅರಸ್ ರಸ್ತೆ, ಕೆ.ಟಿ.ಸ್ಟ್ರೀಟ್, ಮಂಡಿ ಮೊಹಲ್ಲಾ, ಗೌಸಿಯಾನಗರ, ರಾಜೀವ್ ನಗರ ಸೇರಿದಂತೆ ಕೆಲವೆಡೆ ಸ್ವಯಂ ಪ್ರೇರಣೆಯಿಂದ ಬಂದ್ ಮಾಡಲಾಗಿತ್ತು. ಆದರೆ ಇರ್ವಿನ್ ರಸ್ತೆ, ಅಶೋಕ ರಸ್ತೆ, ನಂಜುಮಳಿಗೆ, ಅಗ್ರಹಾರ, ಸರಸ್ವತಿಪುರಂ, ಕುವೆಂಪುನಗರ, ರಾಮಕೃಷ್ಣನಗರ, ವಿವೇಕಾನಂದನಗರ, ಒಂಟಿಕೊಪ್ಪಲ್, ವಿವಿ ಮೊಹಲ್ಲಾ ಸೇರಿದಂತೆ ಹಲವು ಬಡಾವಣೆಗಳಲ್ಲಿ ಬಲವಂತದಿಂದ ಬಾಗಿಲು ಹಾಕಿಸಲಾಯಿತು.

ಆಟೋಗಳಿಗೆ ಡಿಮ್ಯಾಂಡ್: ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರ ಸಂಪೂರ್ಣ ಸ್ಥಗಿತವಾಗಿತ್ತು. ಆದರೆ ಆಟೋಗಳ ಸಂಚಾರ ಎಂದಿನಂತೆ ಸಾಮಾನ್ಯವಾಗಿತ್ತು. ಬಸ್ ಸಂಚಾರ ಇಲ್ಲದ ಕಾರಣ ಜನರು ಆಟೋಗಳ ಅವಲಂಬಿಸಿದ್ದರು. ಇದೇ ಸಮಯ ಕಾಯುತ್ತಿದ್ದ ಆಟೋ ಚಾಲಕರು ದುಪ್ಪಟ್ಟು ಬಾಡಿಗೆ ವಸೂಲಿ ಮಾಡುತ್ತಿದ್ದರು.

ಶಕ್ತಿ ಯೋಜನೆ ಜಾರಿಗೆ ಬಂದ ನಂತರ ಮಹಿಳೆಯರು ಬಸ್‌ಗಳಲ್ಲಿ ಹೆಚ್ಚು ಪ್ರಯಾಣ ಮಾಡುತ್ತಿದ್ದರು. ಉಚಿತ ಪ್ರಯಾಣ ಇದ್ದ ಕಾರಣ ಆಟೋ ಕಡೆ ತಿರುಗಿ ಕೂಡ ನೋಡುತ್ತಿರಲಿಲ್ಲ. ಆದರೆ ಇಂದು ಬಸ್ ಸಂಚಾರ ಇಲ್ಲದ ಕಾರಣ ಮಹಿಳೆಯರು ಕೂಡ ಇಂದು ಆಟೋಗಳನ್ನೆ ಆಶ್ರಯಿಸಿದ್ದರು. ಇದರಿಂದ ಆಟೋಗಳಿಗೆ ಎಲ್ಲಿಲ್ಲದ ಬೇಡಿಕೆ ಒದಗಿ ಬಂದಿತು.

ಪ್ರಯಾಣಿಕರ ಸಂಖ್ಯೆ ವಿರಳವಾಗಿದ್ದ ಕಾರಣ ಟಾಂಗಾ ಸವಾರಿ ಇರಲಿಲ್ಲ. ಇದರಿಂದ ಕರ್ಜನ್ ಪಾರ್ಕ್, ಕುಕ್ಕರಹಳ್ಳಿ ಕೆರೆ ಹಾಗೂ ಆರ್‌ಎಂಸಿ ಬಳಿಯ ಟಾಂಗಾ ಸ್ಟ್ಯಾಂಡ್‌ನಲ್ಲಿ ಕುದುರೆಗಳು ವಿಶ್ರಾಂತಿ ಪಡೆದವು.

ಮೊದಲು ಸ್ವಚ್ಛತೆ, ತರುವಾಯ ಪ್ರತಿಭಟನೆ: ಮೈಸೂರು ಬಂದ್‌ಗೆ ಪೌರ ಕಾರ್ಮಿಕರು ಸಂಪೂರ್ಣ ಬೆಂಬಲ ನೀಡಿದ್ದರು. ಇವತ್ತು ಒಂದು ದಿನ ಸ್ವಚ್ಛತಾ ಕಾರ್ಯ ಕೈಗೊಳ್ಳದೆ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಹೋರಾಟಗಾರರು ಕರೆ ನೀಡಿದ್ದರು. ಆದರೆ ತಮ್ಮ ಕರ್ತವ್ಯ ಮರೆಯದ ಪೌರಕಾರ್ಮಿಕರು ಇಂದು ಬೆಳಿಗ್ಗೆ ಸ್ವಚ್ಛತಾ ಕಾರ್ಯ ಪೂರ್ಣಗೊಳಿಸಿ ಬೆಳಿಗ್ಗೆ 11 ಗಂಟೆ ನಂತರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ನಗರಪಾಲಿಕೆ ಮುಂದೆ ಸೇರಿದ್ದ ಪೌರಕಾರ್ಮಿಕರು ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆ ಮೊಳಗಿಸಿದರು.

ನಶೆಯಲ್ಲಿ ತೇಲಿದರು: ಮೈಸೂರು ಬಂದ್ ವೇಳೆ ಹೋಟೆಲ್ ಸೇರಿದಂತೆ ಪ್ರತಿಯೊಂದು ಅಂಗಡಿ ಮುಂಗಟ್ಟು ಮುಚ್ಚಲಾಗಿತ್ತು. ಹಣ್ಣು, ತರಕಾರಿ ಸೇರಿದಂತೆ ಯಾವುದೇ ವಸ್ತುಗಳು ಸಿಗುತ್ತಿರಲಿಲ್ಲ. ಆದರೆ ಮದ್ಯ ಖರೀದಿಗೆ ಮಾತ್ರ ಬಂದ್ ಬಿಸಿ ತಟ್ಟಲಿಲ್ಲ. ನಗರದ ಆರ್‌ಎಂಸಿ, ಗಾಂಧಿ ವೃತ್ತ, ಹಳ್ಳದ ಕೇರಿ ಸೇರಿದಂತೆ ಇತರೆಡೆ ಕದ್ದು ಮುಚ್ಚಿ ಮದ್ಯ ಮಾರಾಟ ಮಾಡಲಾಗುತ್ತಿತ್ತು. ಆದರೆ ಎಂಆರ್‌ಪಿಗಿಂತ ಬೆಲೆ ಹೆಚ್ಚಾಗಿತ್ತು. ಬೆಲೆ ಹೆಚ್ಚಾದರೂ ಸರಿ ಎಂದು ಮದ್ಯಪ್ರಿಯರು ನಶೆಯಲ್ಲಿ ತೇಲಾಡಿದರು.

ಇಂದು ಸಂಜೆ 4 ಗಂಟೆವರೆಗೆ ಮೈಸೂರು ಬಂದ್ ಇತ್ತು. ಆದರೂ ಬಹಳಷ್ಟು ಅಂಗಡಿಗಳು ನಂತರವೂ ಬಾಗಿಲು ತೆರೆದಿರಲಿಲ್ಲ. ಆದರೆ ಬಂದ್ ಮುಕ್ತಾಯಗೊಳ್ಳುವ ಸಮಯ ಕಾಯುತ್ತಿದ್ದ ಮದ್ಯ ಪ್ರಿಯರು ಖರೀದಿಗೆ ದುಂಬಾಲು ಬಿದ್ದರು.

ಪ್ರವಾಸಿಗರ ಪರದಾಟ: ಹೊರ ರಾಜ್ಯ ಹಾಗೂ ವಿದೇಶಿ ಪ್ರವಾಸಿಗರಿಗೆ ಮೈಸೂರು ಬಂದ್ ಬಗ್ಗೆ ಮಾಹಿತಿ ಇರಲಿಲ್ಲ. ಇದರಿಂದ ಮೈಸೂರು ಅರಮನೆ ಸೇರಿದಂತೆ ಇತರೆ ಪ್ರವಾಸಿ ತಾಣ ವೀಕ್ಷಣೆಗೆ ಮೈಸೂರಿಗೆ ಬಂದಿದ್ದ ಪ್ರವಾಸಿಗರು ತೊಂದರೆ ಅನುಭವಿಸಿದರು. ಹೋಟೆಲ್‌ಗಳು ಬಂದ್ ಆಗಿದ್ದರಿಂದ ಬೆಳಗಿನ ಉಪಹಾರ ಹಾಗೂ ಮಧ್ಯಾಹ್ನದ ಊಟವಿಲ್ಲದೆ ಪರದಾಡಿದರು.

ಪ್ರತಿಕೃತಿ ದಹಿಸಿ ಆಕ್ರೋಶ: ಯಾವುದೇ ಪ್ರತಿಭಟನೆ ನಡೆದರೂ ಯಾರಿಗೂ ಪ್ರತಿಕೃತಿ ದಹಿಸಲು ಅವಕಾಶವಿಲ್ಲ. ಆದರೂ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಪ್ರತಿಭಟನಾಕಾರರು ಅಮಿತ್ ಶಾ ಪ್ರತಿಕೃತಿ ದಹಿಸಲು ಮುಂದಾದರು. ಈ ವೇಳೆ ಪೊಲೀಸರು ತಡೆಯೊಡ್ಡಿದರೂ ಅದನ್ನು ಧಿಕ್ಕರಿಸಿ ಪ್ರತಿಭಟನಾಕಾರರು ಕೊನೆಗೂ ಪ್ರತಿಕೃತಿ ದಹಿಸಿದರು. ತರುವಾಯ ಪೊಲೀಸರು ನೀರು ಸುರಿದು ಬೆಂಕಿ ನಂದಿಸಿದರು.

ಶವಯಾತ್ರೆ: ದಲಿತಪರ ಸಂಘಟನೆ ಕಾರ್ಯಕರ್ತರು ಮೈಸೂರು ನಗರ ಪಾಲಿಕೆ ಮುಂದೆ ಪ್ರತಿಭಟನೆ ನಡೆಸುವ ವೇಳೆ ಅಮಿತ್ ಶಾ ಪ್ರತಿಕೃತಿಯ ಶವಯಾತ್ರೆ ನಡೆಸಿದರು. ಸಂವಿಧಾನ ವಿರೋಧಿ ಹೇಳಿಕೆ ನೀಡಿರುವ ಅಮಿತ್ ಶಾ ರಾಜೀನಾಮೆ ನೀಡುವಂತೆ ಆಗ್ರಹಿಸಿದರು.

ಬಸ್‌ಗಾಗಿ ಕಾದ ವಿದ್ಯಾರ್ಥಿಗಳು: ಎಂದಿನಂತೆ ಇಂದು ಬೆಳಿಗ್ಗೆ ಶಾಲಾ ಕಾಲೇಜು ಆರಂಭವಾಯಿತು. ಆದರೆ 11 ಗಂಟೆ ವೇಳೆ ಪ್ರತಿಭಟನಾಕಾರರು ಪ್ರತಿಯೊಂದು ಕಾಲೇಜಿಗೆ ಭೇಟಿ ನೀಡಿ, ಬಲವಂತದಿಂದ ಬಾಗಿಲು ಹಾಕಿಸಿದರು. ಇದರಿಂದ ವಿದ್ಯಾರ್ಥಿಗಳು ಮನೆಯತ್ತ ಹೊರಟರು. ಆದರೆ ಬಸ್ ಸಂಚಾರ ಇಲ್ಲದ ಕಾರಣ ವಿದ್ಯಾರ್ಥಿಗಳು ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಸಂಜೆವರೆಗೂ ಬಸ್ ದಾರಿ ಕಾದು ಬಸವಳಿದರು.

ಹೊರವಲಯಕ್ಕೂ ತಟ್ಟಿದ ಬಂದ್ ಬಿಸಿ: ಕಾವೇರಿ ಜಲ ವಿವಾದ ಸೇರಿದಂತೆ ಈ ತನಕ ನಡೆದ ಬಂದ್ ವೇಳೆ ಮೈಸೂರಿನ ಹೊರವಲಯ ಬಂದ್ ಆಗಿದ್ದೆ ಇಲ್ಲ. ಆದರೆ ಮೈಸೂರು ಬಂದ್‌ನಲ್ಲಿ ನಗರದ ಹೊರವಲಯದಲ್ಲೂ ಸಕಾರಾತ್ಮಕ ಸ್ಪಂದನೆ ದೊರೆಯಿತು. ಕೆಲವೆಡೆ ಸ್ವಯಂಪ್ರೇರಣೆ ಹಾಗೂ ಹಲವೆಡೆ ಬಲವಂತದಿಂದ ಬಂದ್ ಮಾಡಿಸಿದ ಹಿನ್ನೆಲೆಯಲ್ಲಿ ಹೊರವಲಯದ ಬಡಾವಣೆಗಳಿಗೂ ಬಂದ್ ಬಿಸಿ ತಟ್ಟಿತು.

ಮೈಸೂರು ಬಂದ್: ವಿವಿಧ ಸಂಘದ ಪದಾಧಿಕಾರಿಗಳಿಂದ ಪ್ರತಿಭಟನೆ



ಡಾ.ಅಂಬೇಡ್ಕರ್ ಬಗ್ಗೆ ಲಘುವಾಗಿ ಮಾತನಾಡಿದ ಅಮಿತ್ ಶಾ ವಿರುದ್ಧ ಹಮ್ಮಿಕೊಂಡಿದ್ದ ಮೈಸೂರು ಬಂದ್ ಹಿನ್ನೆಲೆಯಲ್ಲಿ ನಾಡನಹಳ್ಳಿ ಪೇಪರ್ ಮಂಜು ನೇತೃತ್ವದಲ್ಲಿ ಟಿ.ನರಸೀಪುರ ಸರ್ಕಲ್, ತಾಲೂಕು ಕಚೇರಿ ಮುಂದೆ ಜೈ ಭೀಮ್ ಯುವಕರ ಸಂಘ, ಅಹಿಂದ ಸಂಘಟನೆ, ಜೈ ಭೀಮ್ ಬಂಧು ಬಳಗ, ಡಾ.ಬಿಆರ್ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘ, ಲಾಲ್ ಬಹುದ್ದೂರ್ ಶಾಸ್ತ್ರಿನಗರ, ಶಾಂತವೇರಿ ಗೋಪಾಲಗೌಡನಗರ, ಅಂಬೇಡ್ಕರ್ ವಾಜಮಂಗಲ ಯುವಕರ ಸಂಘ, ಬುಗತಗಳ್ಳಿ ಯುವಕರ ಸಂಘ, ಆಲನಹಳ್ಳಿ ಯುವಕರ ಸಂಘ, ಮೈಸೂರು ಛಲವಾದಿ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಪ್ರತಿಭಟನೆ



ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ಮೈಸೂರು, ಜ.7(ಬಿಎಲ್‌ಯು)–ಡಾ. ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ಮೈಸೂರಿನ ಸಿಲ್ಕ್ ಫ್ಯಾಕ್ಟರಿ, ರೈಲ್ವೆ ಕಾರ್ಯಾಗಾರ, ಬಲ್ಲಾಳ್ ವೃತ್ತ, ಚಾಮರಾಜ ಜೋಡಿ ರಸ್ತೆ, ಕೆ.ಆರ್.ವೃತ್ತ, ದೊಡ್ಡ ಗಡಿಯಾರ, ಅಶೋಕ ರಸ್ತೆ ಸೇರಿದಂತೆ ಇತರೆಡೆ ಸೋಮಶೇಖರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಪುರಭವನದಲ್ಲಿ ಮಾತನಾಡಿದ ಸೋಮಶೇಖರ್, ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಇಡೀ ವಿಶ್ವವೇ ಮೆಚ್ಚಿಕೊಂಡಿದೆ. ಆದರೆ ಇಂತಹ ವಿಶ್ವಜ್ಞಾನಿಯ ಬಗ್ಗೆ ಉನ್ನತ ಹುದ್ದೆಯಲ್ಲಿರುವ ಅಮಿತ್ ಶಾ ಹಗುರವಾಗಿ ಮಾತನಾಡಿದ್ದಾರೆ ಎಂದ ಆಕ್ರೋಶ ವ್ಯಕ್ತಪಡಿಸಿದರು.

ಇಂತಹ ಸಂವಿಧಾನ ವಿರೋಧಿಗಳು ಅಧಿಕಾರದಲ್ಲಿರಲು ಅರ್ಹರಲ್ಲ. ಆದ ಕಾರಣ ಅಮಿತ್ ಶಾ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕೆಂದು ಸೋಮಶೇಖರ್ ಆಗ್ರಹಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಶ್ರೀಧರ್, ಜೋಗಿ ಮಹೇಶ್, ಭಾಸ್ಕರ್, ರಮೇಶ್, ವಿಶ್ವ, ಮಂಜುನಾಥ್, ಗುಣಶೇಖರ್, ಮೊಹಮ್ಮದ್ ಫಾರೂಕ್, ಮಧುರಾಜ್, ಸಂತೋಷ್ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ಬೇಸಿಗೆಯಲ್ಲಿ ಮಂಡ್ಯ ಕಬ್ಬು ಬೆಳೆಗಾರರಿಗೆ 2 ಗಂಟೆ ಹೆಚ್ಚುವರಿ ವಿದ್ಯುತ್

ಪ್ರಸ್ತಾವನೆ ಸಲ್ಲಿಸಲು ಇಂಧನ ಸಚಿವ ಕೆ.ಜೆ.ಜಾರ್ಜ್ ಸೂಚನೆ



ಇಂಧನ ಇಲಾಖೆಗೆ ಸಂಬಂಧಿಸಿದ ವಿಷಯುಗಳ ಕುರಿತು ಜಿಲ್ಲೆಯ ಎಲ್ಲಾ ಚುನಾಯಿತ ಪ್ರತಿನಿಧಿಗಳು ಹಾಗೂ ಇಂಧನ ಇಲಾಖೆಯ ಅಧಿಕಾರಿಗಳೊಂದಿಗೆ ಇಂಧನ ಸಚಿವ ಕೆ.ಜೆ.ಜಾರ್ಜ್ ಸಭೆ ನಡೆಸಿ ಚರ್ಚಿಸಿದರು.

ಮಂಡ್ಯ,ಜ.7– ಮುಂಬರುವ ಬೇಸಿಗೆಯಲ್ಲಿ ಜಿಲ್ಲೆಯ ಕೃಷಿ ಪಂಪ್ ಸೆಟ್‌ಗಳಿಗೆ ಈಗ ಲಭ್ಯವಿರುವ ಏಳು ತಾಸು ತ್ರಿ ಫೇಸ್ ವಿದ್ಯುತ್ ಜೊತೆಗೆ ಹೆಚ್ಚುವರಿಯಾಗಿ ಎರಡು ಗಂಟೆ ವಿದ್ಯುತ್ ಪೂರೈಸಲು ಸರ್ಕಾರ ಬದ್ಧವಾಗಿದ್ದು, ಈ ಬಗ್ಗೆ ಪ್ರಸ್ತಾವನೆ ಕಳುಹಿಸುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ (ಸೆಸ್ಕ್)ಗೆ ಇಂಧನ ಸಚಿವ ಕೆ.ಜೆ.ಜಾರ್ಜ್ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಮಂಗಳವಾರ ಇಂಧನ ಇಲಾಖೆಗೆ ಸಂಬಂಧಿಸಿದ ವಿಷಯಗಳ ಕುರಿತು ಜಿಲ್ಲೆಯ ಎಲ್ಲಾ ಚುನಾಯಿತ ಪ್ರತಿನಿಧಿಗಳು ಹಾಗೂ ಇಂಧನ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಕಳೆದ ಬಾರಿ ಉತ್ತಮ ಮಳೆಯಾಗಿರುವುದರಿಂದ ಕಬ್ಬು ಸೇರಿದಂತೆ ಅಲ್ಪಾವಧಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಅದರಲ್ಲೂ ಮಾರ್ಚ್ ಅಂತ್ಯದವರೆಗೆ ಕಬ್ಬು ಬೆಳೆಗೆ ನಿರಂತರ ನೀರಿನ ಅಗತ್ಯವಿರುವುದರಿಂದ ಕೃಷಿ ಪಂಪ್ ಸೆಟ್‌ಗಳಿಗೆ ಈಗಿರುವ ಏಳು ಗಂಟೆ ವಿದ್ಯುತ್ ಜತೆಗೆ ಹೆಚ್ಚುವರಿಯಾಗಿ ಎರಡು ಗಂಟೆ ವಿದ್ಯುತ್ ಅಗತ್ಯವಿದೆ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಸಚಿವರ ಗಮನ ಸೆಳೆದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಈ ಬಗ್ಗೆ ಕೂಡಲೇ ಪ್ರಸ್ತಾವನೆ ಸಲ್ಲಿಸುವಂತೆ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದರಲ್ಲದೆ, ಪ್ರಸ್ತಾವನೆ ಆಧರಿಸಿ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು.

ಕಳೆದ ಬಾರಿ ಹೆಚ್ಚು ಮಳೆಯಾಗಿದ್ದರಿಂದ ಈ ಬಾರಿ ಹಿಂಗಾರಿನಲ್ಲಿ ಕೃಷಿ ಪ್ರದೇಶ ವಿಸ್ತರಣೆಯಾಗಲಿದ್ದು, ಹೆಚ್ಚುವರಿ ವಿದ್ಯುತ್ ಬೇಕಾಗುತ್ತದೆ ಎಂಬ ಬಗ್ಗೆ ಕೃತಕ ಬುದ್ಧಿಮತ್ತೆ

ಈ ಬಾರಿ ಕೃಷಿ ಪ್ರದೇಶ ವಿಸ್ತರಣೆಯಾಗಿರುವ ಕಾರಣ ಜನವರಿಯಿಂದ ಮೇ ತಿಂಗಳವರೆಗೆ ಹೆಚ್ಚುವರಿ ವಿದ್ಯುತ್ ಅಗತ್ಯವಿದೆ. ಈ ಕೊರತೆ ನೀಗಿಸಲು ದೀರ್ಘಾವಧಿ ವಿದ್ಯುತ್ ಖರೀದಿಗೆ ನಿರ್ಧರಿಸಲಾಗಿದೆ. ಜನವರಿ ಮತ್ತು ಫೆಬ್ರವರಿಯಲ್ಲಿ ತಲಾ 400 ಮೆಗಾವ್ಯಾಟ್ ಹಾಗೂ ಮಾರ್ಚ್, ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ತಲಾ 1000 ಮೆಗಾವ್ಯಾಟ್ ವಿದ್ಯುತ್ ಖರೀದಿಸಲು ಯೋಜನೆ ರೂಪಿಸಲಾಗಿದೆ. ದೀರ್ಘಾವದಿ ವಿದ್ಯುತ್ ಖರೀದಿ ಮಾಡಿದರೆ ಕಡಿಮೆ ದರಕ್ಕೆ ವಿದ್ಯುತ್ ಲಭ್ಯವಾಗುತ್ತದೆ. ಹೀಗಾಗಿ ಹೆಚ್ಚುವರಿ ವಿದ್ಯುತ್ತನ್ನು ಪೀಕ್ ಅವರ್‌ನಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಮಾಡಿದರೆ ಇಲಾಖೆಗೂ ಲಾಭವಾಗುತ್ತದೆ– ಕೆ.ಜೆ.ಜಾರ್ಜ್

ಆಧರಿಸಿ ಲೋಡ್ ಡಿಸ್ಪ್ಯಾಚ್ ಸೆಂಟರ್ ಮತ್ತು ಪಿಸಿಕೆಎಲ್‌ನವರು ಲೆಕ್ಕ ಹಾಕಿದ್ದಾರೆ. ಅದರಂತೆ ಮಂಡ್ಯ ಜಿಲ್ಲೆಯಲ್ಲಿ ಕೃಷಿ ಪ್ರದೇಶ ಕಳೆದ ಬಾರಿಗಿಂತ ಶೇ.30ರಷ್ಟು ಏರಿಕೆಯಾಗಲಿದೆ. ಹೀಗಾಗಿ ಕೃಷಿ ಚಟುವಟಿಕೆಗಳಿಗೆ ಯಾವುದೇ ಸಮಸ್ಯೆಯಾಗದಂತೆ ವಿದ್ಯುತ್ ಪೂರೈಸಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕುಸುಮ್–ಸಿಗೆ ಭೂಮಿ ನೀಡಲು ಸೂಚನೆ: ಕುಸುಮ್–ಸಿ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ 59 ಸಬ್ ಸ್ಟೇಷನ್‌ಗಳಿದ್ದು, ಈ ಪೈಕಿ 37 ಕಡೆ ಫೀಡರ್ ಸೋಲರೈಸೇಷನ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ ನಾಲ್ಕು ಯೋಜನೆಗಳ ಕೆಲಸ ಆರಂಭವಾಗಿದೆ. ಉಳಿದವುಗಳಿಗೆ ಭೂಮಿ ಗುರುತಿಸುವ ಕಾರ್ಯ ನಡೆಯುತ್ತಿದೆ. ಮುಂದಿನ ಒಂದು ವರ್ಷದಲ್ಲಿ ಈ ಯೋಜನೆ ಪೂರ್ಣಗೊಳಿಸಿ ರೈತರಿಗೆ ಹಗಲು ವೇಳೆ ನಿರಂತರ 7 ಗಂಟೆ ವಿದ್ಯುತ್ ಪೂರೈಸುವ ಕಾರ್ಯ ಮಾಡಬೇಕಾಗಿರುವುದರಿಂದ ಲಭ್ಯವಿರುವ ಸರ್ಕಾರಿ ಭೂಮಿಯನ್ನು ತ್ವರಿತವಾಗಿ ಒದಗಿಸುವಂತೆ ಸಭೆಯಲ್ಲಿದ್ದ ಜಿಲ್ಲಾಧಿಕಾರಿಗೆ ಸೂಚಿಸಿದರು.

ಅಕ್ರಮ ಪಂಪ್‌ಸೆಟ್‌ಗಳ ಸಕ್ರಮ ಯೋಜನೆಯಡಿ 2023ರ ಸೆಪ್ಟೆಂಬರ್‌ವರೆಗೆ 1,21,164 ಅರ್ಜಿಗಳು ಬಂದಿದ್ದು, 1,15,794 ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ. ಉಳಿದ 5,571 ಅರ್ಜಿಗಳನ್ನು ಮೂರು ತಿಂಗಳಲ್ಲಿ ಇತ್ಯರ್ಥಗೊಳಿಸಲಾಗುವುದು. ಆ ಬಳಿಕ ಅಕ್ರಮ–ಸಕ್ರಮಕ್ಕೆ 1,600 ಮಂದಿ ಅರ್ಜಿ ಸಲ್ಲಿಸಿದ್ದು, ಹಳೆಯ ಅರ್ಜಿಗಳನ್ನು ಇತ್ಯರ್ಥಗೊಳಿಸಿದ ಬಳಿಕ ಹೊಸ ಅರ್ಜಿಗಳ ಕುರಿತಂತೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ವಿದ್ಯುತ್ ಬೇಡಿಕೆಯ ಕುರಿತು ಪ್ರತಿಕ್ರಿಯಿಸಿದ ಸಚಿವರು, ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗಿಂತ ಹೆಚ್ಚಿನ ವಿದ್ಯುತ್ ಲಭ್ಯವಿದೆ. ಹೆಚ್ಚುವರಿ ಉಪಕೇಂದ್ರಗಳ ಸ್ಥಾಪನೆ, ಟ್ರಾನ್ಸ್‌ಫಾರ್ಮರ್‌ಗಳ ನವೀಕರಣ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಿ ಪೂರೈಕೆ ಖಚಿತಪಡಿಸಿಕೊಳ್ಳಲಾಗುವುದು ಎಂದು ಹೇಳಿದರು.

ಜನಪ್ರತಿನಿಧಿಗಳೊಂದಿಗೆ ಸಂಪರ್ಕದಲ್ಲಿರಬೇಕು: ಸಭೆಯಲ್ಲಿ ಹಾಜರಿದ್ದ ಜಿಲ್ಲೆಯ ಶಾಸಕರು ತಮ್ಮ ಕ್ಷೇತ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪ್ರಸ್ತಾಪಿಸಿದಾಗ ಪ್ರತಿಕ್ರಿಯಿಸಿದ ಸಚಿವ ಕೆ.ಜೆ.ಜಾರ್ಜ್, ಜನರು ಸಾಮಾನ್ಯವಾಗಿ ತಮ್ಮ ಸಮಸ್ಯೆಗಳನ್ನು ನೇರವಾಗಿ ಶಾಸಕರು, ಸಂಸದರು ಸೇರಿದಂತೆ ಜನಪ್ರತಿನಿಧಿಗಳೊಂದಿಗೆ ಹೇಳಿಕೊಳ್ಳುತ್ತಾರೆ. ಆದ್ದರಿಂದ ಜನಪ್ರತಿನಿಧಿಗಳಿಗೆ ಜನರ ಸಮಸ್ಯೆಗಳ ಬಗ್ಗೆ ಸ್ಪಷ್ಟ ಅರಿವಿರುತ್ತದೆ ಹೀಗಾಗಿ ಅಧಿಕಾರಿಗಳು ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅವರ ಸಲಹೆಗಳನ್ನು ಆಧರಿಸಿ ಸ್ಪಂದಿಸಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಸೆಸ್ಕ್ ಅಧ್ಯಕ್ಷ ಹಾಗೂ ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಕೆ.ವಿವೇಕಾನಂದ, ಶಾಸಕ ಕೆ.ಎಂ.ಉದಯ್ ಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಚಿಕ್ಕಲಿಂಗಯ್ಯ, ಇಂಧನ ಇಲಾಖೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್‌ಕುಮಾರ್ ಪಾಂಡೆ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ ಸಿಇಓ ಶೇಕ್ ತನ್ವೀರ್ ಆಸಿಫ್, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಶೀಲಾ ಮತ್ತಿತರರು ಹಾಜರಿದ್ದರು.

ಜೇವರ್ಗಿ–ಶ್ರೀರಂಗಪಟ್ಟಣ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗೆ ಚಾಲನೆ



ಪಾಂಡವಪುರ ತಾಲೂಕಿನ ರೈಲ್ವೇ ನಿಲ್ದಾಣದ ಮುಂಭಾಗ ಬನಘಟ್ಟ–ಕಿರಂಗೂರು ರಸ್ತೆ ಅಭಿವೃದ್ಧಿಗೆ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ದರ್ಶನ್‌ಪುಟ್ಟಣ್ಣಯ್ಯ ಗುದ್ದಲಿ ಪೂಜೆ ಸಲ್ಲಿಸಿದರು.

ಪಾಂಡವಪುರ: ತಾಲೂಕಿನ ಬನಘಟ್ಟದಿಂದ ಶ್ರೀರಂಗಪಟ್ಟಣದ ಕಿರಂಗೂರು ಬಳಿಯ ಇರುವ ಮೈಸೂರು–ಬೆಂಗಳೂರು ರಸ್ತೆಗೆ ಸಂಪರ್ಕಿಸುವ ಜೇವರ್ಗಿ–ಶ್ರೀರಂಗಪಟ್ಟಣದ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಂಗಳವಾರ ತಾಲೂಕಿನ ರೈಲ್ವೇ ನಿಲ್ದಾಣದ ಬಳಿ ಇರುವ ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆಯ ಮುಂಭಾಗ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಶ್ರೀರಂಗಪಟ್ಟಣದಿಂದ ಪಾಂಡವಪುರ, ನಾಗಮಂಗಲ ಮಾರ್ಗವಾಗಿ ಜೇವರ್ಗಿ ಸಂಪರ್ಕಿಸುವ ರಸ್ತೆಯನ್ನು 1999ರಲ್ಲಿ ಆಗಿಸಿ ಸಿಎಂ ಆಗಿದ್ದಂತಹ ಧರ್ಮಸಿಂಗ್, ಎಸ್.ಎಂ.ಕೃಷ್ಣ ಅವರು ರಾಜ್ಯ ಹೆದ್ದಾರಿಯಾಗಿ ಅಭಿವೃದ್ಧಿಪಡಿಸಿದರು. ನಂತರ 2013ರಲ್ಲಿ ಆಗಿನ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಿ ಅಭಿವೃದ್ಧಿಪಡಿಸಿದರು. ಇದೀಗ ಮತ್ತೆ ಬನಘಟ್ಟದಿಂದ ಕಿರಂಗೂರುವರೆಗೆ ಅಂದಾಜು 42 ಕೋಟಿ ವೆಚ್ಚದಲ್ಲಿ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು. ಈಗಾಗಲೆ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಪೂಜೆ ಸಲ್ಲಿಸಿದ್ದರು. ಆ ಸಂದರ್ಭದಲ್ಲಿ ನಾನು ವಿಧಾನಸಭೆಯ ಕಲಾಪದಲ್ಲಿ ಭಾಗವಹಿಸಿದ್ದರಿಂದ ಭಾಗವಹಿಸಲು ಸಾಧ್ಯವಾಗಿರಲ್ಲ, ಹಾಗಾಗಿ ಇದೀಗ ರಸ್ತೆ ಕಾಮಗಾರಿಗೆ ಪೂಜೆ ಸಲ್ಲಿಸಲಾಗಿದೆ. ಇದೀಗ ಅಭಿವೃದ್ಧಿಗೊಳ್ಳುತ್ತಿರುವ ರಸ್ತೆಯೂ ಪಾಂಡವಪುರಕ್ಕೆ 7 ಕಿಮೀ ಹಾಗೂ ಶ್ರೀರಂಗಪಟ್ಟಣಕ್ಕೆ 4 ಕಿಮೀ ಬರುತ್ತಿದೆ. ರಸ್ತೆಯೂ ಹಾಸನ, ಶಿವಮೊಗ್ಗ, ತುಮಕೂರು ಸೇರಿದಂತೆ ಹಲವಾರು ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ರಸ್ತೆಯನ್ನು ಅಭಿವೃದ್ಧಿಪಡಿಸುವ ಅಗತ್ಯವಿತ್ತು. ಹಾಗಾಗಿ ರಸ್ತೆ ಅಭಿವೃದ್ಧಿಪಡಿಸಲಾಗುತ್ತಿದೆ, ರಸ್ತೆಯಲ್ಲಿ ಅಧಿಕ ವಾಹನಗಳು ಓಡಾಡುವುದರಿಂದ ಗುಣಮಟ್ಟದಿಂದ ಅಭಿವೃದ್ಧಿಪಡಿಸಬೇಕು ಎಂದು ಹೇಳಿದರು.

ಶಾಸಕ ದರ್ಶನ್‌ಪುಟ್ಟಣ್ಣಯ್ಯ ಮಾತನಾಡಿ, ತಾಲೂಕಿನ ಬನಘಟ್ಟ–ಕಿರಂಗೂರುವರೆಗಿನ ರಸ್ತೆಯಲ್ಲಿ ಸಾಕಷ್ಟು ವಾಹನಗಳ ಸಂಖ್ಯೆಯ ಹೆಚ್ಚಾಗಿ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿತ್ತು. ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದ್ದು ಸಾರ್ವಜನಿಕರು ಒಗ್ಗಟ್ಟಿನಿಂದ ರಸ್ತೆಯನ್ನು ಅಭಿವೃದ್ಧಿಪಡಿಸಬೇಕು ಎಂದರು.

ಈ ಸಂದರ್ಭದಲ್ಲಿ ಎಚ್.ತ್ಯಾಗರಾಜು, ಬೋರೇಗೌಡ, ಕಾಡೇನಹಳ್ಳಿ ರಾಮಚಂದ್ರು, ಸಂದೇಶ್ ಸೇರಿದಂತೆ ಹಲವು ಭಾಗವಹಿಸಿದ್ದರು.

ಜ.11, ಬೆಂಗಳೂರಲ್ಲಿ ಗಾಣಿಗರ ಹಬ್ಬ

ಕೆ.ಆರ್.ಪೇಟೆ: ಇದೇ ಜನವರಿ 11 ರಂದು ಬೆಂಗಳೂರಿನ ನೆಲಮಂಗಲದ ಬಳಿ ಇರುವ ಶ್ರೀ ತೈಲೇಶ್ವರ ಗಾಣಿಗರ ಸಂಸ್ಥಾನ ಮಠದಲ್ಲಿ ಪೀಠಾಧ್ಯಕ್ಷರಾದ ಶ್ರೀ ಶ್ರೀ ಪೂರ್ಣಾನಂದ ಪುರಿ ಮಹಾಸ್ವಾಮೀಜಿ ಅವರ ನೇತೃತ್ವದಲ್ಲಿ ಗಾಣಿಗರ ಹಬ್ಬ ಹಾಗೂ ಗಾಣಿಗರ ಬೃಹತ್ ಸಮಾವೇಶ ಸಮಾರಂಭವನ್ನು ಜ.11ರಂದು ಹಮ್ಮಿಕೊಳ್ಳಲಾಗಿದೆ ಎಂದು ಮಂಡ್ಯ ಜಿಲ್ಲಾ ಗಾಣಿಗರ ಸಂಘದ ಶಿವಕುಮಾರ್ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗಾಣಿಗರ ಸಂಘದ ಉಪಾಧ್ಯಕ್ಷ ಶ್ರೀನಿವಾಸ್, ಕಾರ್ಯಾಧ್ಯಕ್ಷ ಎಂ.ಲೋಕೇಶ್, ಸಂಘಟನಾ ಕಾರ್ಯದರ್ಶಿ ಸಂದೀಪ್, ತಾಲೂಕು ಗಾಣಿಗರ ಸಂಘದ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷ ಆಟೋ ವಾಸು, ಕಾರ್ಯದರ್ಶಿ ಅರುಣ್ ಕುಮಾರ್, ಸಂಘಟನಾ ಕಾರ್ಯದರ್ಶಿ ಪುಟ್ಟರಾಜು, ಗ್ರಾಪಂ ಸದಸ್ಯ ಆರ್.ಶ್ರೀನಿವಾಸ್ ಇತರರ ನೇತೃತ್ವದಲ್ಲಿ ಕೆ.ಆರ್.ಪೇಟೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಹ್ವಾನ ಪತ್ರಿಕೆಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟಿಸುವರು. ಮುಖ್ಯ ಅತಿಥಿಯಾಗಿ ಉಪಮುಖ್ಯಮಂತ್ರಿ ಡಿ.ಕೆಶಿವಕುಮಾರ್, ಸಚಿವರಾದ ಹೆಚ್.ಕೆ.ಪಾಟೀಲ್, ಹೆಚ್.ಸಿ.ಮಹದೇವಪ್ಪ, ದಿನೇಶ್ ಗುಂಡೂರಾವ್, ಕೆ.ಎನ್.ರಾಜಣ್ಣ, ಶಿವರಾಜ್ ತಂಗಡಜಿ, ಇತರರು ಭಾಗವಹಿಸುವರು.

ಜ.10ರಿಂದ 18 ದಿನಗಳ ಕಾಲ ಕೆಆರ್‌ಎಸ್‌ನಿಂದ ಕಟ್ಟು ಪದ್ಧತಿಯಲ್ಲಿ ನಾಲೆಗಳಿಗೆ ನೀರು ಬಿಡುಗಡೆ

ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಸಚಿವ ಚಲುವರಾಯಸ್ವಾಮಿ



ಕೆಆರ್‌ಎಸ್‌ನಲ್ಲಿ ಸಚಿವ ಚಲುವರಾಯಸ್ವಾಮಿ ನೀರಾವರಿ ಸಲಹಾ ಸಮಿತಿ ಸಭೆ ನಡೆಸಿದರು.

ಮಂಡ್ಯ, ಜ.7– ಕೆಆರ್‌ಎಸ್‌ನಿಂದ ಬೆಳೆಗಳಿಗೆ ಜನವರಿ 10 ರಿಂದ 18 ದಿನಗಳ ಕಾಲ ಕಟ್ಟು ಪದ್ಧತಿಯಲ್ಲಿ ನೀರು ಹರಿಸಲಾಗವುದು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಮಂಗಳವಾರ ಜಿಲ್ಲೆಯ ಕೆಆರ್‌ಎಸ್‌ನಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ನಡೆಸಿ ಮಾತನಾಡಿದ ಅವರು, ಜ.10ರಿಂದ 18 ದಿನಗಳ ಕಾಲ ನೀರು ಹರಿಸಲಾಗುವುದು. 12 ದಿನಗಳ ಕಾಲ ನೀರು ನಿಲುಗಡೆ ಇದೇ ರೀತಿ ನಾಲ್ಕು ಬಾರಿ ನೀರು ನೀಡಲಾಗುವುದು ಎಂದರು.

ಜಿಲ್ಲೆಯ ಮಳವಳ್ಳಿ ಹಾಗೂ ಮದ್ದೂರು ತಾಲೂಕಿನ ಕೊನೆಯ ಭಾಗಕ್ಕೂ ನೀರು ಹರಿಸಲಾಗುವುದು. ರೈತರು ಅಲ್ಪಾವಧಿ ಬೆಳೆಗಳ ನಾಟಿ ಕೆಲಸವನ್ನು ಪ್ರಾರಂಭಿಸಬೇಕು. ಕೃಷಿ ಹಾಗೂ ನೀರಾವರಿ ಇಲಾಖೆ ಸಹಕಾರದೊಂದಿಗೆ ರೈತರು ಎರಡು ಬೆಳೆಗಳನ್ನು ಬೆಳೆಯಬೇಕು. ಇಲಾಖೆಗಳು ನೀಡುವ ಸಲಹೆ ಹಾಗೂ ಸೂಚನೆಗಳನ್ನು ಪಾಲಿಸಿ ಎಂದು ಹೇಳಿದರು.



ಕಾವೇರಿ ಆರತಿಯನ್ನು ಕೆ.ಆರ್.ಎಸ್ ಬೃಂದಾವನದಲ್ಲಿ ಪ್ರಾರಂಭಿಸುವ ಸಂಬಂಧ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಅವರು ಸ್ಥಳ ಪರಿಶೀಲನೆ ನಡೆಸಿ ನೀಲಿ ನಕ್ಷೆ ಸಿದ್ಧಪಡಿಸಿ ನೀರಾವರಿ ಸಚಿವರಿಗೆ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಇತಿಹಾಸದಲ್ಲಿ ಇದೇ ಮೊದಲು 92 ವರ್ಷಗಳ ನಂತರ 156 ದಿನಗಳ ಕಾಲ ಕೆಆರ್‌ಎಸ್ ಅಣೆಕಟ್ಟು 124.48 ಅಡಿ ತುಂಬಿದೆ. ಇದು ಟೀಕೆ ಟಿಪ್ಪಣಿ ಮಾಡುವವರಿಗೆ ಉತ್ತರ ನೀಡಿದೆ. ಜುಲೈ ಮಾಹೆಯಿಂದ ಡಿಸೆಂಬರ್ ಮಾಹೆಯವರೆಗೂ ಬೆಳೆಗಳಿಗೆ ನಿರಂತರವಾಗಿ ನೀರು ನೀಡಲಾಗಿದೆ ಎಂದರು.

ಸಭೆಯಲ್ಲಿ ಶಾಸಕರಾದ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣಯ್ಯ, ಪಿ.ರವಿಕುಮಾರ್ ಗಣಿಗ, ಕೆ.ಎಂ. ಉದಯ್‌ಗೌಡ, ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸಿಫ್ ಮತ್ತು ಅಧಿಕಾರಿಗಳು ಸೇರಿದಂತೆ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

'ಮೈಸೂರು ಬಂದ್' ಯಶಸ್ವಿ

ಕಚೇರಿಗಳನ್ನು ಬಂದ್ ಮಾಡಿಸಿದರು. ಪರಿಣಾಮ ಮೈಸೂರಿನ ಪ್ರಮುಖ ವಾಣಿಜ್ಯ ಕೇಂದ್ರವಾದ ಕೆಆರ್. ಸರ್ಕಲ್, ಮಕ್ಕಾಜಿ ಚೌಕ, ಗಾಂಧಿ ಚೌಕ, ಓಲ್ಡ್ ಬ್ಯಾಂಕ್ ರೋಡ್, ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ, ದೇವ ರಾಜ ಅರಸು ರಸ್ತೆ, ಅಶೋಕ ರಸ್ತೆ, ಅಗ್ರಹಾರ, ಚಾಮರಾಜ ಜೋಡಿ ರಸ್ತೆ, ಮಹಾತ್ಮ ಗಾಂಧಿ ಜೋಡಿ ರಸ್ತೆ, ಬಿ.ಎನ್.ರಸ್ತೆ ಸೇರಿದಂತೆ ಮೈಸೂರು ನಗರಾದ್ಯಂತ ಎಲ್ಲಾ ರಸ್ತೆಗಳಲ್ಲಿ ವ್ಯಾಪಾರ–ವಹಿವಾಟು, ವಾಣಿಜ್ಯ ಚಟುವಟಿಕೆ ಗಳು ಸಂಪೂರ್ಣ ಸ್ಥಗಿತಗೊಂಡಿದ್ದವು.

ಸಿನಿಮಾ, ಹೋಟೆಲ್, ಪೆಟ್ರೋಲ್ ಬಂಕ್ ಇಲ್ಲ: ಹೋಟೆಲ್, ಸಿನಿಮಾ, ಪೆಟ್ರೋಲ್ ಬಂಕ್ ನಗರ ಮತ್ತು ಗ್ರಾಮಾಂತರ ಬಸ್ ಸಂಚಾರ ಮಧ್ಯಾಹ್ನ 1 ಗಂಟೆವರೆಗೆ ಸಂಪೂರ್ಣ ಬಂದ್ ಆಗಿತ್ತು. ಕೆಲ ಸಂಘಟನೆಗಳ ಕಾರ್ಯಕರ್ತರು ಸಯ್ಯಾಜಿ ರಾವ್ ರಸ್ತೆಯ ಮೈಸೂರು ಮಹಾನಗರಪಾಲಿಕೆಯ ಪ್ರಧಾನ ಕಚೇರಿ, ಶೇಷಾದ್ರಿ ಅಯ್ಯರ್ ರಸ್ತೆಯ ವಲಯ ಕಚೇರಿ, ನಜರ್ ಬಾದಿನ ತಾಲೂಕು

ತಹಸೀಲ್ದಾರ್ ಕಚೇರಿ, ಉಪನೋಂದಣಾಧಿಕಾರಿ ಕಚೇರಿ (ಉತ್ತರ), ಲೋಕೋಪಯೋಗಿ ಕಚೇರಿ, ಬನ್ನೂರು ರಸ್ತೆಯ ಸಿದ್ಧಾರ್ಥನಗರ ಬಡಾವಣೆಯಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿ, ಜೆಎಲ್‌ಬಿ ರಸ್ತೆಯ ಮುಡಾ ಕಚೇರಿ, ಕ್ರಾಫರ್ಡ್ ಹಾಲ್, ಹುಣಸೂರು ರಸ್ತೆಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಜಿಲ್ಲಾ ಪಂಚಾಯತಿ ಕಚೇರಿ, ಡಿಡಿಪಿಐ ಮತ್ತು ಡಿಡಿಪಿಯು ಕಚೇರಿ, ಕಾಡಾ ಕಚೇರಿ, ಸಹಕಾರ ಇಲಾಖೆ ನೋಂದಣಾಧಿಕಾರಿ ಕಚೇರಿ, ಯಾದವಗಿರಿಯ ಕರ್ನಾಟಕ ನಗರ ನೀರು ಮತ್ತು ಒಳಚರಂಡಿ ಮಂಡಳಿ ಕಚೇರಿ ಸೇರಿದಂತೆ ಮೈಸೂರು ನಗರದಾದ್ಯಂತ ಎಲ್ಲಾ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಚೇರಿಗಳ ಸಂಘಟನೆಗಳ ಕಾರ್ಯಕರ್ತರು ಬಲವಂತವಾಗಿ ಮುಚ್ಚಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಮೈಸೂರು ಮಹಾನಗರಪಾಲಿಕೆ ಪ್ರಧಾನ ಕಚೇರಿಗೆ ತೆರಳಿದ ಸಂಘಟನೆಗಳ ಕಾರ್ಯಕರ್ತರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪ್ರತಿಕೃತಿಯನ್ನು ಚಟ್ಟದ ಮೇಲಿರಿಸಿ ಒತ್ತು ಪ್ರದರ್ಶನ ಮಾಡಿದರಲ್ಲದೆ, ಕಚೇರಿ ಮುಂದೆ ದಹನ ಮಾಡುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಅದೇ ರೀತಿ ಮೈಸೂರು ನಗರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಗ್ರಾಮಾಂತರ ಬಸ್ ನಿಲ್ದಾಣಗಳಲ್ಲಿಯೂ ಸಹ ಅಮಿತ್ ಶಾ ಅವರ ಪ್ರತಿಕೃತಿಯನ್ನು ದಹಿಸಿದ ಕಾರ್ಯಕರ್ತರು ಅಮಿತ್ ಶಾ ಹೇಳಿಕೆ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಅಗತ್ಯ ಸೇವೆ ಹೊರತು ಎಲ್ಲಾ ಬಂದ್: ಆಸ್ಪತ್ರೆಗಳು, ಡಯಾಗ್ನೋಸ್ಟಿಕ್ ಸೆಂಟರ್‌ಗಳು, ಔಷಧಿ ಅಂಗಡಿಗಳು, ಹಾಲು ಮತ್ತು ನೀರಿನ ಅಂಗಡಿಗಳನ್ನು ಹೊರತುಪಡಿಸಿ ಉಳಿದೆಲ್ಲಾ ವ್ಯಾಪಾರ, ವಾಣಿಜ್ಯ–ವಹಿವಾಟುಗಳು ಎಂದಿನಂತೆ ವಹಿವಾಟು ನಡೆದವು. ಬಂದ್ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು, ಪ್ರವಾಸಿಗರು, ಬ್ಯಾಂಕ್ ವಹಿವಾಟು ಇನ್ನಿತರ ಕಾರ್ಯಕ್ಕೆ ಜನಸಾಮಾನ್ಯರಿಗೆ ಬಂದ್‌ನಿಂದಾಗಿ ತೀವ್ರ ತೊಂದರೆ ಉಂಟಾಯಿತು. ಕೆಲವೆಡೆ ಹೋಟೆಲ್‌ಗಳು ಮತ್ತು ಪೆಟ್ರೋಲ್ ಬಂಕ್‌ಗಳನ್ನು ಬಲವಂತವಾಗಿ ಬಂದ್ ಮಾಡಿಸಿದ ಪರಿಣಾಮ ವಾಹನ ಸವಾರರು ಮತ್ತು ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಯಿತು. ಇಂದು ಕಾರ್ಯಕ್ರಮವನ್ನು ನಿಗದಿಪಡಿಸಿಕೊಂಡಿದ್ದವರಿಗೆ ಬಂದ್ ಬಿಸಿ ತಟ್ಟಿತಲ್ಲದೆ, ಫುಟ್‌ಪಾತ್ ವ್ಯಾಪಾರಿಗಳು, ಕೂಲಿ ಕಾರ್ಮಿಕರು ಹಾಗೂ ಇನ್ನಿತರ ಸಣ್ಣಪುಟ್ಟ ವೃತ್ತಿ ಮಾಡುವವರು ತೊಂದರೆ ಅನುಭವಿಸುವಂತಾಯಿತು.

ಪರಿತಪಿಸಿದ ಜನತೆ: ಬೇರೆ ಊರಿಗೆ ತೆರಳಬೇಕಾದವರು ಇಲ್ಲವೆ ಬೇರೆ ಊರುಗಳಿಂದ ಮೈಸೂರಿಗೆ ಬರಬೇಕಾದವರಿಗೆ ಬಂದ್‌ನಿಂದಾಗಿ ತೊಂದರೆ ಉಂಟಾಗಿ ಪರಿತಪಿಸುವಂತಾಯಿತು. ಮೈಸೂರಿನ ದೇವರಾಜ, ಕೆ.ಆರ್. ಮಂಡಿ, ಓಲ್ಡ್ ಆರ್‌ಎಂಸಿ, ಬಂಡಿಪಾಳ್ಯದ ಎಪಿಎಂಸಿ ಸೇರಿದಂತೆ ಇನ್ನಿತರ ಮಾರುಕಟ್ಟೆಗಳಲ್ಲಿ ಅಂಗಡಿ–ಮುಂಗಟ್ಟುಗಳು ಬಂದ್ ಆಗಿದ್ದು, ಬಿಕೋ ಎನ್ನುತ್ತಿದ್ದವು. ಸದಾ ಗಿಜಿಗುಡುತ್ತಿದ್ದ ಮೈಸೂರಿನ ಡಿ.ದೇವರಾಜ ಅರಸು ರಸ್ತೆ, ಸಂತೇಪೇಟೆ, ಶಿವರಾಂಪೇಟೆ, ಬೋಟಿ ಬಜಾರ್, ಧನ್ವಂತರಿ ರಸ್ತೆ, ರಮಾವಿಲಾಸ ರಸ್ತೆ, ಸೀತಾವಿಲಾಸ ರಸ್ತೆ, ಕೃಷ್ಣವಿಲಾಸ ರಸ್ತೆ, ಚಾಮರಾಜ ಜೋಡಿ ರಸ್ತೆ, ಅಗ್ರಹಾರ ಸರ್ಕಲ್, ನೂರೊಂದು ಗಣಪತಿ ದೇವಸ್ಥಾನ ವೃತ್ತ, ನಂಜುಮಳಿಗೆ ಸೇರಿದಂತೆ ಮೈಸೂರು ನಗದ ಎಲ್ಲಾ ರಸ್ತೆಗಳು, ಸರ್ಕಲ್‌ಗಳಲ್ಲಿ ಜನರಿಲ್ಲದೆ ಬಿಕೋ ಎನ್ನುತ್ತಿತ್ತು.

ಮೆರವಣಿಗೆ: ಮೈಸೂರಿನ ದಾಸಪ್ಪ ಸರ್ಕಲ್ ವೃತ್ತದಲ್ಲಿರುವ ನಗರ ಕಾಂಗ್ರೆಸ್ ಕಚೇರಿಯಿಂದ ಎರಡು ತಂಡಗಳಾಗಿ ಕಾಂಗ್ರೆಸ್ ಕಾರ್ಯಕರ್ತರು ಅಮಿತ್ ಶಾ ಹೇಳಿಕೆ ವಿರೋಧಿಸಿ ಮೆರವಣಿಗೆ ನಡೆಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಕಚೇರಿಯಿಂದ ಹೊರಟ ಒಂದು ತಂಡ ರೈಲ್ವೆ ನಿಲ್ದಾಣ, ಇರ್ವಿನ್ ರಸ್ತೆ, ಗ್ರಾಮಾಂತರ ಬಸ್ ನಿಲ್ದಾಣ, ಬಿ.ಎನ್.ರಸ್ತೆ ಹಾರ್ಡಿಂಗ್ ಸರ್ಕಲ್ ಮೂಲಕ ರಂಗಚಾರ್ಲು ಪುರಭವನ ತಲುಪಿದರೆ, ಮತ್ತೊಂದು ತಂಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಎನ್. ವಿಜಯಕುಮಾರ್ ತಂಡ ಜಿಲ್ಲಾ ಕಾಂಗ್ರೆಸ್ ತಂಡವು ಡಿ.ದೇವರಾಜ ಅರಸು ರಸ್ತೆ, ಕೆ.ಆರ್. ಸರ್ಕಲ್, ಅರಮನೆ ವೃತ್ತದ ಭಾಗದ ಉತ್ತರ ದ್ವಾರದ ಬಲರಾಮ ಗೇಟ್‌ನ ಶ್ರೀ ಕೋಟೆ ಆಂಜನೇಯಸ್ವಾಮಿ ರಸ್ತೆ ಮೂಲಕ ಪುರಭವನ ತಲುಪಿತು.

ಸಮಾವೇಶ: ನಂತರ ಡಾ.ಅಂಬೇಡ್ಕರ್ ಹೋರಾಟ ಸಮಿತಿ, ದಲಿತ ಸಂಘರ್ಷ ಸಮಿತಿ, ರಾಜ್ಯ ರೈತ ಸಂಘ ಹಾಗೂ ಇನ್ನಿತರರ ಸಂಘಟನೆಗಳ ಕಾರ್ಯಕರ್ತರು ಮಧ್ಯಾಹ್ನ 2 ಗಂಟೆ ನಂತರ ರಂಗಚಾರ್ಲು ಪುರಭವನದ ಆವರಣದಲ್ಲಿ ಸಮಾವೇಶಗೊಂಡು ಸಂಜೆ 4 ಗಂಟೆವರೆಗೆ ಸಭೆ ನಡೆಸಿ, ಕೇಂದ್ರ ಸಚಿವ ಗೃಹ ಸಚಿವ ಅಮಿತ್ ಶಾ ವಿರುದ್ಧ ಘೋಷಣೆಗಳನ್ನು ಕೂಗಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಹಗುರವಾಗಿ ಮಾತನಾಡಿದ ಅಮಿತ್ ಶಾ ವಜಾಕ್ಕೆ ಆಗ್ರಹಿಸಿದರು.

ಭಾರೀ ಬಂದೋಬಸ್ತ್: ಬಂದ್ ಹಿನ್ನೆಲೆಯಲ್ಲಿ ಮೈಸೂರು ನಗರಾದ್ಯಂತ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜು ಹಾಗೂ ಅಪರಾಧ ಮತ್ತು ಸಂಚಾರ ವಿಭಾಗದ ಎಸಿಪಿ ಎಸ್.ಜಾಹ್ನವಿ ನೇತೃತ್ವದಲ್ಲಿ ಮೈಸೂರು ನಗರಾದ್ಯಂತ ಭಾರಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ದೇವರಾಜ ಉಪವಿಭಾಗದ ಎಸಿಪಿ ಶಾಂತ ಮಲ್ಲಪ್ಪ, ಎನ್.ಆರ್.ಉಪವಿಭಾಗದ ಅಶ್ವಥ್ ನಾರಾಯಣ, ವಿಜಯನಗರ ಉಪವಿಭಾಗದ ಎಸ್.ಜಿ.ಗಜೇಂದ್ರ ಪ್ರಸಾದ್, ಕೆ.ಆರ್.ಉಪವಿಭಾಗದ ರಮೇಶ್‌ಕುಮಾರ್, ಸಿಸಿಬಿ ಎಸಿಪಿ ಸಂದೇಶ್‌ಕುಮಾರ್ ಅವರ ಮೇಲ್ವಿಚಾರಣೆಯಲ್ಲಿ ಎಲ್ಲಾ ಪೊಲೀಸ್ ಠಾಣೆಗಳ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್‌ಗಳು ಹಾಗೂ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಕಟ್ಟೆಚ್ಚರ ವಹಿಸಲಾಗಿತ್ತು. ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ನೇತೃತ್ವದಲ್ಲಿ ಎಲ್ಲಾ ಸಂಚಾರ ಪೊಲೀಸ್ ಠಾಣೆಗಳ ಇನ್‌ಸ್ಪೆಕ್ಟರ್‌ಗಳು, ಸಬ್‌ಇನ್‌ಸ್ಪೆಕ್ಟರ್‌ಗಳ ಮೇಲ್ವಿಚಾರಣೆಯಲ್ಲಿ ಮೈಸೂರು ನಗರಾದ್ಯಂತ ಸಾರ್ವಜನಿಕರ ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ ಎಚ್ಚರ ವಹಿಸಲಾಗಿತ್ತು. ಆದರೂ ಶಾಲಾ–ಕಾಲೇಜುಗಳು, ವಾಣಿಜ್ಯ ಸಂಸ್ಥೆಗಳು, ಕೈಗಾರಿಕೆಗಳು, ಹೋಟೆಲ್ ಉದ್ಯಮ, ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಚೇರಿಗಳಿಗೆ ತೆರಳುವವರು, ಅಲ್ಲಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ಬಸ್ ಸಂಚಾರ ನಿರ್ಬಂಧಿಸಿದ್ದರಿಂದ ತೀವ್ರ ತೊಂದರೆ ಅನುಭವಿಸುವಂತಾಯಿತು. ಒಟ್ಟಾರೆ ವಿವಿಧ ಸಂಘಟನೆಗಳಿಂದ ಇಂದು ಕರೆ ನೀಡಿದ್ದ ಮೈಸೂರು ಬಂದ್ ಸಂಪೂರ್ಣ ಯಶಸ್ವಿಯಾಯಿತು.

ಮಿಶ್ರ ಪ್ರತಿಕ್ರಿಯೆ

ಮಂಗಳವಾರ ಬೆಳಿಗ್ಗೆ ನಗರದ ಡಿಸಿ ಕಚೇರಿ ಬಳಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಬಳಿಕ ಬೈಕ್ ಜಾಥಾ ಮೂಲಕ ತೆರಳಿದ ಹೋರಾಟಗಾರರು, ನಗರದ ಪ್ರಮುಖ ರಸ್ತೆಗಳಿಗೆ ಮೆರವಣಿಗೆ ಮೂಲಕ ತೆರಳಿದರು. ಅಂಬೇಡ್ಕರ್ ಹಾಗೂ ಸಂವಿಧಾನಕ್ಕೆ ಜೈಕಾರ ಮೊಳಗಿಸುತ್ತ ಸಾಗಿದ ಜಾಥಾದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಸಚಿವ ಅಮಿತ್ ಶಾ, ಬಿಜೆಪಿ ಹಾಗೂ ಆರ್‌ಎಸ್‌ಎಸ್ ವಿರುದ್ಧ ಪ್ರತಿಭಟನಾಕಾರರು ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರಮುಖ ರಸ್ತೆಗಳಲ್ಲಿ ಅಂಗಡಿ–ಮುಂಗಟ್ಟುಗಳನ್ನು ಮುಚ್ಚಿಸಲು ಪ್ರತಿಭಟನಾಕಾರರು ಮುಂದಾದರು. ಹೋರಾಟಗಾರರು ಬಂದ ಬಳಿಕ ಅಂಗಡಿಯ ಶೆಟರ್ ಎಳೆದರು. ಮತ್ತೆ ಕೆಲವರು ನಾವ್ಯಾಕೆ ಅಂಗಡಿ ಮುಚ್ಚಬೇಕೆಂದು ಪ್ರತಿಭಟನಾಕಾರರೊಂದಿಗೆ ವಾಗ್ವಾದಕ್ಕಿಳಿದ ಘಟನೆಯೂ ನಡೆಯಿತು. ಇನ್ನು ಬಹುತೇಕ ವರ್ತಕರು ಹೋರಾಟಗಾರರು ಅತ್ತ ಹೋಗುತ್ತಿದ್ದಂತೆ ಎಂದಿನಂತೆ ಅಂಗಡಿ–ಮುಂಗಟ್ಟು ತೆರೆದು ವ್ಯಾಪಾರ ಶುರು ಮಾಡಿದರು. ಇನ್ನುಳಿದಂತೆ ಜನಜೀವನ, ಸಾರಿಗೆ ವ್ಯವಸ್ಥೆ, ಸರ್ಕಾರಿ ಸೇವೆ, ಶಾಲಾ–ಕಾಲೇಜು, ಬ್ಯಾಂಕ್ ಸೇರಿದಂತೆ ಇತರ ಸೇವೆಗಳು ಎಂದಿನಂತೆಯೇ ಇತ್ತು. ಸರ್ಕಾರಿ, ಖಾಸಗಿ ಬಸ್, ಲಾರಿ, ಆಟೋ, ಟೆಂಪೋ ಸಂಚಾರ ಎಂದಿನಂತಿದ್ದರೆ ಶಾಲಾ ಕಾಲೇಜುಗಳು, ಕೇಂದ್ರ ರಾಜ್ಯ ಸರ್ಕಾರಿ ಇಲಾಖೆ, ಬ್ಯಾಂಕ್ ಸೇರಿದಂತೆ ಇತರೆ ಸರ್ಕಾರಿ ಸೇವೆಗಳು ಸುಗಮವಾಗಿ ನಡೆದವು, ಪೆಟ್ರೋಲ್ ಬಂಕ್, ಚಲನಚಿತ್ರ ಪ್ರದರ್ಶನಕ್ಕೆ ಯಾವುದೇ ಅಡ್ಡಿಯಿಲ್ಲ. ಜನ ಜೀವನ ಸಹಜ ಸ್ಥಿತಿಯಲ್ಲಿತ್ತು. ನಗರದಲ್ಲಿದ್ದ ಬೃಹತ್ ಮಾಲ್‌ಗಳು, ಬಟ್ಟೆ ಷೋರೂಂಗಳು ಸೇರಿದಂತೆ ಪ್ರತಿಷ್ಠಿತ ವರ್ತಕರು ಮಾತ್ರ ಮುನ್ನೆಚ್ಚರಿಕಾ ಕ್ರಮವಾಗಿ ಅಂಗಡಿಗಳನ್ನು ಸಂಪೂರ್ಣ ಬಂದ್‌ಗೊಳಿಸಿ, ಸಂಜೆ ಬಳಿಕ ತೆರೆದವು. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿರುವ ಸ್ಮಾರ್ಟ್ ಬಜಾರ್ ಬಾಗಿಲು ಮುಚ್ಚಲು ವಿಳಂಬ ಮಾಡಿದ್ದರಿಂದ ಮಾಲ್‌ಗೆ ನುಗ್ಗಲು ಪ್ರತಿಭಟನಾಕಾರರು ಯತ್ನಿಸಿದರು. ಅಷ್ಟರಲ್ಲಿ ಪೊಲೀಸರು ತಡೆಯೊಡ್ಡಿದರೂ ಪ್ರತಿಭಟನಾಕಾರರ ಆಕ್ರೋಶಕ್ಕೆ ಬಾಗಿಲು ಮುಚ್ಚಲಾಯಿತು. ನೂರಡಿ ರಸ್ತೆಯಲ್ಲಿ ಟೀ ಅಂಗಡಿ ಬಾಗಿಲು ಮುಚ್ಚದಿದ್ದಾಗ ಮಾತಿನ ಚಕಮಕಿ ನಡೆಯಿತು. ಬೆಂಗಳೂರು–ಮೈಸೂರು ಹೆದ್ದಾರಿಯ ಮಹಾರಾಜ ಗ್ರಾಂಡ್ ಹೋಟೆಲ್ ಬಳಿಯು ಮಾತಿನ ಚಕಮಕಿ ನಡೆಯಿತು. ಸಣ್ಣಪುಟ್ಟ ಘಟನೆ ಹೊರತುಪಡಿಸಿ ಬಂದ್ ಸಂಪೂರ್ಣವಾಗಿ ಶಾಂತಿಯುತವಾಗಿ ನಡೆಯಿತು. ಬಂದ್‌ಗೆ ಕರೆ ನೀಡಿದ್ದ ಹಿನ್ನೆಲೆಯಲ್ಲಿ ನಗರದ ಆಯಾ ಕಟ್ಟಿನ ಪ್ರದೇಶದಲ್ಲಿ ಪೊಲೀಸ್ ಬಿಗಿ ಭದ್ರತೆ ಮಾಡಲಾಗಿತ್ತು. ಜಾಥಾದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ, ಸಿಐಟಿಯು, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕರುನಾಡ ಸೇವಕರು, ಕರ್ನಾಟಕ ರಕ್ಷಣಾ ವೇದಿಕೆ, ಬಹುಜನ ಸಮಾಜ ಪಕ್ಷ, ಸಮಾನ ಮನಸ್ಕರ ವೇದಿಕೆ, ಸಿಪಿಐಎಂ ಪಕ್ಷ, ಅಖಿಲ ಭಾರತ ವಕೀಲರ ಒಕ್ಕೂಟ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ, ಮುಸ್ಲಿಂ ಒಕ್ಕೂಟ, ಡಾ.ಅಂಬೇಡ್ಕರ್ ವಾರಿಯರ್ಸ್, ಲಿಂಗಾಯಿತ ಮಹಾಸಭಾ, ಜಿಲ್ಲಾ ಸವಿತಾ ಸಮಾಜ, ಅಹಿಂದ ಚಳುವಳಿ, ಜಿಲ್ಲಾ ಕುರುಬರ ಸಂಘ, ಭೀಮ್ ಆರ್ಮಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ನಿವೃತ್ತ ನೌಕರರ ಸಂಘ, ರಾಜ್ಯ ರೈತ ಸಂಘ, ವಿಶ್ವಕರ್ಮ ಮಹಾಸಭಾ, ಕೃಷಿ ಕೂಲಿಕಾರರ ಸಂಘ, ರೈತ, ಕನ್ನಡಪರ ಹಾಗೂ ಪ್ರಗತಿಪರ ಹೋರಾಟಗಾರರು ಭಾಗಿಯಾಗಿದ್ದರು.

ವಾಹನಗಳಿಗೆ ನಿರ್ಬಂಧ ಚಿಂತನೆ



ಬೆಟ್ಟದ ಮೇಲೆ ದೇವಸ್ಥಾನ ಮತ್ತು ಮಹಿಷಾಸುರನ ಪ್ರತಿಮೆ ಆವರಣ ಹಾಗೂ ಪಾರ್ಕಿಂಗ್ ಸ್ಥಳದಲ್ಲಿ ವಾಹನಗಳೇ ನಿಲ್ಲುವುದರಿಂದ ಭಕ್ತಾದಿಗಳು ಓಡಾಡಲು ತೊಂದರೆಯಾಗುತ್ತಿದೆಯಲ್ಲದೇ, ಬೆಟ್ಟವು ಕುಸಿಯುವ ಅಪಾಯವಿದೆ. ಈಗಾಗಲೇ ಅತೀ ಮಳೆಗೆ ಅಲ್ಲಲ್ಲಿ ಭೂ ಕುಸಿತ ಉಂಟಾಗಿರುವ ನಿದರ್ಶನಗಳು ಕಣ್ಮುಂದೆಯೇ ಇವೆ.

ಭಕ್ತರು ಹಾಗೂ ವಾಹನಗಳ ಒತ್ತಡಕ್ಕನುಗುಣವಾಗಿ ಸೌಲಭ್ಯ ಒದಗಿಸಲು ಚಾಮುಂಡಿಬೆಟ್ಟದಲ್ಲಿ ಸ್ಥಳದ ಅಭಾವವಿರುವುದರಿಂದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಅಭಿವೃದ್ಧಿಗೆ ತೊಂದರೆ ಉಂಟಾಗಿರುವುದನ್ನು ಮನಗಂಡ ಜಿಲ್ಲಾಡಳಿತ ಹಾಗೂ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರವು ಒತ್ತಡ ತಪ್ಪಿಸಿ ಭಕ್ತರಿಗೆ ಅನುಕೂಲ ಮಾಡಿಕೊಡಲು ಕ್ರಿಯಾ ಯೋಜನೆಯೊಂದನ್ನು ರೂಪಿಸಿದೆ.

ವಾಹನಗಳ ಖಾಯಂ ನಿರ್ಬಂಧ: ಚಾಮುಂಡಿಬೆಟ್ಟಕ್ಕೆ ಗಣ್ಯರು, ಅತೀ ಗಣ್ಯರು ಸೇರಿದಂತೆ ಎಲ್ಲಾ ಬಗೆಯ ಸಾರ್ವಜನಿಕ ವಾಹನಗಳ ಪ್ರವೇಶವನ್ನು ಖಾಯಂ ಆಗಿ ನಿರ್ಬಂಧಿಸಲು ಚಿಂತನೆ ನಡೆಸಲಾಗಿದೆ. ಸಾರಿಗೆ ಬಸ್, ಪ್ರವಾಸಿಗರ ಬಸ್, ಟೆಂಪೋ, ಕಾರು, ಆಟೋ, ದ್ವಿಚಕ್ರ ವಾಹನ ಹೀಗೆ ಎಲ್ಲಾ ಬಗೆಯ ವಾಹನಗಳ ನಿರ್ಬಂಧಿಸಲು ಜಿಲ್ಲಾಡಳಿತ ಮುಂದಾಗಿದೆ.

ಗಣ್ಯರಿಗೆ ವಿಶೇಷ ವಾಹನ: ತಮಿಳುನಾಡಿನ ಪಳನಿ ಹಾಗೂ ಗುಂಡ್ಲುಪೇಟೆ ತಾಲೂಕು, ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಮಾದರಿಯಲ್ಲಿ ಸಾರ್ವಜನಿಕರು, ಭಕ್ತಾದಿಗಳು, ಪ್ರವಾಸಿಗರು ಹಾಗೂ ಗಣ್ಯರು, ಅತಿ ಗಣ್ಯರ ವಾಹನಗಳನ್ನು ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಪಾರ್ಕಿಂಗ್ ಲಾಟ್‌ನಲ್ಲಿ ನಿಲ್ಲಿಸಿ ಅಲ್ಲಿಂದ ಸರ್ಕಾರದಿಂದಲೂ ವ್ಯವಸ್ಥೆ ಮಾಡಲಾಗುವ ವಾಹನಗಳಲ್ಲಿ ಬೆಟ್ಟಕ್ಕೆ ತೆರಳಿ ದೇವರ ದರ್ಶನ ಮಾಡಿ ಹಿಂತಿರುಗುವಂತೆ ಮಾಡುವ ಪ್ರಸ್ತಾವನೆ ಸಿದ್ಧಪಡಿಸಲಾಗಿದೆ.

ಜಾಗ ಗುರ್ತಿಸುವ ಪ್ರಕ್ರಿಯೆ: ಪಾರ್ಕಿಂಗ್ ಲಾಟ್ ನಿರ್ಮಿಸಲು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಸರ್ಕಾರಿ ಜಾಗ ಗುರ್ತಿಸುವ ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಸೂಚನೆಯಂತೆ ತಹಸೀಲ್ದಾರ್ ಮಹೇಶ್‌ಕುಮಾರ್ ಆರಂಭಿಸಿದ್ದಾರೆ.

ನಗರ ಸಾರಿಗೆ ಬಸ್, ವಿಶೇಷ ವಾಹನ: ಭಕ್ತರು, ಪ್ರವಾಸಿಗರಿಗಾಗಿ ಸಾರಿಗೆ ಬಸ್ ಅಥವಾ ಎಲೆಕ್ಟ್ರಿಕ್ ವಾಹನಗಳು, ಗಣ್ಯರು, ಅತಿ ಗಣ್ಯರಿಗಾಗಿ 5, 10, 15, 20 ಆಸನಗಳುಳ್ಳ ವಿನೂತನ ಶೈಲಿಯ ವಾಹನಗಳನ್ನು ಪಾರ್ಕಿಂಗ್ ಲಾಟ್‌ನಿಂದ ಬೆಟ್ಟಕ್ಕೆ ಓಡಿಸಲು ಚಿಂತನೆ ನಡೆಸಲಾಗಿದೆ.

ಜಿಲ್ಲಾ ಪರಿಶೀಲನಾ ಸಮಿತಿ ನಿರ್ಧಾರ: ಚಾಮುಂಡಿಬೆಟ್ಟಕ್ಕೆ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ಖಾಯಂ ಆಗಿ ನಿಷೇಧಿಸಿ, ಬೆಟ್ಟದ ತಪ್ಪಲಿನಿಂದ ಪರ್ಯಾಯ ವಾಹನಗಳನ್ನು ಓಡಿಸುವಂತೆ ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ ರೂಪಾ ಸಲ್ಲಿಸಿದ ಪ್ರಸ್ತಾವನೆಗೆ ಜಿಲ್ಲಾಧಿಕಾರಿ ನೇತೃತ್ವದ ಜಿಲ್ಲಾ ಪರಿಶೀಲನಾ ಸಮಿತಿ, ಯೋಜನೆ ಅನುಷ್ಠಾನಗೊಳಿಸಲು ನಿರ್ಧರಿಸಿದೆ. ತಪ್ಪಲಿನಿಂದ ಬೆಟ್ಟಕ್ಕೆ ಜನರ ಕರೆದೊಯ್ಯುವ ವಾಹನಗಳಿಗೆ ಪ್ರಯಾಣ ದರ ನಿಗದಿಗೊಳಿಸಬೇಕೇ?, ಉಚಿತ ಪ್ರಯಾಣ ವ್ಯವಸ್ಥೆ ಮಾಡಬೇಕೇ?, ಮಾಡಿದಲ್ಲಿ ಎಷ್ಟು ದರ ನಿಗದಿಗೊಳಿಸಬೇಕೆಂಬುದನ್ನು ಪ್ರಾಧಿಕಾರದ ಅಧ್ಯಕ್ಷರೂ ಆದ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಂತಿಮಗೊಳಿಸಲು ಜಿಲ್ಲಾಡಳಿತ ಮುಂದಾಗಿದೆ.


ಡಿನ್ನರ್ ಪಾಲಿಟಿಕ್ಸ್‌ಗೆ ಬ್ರೇಕ್

ಬೇರೆಯವರಿಗೆ ಆಹ್ವಾನ ಇಲ್ಲ. ಬರಬಾರದು ಅಂತ ಇಲ್ಲ. ಹಿಂದೆ ಚಿತ್ರದುರ್ಗದಲ್ಲಿ ಎಸ್ಸಿ–ಎಸ್ಟಿ ಸಮಾವೇಶ ಆಯ್ತು. ಆ ಸಮಾವೇಶದಲ್ಲಿ ಕೆಲವು ನಿರ್ಣಯ ತಗೊಂಡಿದ್ದೆವು. ಅದರ ಬಗ್ಗೆಯೂ ನಾಳೆ ಚರ್ಚೆ ಮಾಡುತ್ತೇವೆ ಎಂದಿದ್ದರು.

ಮುಂದೆ ನಾವು ಎಸ್‌ಸಿ, ಎಸ್ಟಿ ಸಮಾವೇಶ ಮಾಡಬೇಕು ಅಂದು ಕೊಂಡಿದ್ದೇವೆ. ಅದಕ್ಕಾಗಿ ಎಲ್ಲಾ ಎಸ್ಸಿ–ಎಸ್ಟಿ ಸಮುದಾಯದ ಸಚಿವರು, ಶಾಸಕರನ್ನು ಕರೆದಿದ್ದೇವೆ. ನಾಳೆ ನಾನು ಡಿನ್ನರ್ ಮಾತ್ರ ಕೊಡ್ತಿದ್ದೇನೆ, ಡಿನ್ನರ್ ಪಾರ್ಟಿ ಅಲ್ಲ. ಹಿಂದೆ ಚಿತ್ರದುರ್ಗದಲ್ಲಿ ಸಮಾವೇಶ ಮಾಡಿದ್ದೆವು. ಅದು ಯಶಸ್ವಿ ಆಗಿತ್ತು, ಆಮೇಲೆ ನಮ್ಮ ಸರ್ಕಾರ ಬಂತು. ನಂತರ ನಾವು ಒಂದೆಡೆ ಸೇರಲು ಆಗಿರಲಿಲ್ಲ. ಆದ್ದರಿಂದ ನಾಳೆ ಸೇರುತ್ತಿದ್ದೇವೆ. ಮುಂದೆ ಸಮಾವೇಶ ಮಾಡುವ ಬಗ್ಗೆ ಚರ್ಚೆ ಮಾಡಲಿದ್ದೇವೆ. ಸ್ಥಳ ಎಲ್ಲಿ ಅಂತ ನಾಳೆ ಚರ್ಚೆ ಮಾಡ್ತೇವೆ ಎಂದು ತಿಳಿಸಿದ್ದರು. ಆದರೆ ರಾಜ್ಯದ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಅವರ ಸೂಚನೆ ಮೇರೆಗೆ ಸಭೆಯನ್ನು ಮುಂದೂಡಲಾಗಿದೆ ಎಂದು ಪರಮೇಶ್ವರ್ ಸಂಜೆ ಪ್ರಕಟಣೆ ಹೊರಡಿಸಿದ್ದಾರೆ.

ಸಿಎಂ ಸಿದ್ದರಾಮಯ್ಯಗೆ ಹಳ್ಳಿಹಕ್ಕಿ ಕುಟುಕು

ನಿಮ್ಮ ಆಟ ನಡೆಯಲ್ಲ, ಡಿಕೆಶಿಗೆ ಸಿಎಂ ಸ್ಥಾನ ತಪ್ಪಿಸಲು ಆಗಲ್ಲ



ಬೆಂಗಳೂರು: ರಾಜ್ಯದಲ್ಲಿನ ಅಹಿಂದ ಸಚಿವರುಗಳ ಡಿನ್ನರ್ ಮೀಟಿಂಗ್ ಇದೀಗ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಡಿಸಿಎಂ ಡಿಕೆ ಶಿವಕುಮಾರ್ ವಿದೇಶಿ ಪ್ರವಾಸದಲ್ಲಿದ್ದಾಗಲೇ ಸಚಿವ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಡಿನ್ನರ್ ಮೀಟಿಂಗ್ ನಡೆಸಿದ್ದರು. ಈ ಡಿನ್ನರ್ ಮೀಟಿಂಗ್ ಕುರಿತಂತೆ ಇದೀಗ ವಿಧಾನ ಪರಿಷತ್ ಸದಸ್ಯ ಹೆಚ್ ವಿಶ್ವನಾಥ್ ಅವರು ಸಿಎಂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ಬೆಂಗಳೂರಿನಲ್ಲಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಅವರು, ಡಿಸಿಎಂ ಡಿಕೆ ಶಿವಕುಮಾರ್ ಪರ ಬ್ಯಾಟ್ ಬೀಸಿದ್ದಾರೆ. ಔತಣಕೂಟಗಳನ್ನು ಏರ್ಪಾಡು ಮಾಡಿಸುತ್ತಿರುವುದೇ ಸಿಎಂ ಸಿದ್ದರಾಮಯ್ಯ. 30 ತಿಂಗಳ ನಂತರ ಸಿಎಂ ಸ್ಥಾನದಿಂದ ಇಳಿಯಬೇಕು. ಹೀಗಾಗಿ ಸಿದ್ದರಾಮಯ್ಯ ಏನೇನೋ ಆಟಗಳನ್ನು ಆಡುತ್ತಿದ್ದಾರೆ ಎಂದು ಎಚ್. ವಿಶ್ವನಾಥ್ ಆರೋಪಿಸಿದ್ದಾರೆ. ಯಾರೂ ಏನೇ ಮಾಡಿದರೂ ಡಿಕೆ ಶಿವಕುಮಾರ್‌ಗೆ ಸಿಎಂ ಸ್ಥಾನ ತಪ್ಪಿಸಲು ಆಗಲ್ಲ. 40 ವರ್ಷಗಳಿಂದ ಡಿಕೆ ಶಿವಕುಮಾರ್ ಕಾಂಗ್ರೆಸ್ಸಿನಲ್ಲಿದ್ದಾರೆ. ಡಿಕೆ ಶಿವಕುಮಾರ್ ಎಲ್ಲಿಗೆ ಹೋದರೂ ಕಾರ್ಯಕರ್ತರು ಅವರನ್ನು ಗುರುತಿಸುತ್ತಾರೆ. ಆದರೆ ಸಿದ್ದರಾಮಯ್ಯ ಚೇಲಾಗಳನ್ನು ಜೊತೆಯಲ್ಲಿಟ್ಟುಕೊಂಡು ಆಟವಾಡುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಸದ್ಯದಲ್ಲೇ ಶೇ.65 ಪರ್ಸೆಂಟ್ ಕಮಿಷನ್ ಸರ್ಕಾರ!

- ಗುತ್ತಿಗೆದಾರರು ಆತ್ಮಹತ್ಯೆಗೆ ಅರ್ಜಿ ಹಾಕಿಕೊಳ್ಳುವ ಕಾಲ ಬಂದಿದೆ
- ರಾಜ್ಯಪಾಲರ ಬಳಿ ದಯಾಮರಣ ಕೋರಿ ಪತ್ರವನ್ನೂ ಬರೆದಿದ್ದಾರೆ
- ಹಿಮಾಚಲಪ್ರದೇಶ, ಕೇರಳದಂತೆ ಕರ್ನಾಟಕ ಸರ್ಕಾರವೂ ದಿವಾಳಿಯತ್ತ ಸಾಗಿದೆ
- ವಿಪಕ್ಷ ನಾಯಕ ಆರ್.ಅಶೋಕ್ ಆಕ್ರೋಶ

ಬೆಂಗಳೂರು, ಜ.7(ಕೆಎಂಶಿ)–ಹಿಮಾಚಲ ಪ್ರದೇಶ, ಕೇರಳ ಸರ್ಕಾರಗಳಂತೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವೂ ದಿವಾಳಿಯತ್ತ ಸಾಗುತ್ತಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಕಾಂಗ್ರೆಸ್ 60 ಪರ್ಸೆಂಟ್ ಕಮಿಷನ್ ಸರ್ಕಾರ ಎಂದಿದ್ದಾರೆ, ಮೊದಲು 40 ಪರ್ಸೆಂಟ್ ಇದ್ದ ಕಮಿಷನ್ ಈಗ 60 ಪರ್ಸೆಂಟ್ ಆಗಿದೆ, ಮುಂದೆ 65 ಪರ್ಸೆಂಟ್ ಪಡೆಯಲು ಮಂತ್ರಿಮಂಡಲದಲ್ಲಿ ಚರ್ಚೆ ಆಗುತ್ತಿದೆ ಎಂದರು.

40X60 ನಿವೇಶನದಲ್ಲಿ ಮನೆ ಕಟ್ಟಲು 20 ಲಕ್ಷ ರೂ. ಲಂಚ ಕೊಡಬೇಕು, ಕಳೆದ 6 ತಿಂಗಳಿನಿಂದ ಕಾಂಗ್ರೆಸ್ ಸರ್ಕಾರದಲ್ಲಿ 60 ಪರ್ಸೆಂಟ್ ಕಮಿಷನ್ ಇದೆ, ಹಿಂದೆ ಬಿಜೆಪಿ ಸರ್ಕಾರದ ವಿರುದ್ಧ 40 ಪರ್ಸೆಂಟ್ ಕಮಿಷನ್ ಎಂಬುದಾಗಿ ಆರೋಪಿಸಿದ್ದ ಗುತ್ತಿಗೆದಾರರಿಂದ ಈಗ 40 ಪರ್ಸೆಂಟ್‌ಗಿಂತ ಹೆಚ್ಚು ಕಮಿಷನ್ ಕೀಳುತ್ತಿದ್ದಾರೆ. ಕಮಿಷನ್‌ಗಾಗಿ ಕಾಂಗ್ರೆಸ್ ಸರ್ಕಾರ ಇಡೀ ರಾಜ್ಯವನ್ನು ಕತ್ತಲೆಗೆ ದೂಡುತ್ತಿದೆ, ಹಿಟ್ನಾಳ್ ಸ್ವಲ್ಪ ಅಡ್ಜಸ್ಟ್ ಮಾಡ್ಕೊಳ್ಳಿ ಎಂದಿದ್ದರು, ಓಟ್ ಹಾಕುವಾಗಲೂ ಅಡ್ಜಸ್ಟ್ ಮಾಡ್ಕೊಳ್ಳಿ ಅಂತ ಹೇಳಬೇಕಿತ್ತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ, 'ಪಾಪರ್ ಮಾಡಿಬಿಡ್ತೀರಿ ನೀವು' ಎಂದು ಕಾಂಗ್ರೆಸ್‌ನವರಿಗೆ ಹೇಳಿದ್ದಾರೆ, ಅಭಿವೃದ್ಧಿ ಕುಂಠಿತ ಆಗಿದೆ ಎಂಬುದಾಗಿ ರಾಜುಕಾಗೆ ಸೇರಿದಂತೆ ಕಾಂಗ್ರೆಸ್ ಶಾಸಕರೇ ದಿನನಿತ್ಯ ಕೂಗಾಡುತ್ತಿದ್ದಾರೆ, ಕಾಂಗ್ರೆಸ್‌ನವರು ಮಾತ್ರ ಅಭಿವೃದ್ಧಿ ಆಗುತ್ತಿದ್ದಾರೆ ಎಂದರು.


ಆರ್.ಅಶೋಕ್

ಕಮಿಷನ್ ಪ್ರಮಾಣವನ್ನು ಮುಂದಿನ ದಿನಗಳಲ್ಲಿ ಶೇ.5ರಷ್ಟು ಹೆಚ್ಚಿಸಲು ಕಾಂಗ್ರೆಸ್ ಮುಂದಾಗಿದೆ, ಗುತ್ತಿಗೆದಾರರು ಆತ್ಮಹತ್ಯೆಗೆ ಅರ್ಜಿ ಹಾಕಿಕೊಳ್ಳುವ ಕಾಲ ಬಂದಿದೆ. ರಾಜ್ಯಪಾಲರಿಗೆ ದಯಾಮರಣ ಕೋರಿ ಪತ್ರ ಬರೆದಿದ್ದಾರೆ, ಕಮಿಷನ್ ಕೇಳಿರುವುದಕ್ಕೆ ದಾಖಲೆ ಇದೆಯಾ ಎಂಬುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳುತ್ತಿದ್ದಾರೆ, ಈ ಹಿಂದೆ 40 ಪರ್ಸೆಂಟ್ ಆರೋಪ ಮಾಡಿದ್ದಾಗ ದಾಖಲೆ ಕೊಟ್ಟಿದ್ದಿರಾ, ಇದ್ಯಾವ ನ್ಯಾಯ, ಇದು 60 ಪರ್ಸೆಂಟ್ ಲೂಟಿ ಸರ್ಕಾರ ಎಂಬ ಕುಮಾರಸ್ವಾಮಿ ಹೇಳಿಕೆಯನ್ನು ನಾನೂ ಸಮರ್ಥಿಸುತ್ತೇನೆ ಎಂದರು.

ಬಜೆಟ್‌ನಲ್ಲಿ ಸಿದ್ದರಾಮಯ್ಯ ಮೋಸ ಮಾಡಿದ್ದಾರೆ, ಬಿಜೆಪಿಗಿಂತ ಹೆಚ್ಚು ಅಭಿವೃದ್ಧಿ ಮಾಡಿದ್ದೇವೆ, ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಹೆಚ್ಚು ಅನುದಾನ ಕೊಟ್ಟಿರುವುದಾಗಿ ಹೇಳಿಕೊಂಡಿದ್ದಾರೆ. ಆದರೆ, ಗಂಗಾ ಕಲ್ಯಾಣ ಯೋಜನೆಗೆ ಬಿಜೆಪಿ 60 ಕೋಟಿ ರೂ. ಕೊಟ್ಟಿತ್ತು, ಈಗ ಮೀಸಲಿಟ್ಟಿರುವುದು ಕೇವಲ 40 ಕೋಟಿ ರೂ. ಮಾತ್ರ.

ಡಾ.ಬಿ.ಆರ್.ಅಂಬೇಡ್ಕರ್ ಸ್ವಯಂ ಉದ್ಯೋಗ ಯೋಜನೆಗೆ ಬಿಜೆಪಿ ಸರ್ಕಾರ 100 ಕೋಟಿ ರೂ. ಮೀಸಲಿಟ್ಟಿತ್ತು, ಕಾಂಗ್ರೆಸ್ 45 ಕೋಟಿ ರೂ.ಗೆ ಇಳಿಸಿದೆ, ಆದಿಜಾಂಬವ ಅಭಿವೃದ್ಧಿ ನಿಗಮಕ್ಕೆ ಬಿಜೆಪಿ 100 ಕೋಟಿ ರೂ. ಕೊಟ್ಟರೆ, ಸಿದ್ದರಾಮಯ್ಯ 40 ಕೋಟಿ ರೂ. ನೀಡಿರುವುದು ದಲಿತರ ಮೇಲಿನ ಪ್ರೀತಿಯೇ, ಕಾಳಜಿಯೇ ಎಂದು ಪ್ರಶ್ನಿಸಿದರು. ದೇವರಾಜು ಅರಸು ಅಭಿವೃದ್ಧಿ ನಿಗಮಕ್ಕೆ ಬಿಜೆಪಿ ಸರ್ಕಾರ 190 ಕೋಟಿ ರೂ. ಕೊಟ್ಟರೆ, ಕಾಂಗ್ರೆಸ್ ಸರ್ಕಾರ ಕೊಟ್ಟಿರುವುದು 100 ಕೋಟಿ ರೂ. ಮಾತ್ರ, ವಿಶ್ವಕರ್ಮ ಸಮುದಾಯಕ್ಕೆ ಕೇವಲ 13 ಕೋಟಿ ರೂ. ನೀಡಿದ್ದು, ಸಂಗೊಳ್ಳಿರಾಯಣ್ಣ ಕ್ಷೇತ್ರ ಅಭಿವೃದ್ಧಿಗೆ 50 ಕೋಟಿ ರೂ. ಕೊಟ್ಟಿದ್ದಾರೆ.

ಉಪ್ಪಾರ ಅಭಿವೃದ್ಧಿ ನಿಗಮಕ್ಕೆ ಬಿಜೆಪಿ 15 ಕೋಟಿ ರೂ. ನೀಡಿದರೆ, ಕಾಂಗ್ರೆಸ್ ಸರ್ಕಾರ 5 ಕೋಟಿ ರೂ. ನೀಡಿದೆ, ವೀರಶೈವ ನಿಗಮಕ್ಕೆ 100 ಕೋಟಿ ಕೊಟ್ಟಿದ್ದೆವು, ಇವರು 50 ಕೋಟಿ ರೂ. ಕೊಟ್ಟಿದ್ದಾರೆ, ದೇವಾಲಯ ಹಾಗೂ ಇತರೆ ಧಾರ್ಮಿಕ ಸಂಸ್ಥೆಗಳಿಗೆ 274.68 ಕೋಟಿ ರೂ. ಕೊಟ್ಟಿದ್ದೆವು, ಕಾಂಗ್ರೆಸ್‌ನವರು 90 ಪರ್ಸೆಂಟ್ ಡಿಸ್ಕೌಂಟ್ ಮಾಡಿ, 17 ಕೋಟಿ ರೂ. ಕೊಟ್ಟಿದ್ದಾರೆ. ಮಠ, ದೇವಾಲಯಗಳಿಗೆ, ಮುಖ್ಯಮಂತ್ರಿಗಳ ಸಹಾಯಧನಕ್ಕೆ ಬಿಜೆಪಿ ಅವಧಿಯಲ್ಲಿ 154.85 ಕೋಟಿ ರೂ. ನೀಡಿದ್ದರೆ, ಕಾಂಗ್ರೆಸ್ ಸರ್ಕಾರ 30 ಕೋಟಿ ರೂ. ಕೊಟ್ಟಿದೆ. ಕಬರ್‌ಸ್ತಾನ್ ಅಂತ ಇರೋಬರೋ ಭೂಮಿಗೆಲ್ಲ ಕನ್ನ ಹಾಕಿದ್ದಾರೆ, ಸಿದ್ದರಾಮಯ್ಯ ಹಿಂದೂಗಳಿಗೆ ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ಗಮನಿಸಿದರೆ, ಹಿಂದೂ ರುದ್ರಭೂಮಿಗೆ 10 ಕೋಟಿ ರೂ. ಕೊಟ್ಟಿದ್ದಾರೆ, ಬಿಜೆಪಿ 15 ಕೋಟಿ ರೂ. ಕೊಟ್ಟಿತ್ತು. ರೋಟಿ, ಕಪಡಾ, ಮಕಾನ್ ನೇಕಾರ್ ಯೋಜನೆಗೆ 125.77 ಕೋಟಿ ಬಿಜೆಪಿ ಕೊಟ್ಟಿದೆ, ಕಾಂಗ್ರೆಸ್ ಕೇವಲ 10 ಕೋಟಿ ರೂ. ಮಾತ್ರ ಕೊಟ್ಟಿದೆ ಎಂದು ಅಂಕಿ–ಅಂಶ ನೀಡಿದರು.

ಬಲವಂತದ ಬಂದ್ ತಡೆಯಲು ಪೊಲೀಸರು ವಿಫಲ: ವಿ.ಹೆಗಡೆ

ಮೈಸೂರು, ಜ.7(ಆರ್‌ಕೆ)– ಕೇಂದ್ರ ಸಚಿವ ಅಮಿತ್ ಶಾ ಅವರು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಹಗುರವಾಗಿ ಮಾತನಾಡಿದರೆಂಬ ಕಾರಣಕ್ಕಾಗಿ ವಿವಿಧ ಸಂಘಟನೆಗಳು ಇಂದು ನಡೆಸಿದ ಬಲವಂತ ಮೈಸೂರು ಬಂದ್ ತಡೆಯುವಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎಂದು ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ ಆರೋಪಿಸಿದ್ದಾರೆ.

ಇಂದು ಮೈಸೂರು ಬಂದ್‌ಗೆ ವಿವಿಧ ಸಂಘಟನೆಗಳು ಕರೆ ನೀಡಿದ್ದುದು ಸರಿಯಷ್ಟೆ, ಅಂಗಡಿ–ಮುಂಗಟ್ಟುಗಳನ್ನು ಬಂದ್ ಮಾಡಿಸಲು ಸಂಘಟನೆಗಳ ಪದಾಧಿಕಾರಿಗಳು, ಸದಸ್ಯರು ಎಲ್ಲಾ ಕಡೆ ವಾಹನಗಳಲ್ಲಿ ಸುತ್ತಾಡಿ, ಅಂಗಡಿ–ಮುಂಗಟ್ಟು, ಶಾಲಾ–ಕಾಲೇಜು, ಬ್ಯಾಂಕ್‌ಗಳು, ಹೋಟೆಲ್‌ಗಳು, ಪೆಟ್ರೋಲ್ ಬಂಕ್‌ಗಳು, ಸಿನಿಮಾ ಮಂದಿರಗಳು, ಸರ್ಕಾರಿ ಕಚೇರಿಗಳ ಬಂದ್ ಮಾಡಿಸುವಲ್ಲಿ ಯಶಸ್ವಿಯಾಗಿರುವುದು ಸರಿಯಷ್ಟೆ, ಆದರೆ ಇದರಿಂದ ಯಾರಿಗೆ ಏನು ಲಾಭವಾಯಿತು ಎಂಬುದು ಗೊತ್ತಿಲ್ಲ. ಇದರಿಂದ ಶಾಲಾ ಮಕ್ಕಳು, ಪ್ರವಾಸಿಗರು, ಪ್ರಯಾಣಿಕರು, ವ್ಯಾಪಾರಿಗಳು, ಉದ್ಯಮಿಗಳು, ಕೂಲಿ ಕಾರ್ಮಿಕರು, ವೃತ್ತಿಪರರ ತೊಂದರೆಗೀಡಾಗುವಂತಾಯಿತು ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ವ್ಯಾಪಾರ ವಹಿವಾಟುಗಳಿಗೆ ನಷ್ಟ ಉಂಟಾದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಸರ್ಕಾರಕ್ಕೆ ತೆರಿಗೆ ನಷ್ಟವಾದಂತೆಯೇ ಸರಿ. ಅದು ಮತ್ತೊಂದು ರೂಪದಲ್ಲಿ ಜನರ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಒಂದು ಬಂದ್‌ಗೆ ಕರೆ ನೀಡಿದಾಗ ಅದರ ಆಗು–ಹೋಗುಗಳ ಬಗ್ಗೆ ಗಮನಹರಿಸಬೇಕು. ಜನರು ಸ್ವಯಂಪ್ರೇರಿತವಾಗಿ ಬಂದ್ ಮಾಡಿದರೆ ಅದಕ್ಕೆ ಒಂದು ಪ್ರತಿಭಟನೆಯ ರೂಪ ದೊರೆಯುತ್ತದೆ. ಆದರೆ ಬಲವಂತವಾಗಿ ಬಂದ್ ಮಾಡಿಸುವುದು ನಾಗರಿಕ ಸಮಾಜಕ್ಕೆ ಒಳಿತಾಗುವುದಿಲ್ಲ. ಇಷ್ಟೆಲ್ಲಾ ನಡೆದರೂ ಪೊಲೀಸರು ಮೂಕಪ್ರೇಕ್ಷಕರಾಗಿ ನೋಡುತ್ತಿದ್ದುದು ದುರದೃಷ್ಟವಶಾತ್. ಎಂದ ಹೆಗಡೆ ಅವರು, ನಮ್ಮ ದೇಶಕ್ಕೆ ಉತ್ಕೃಷ್ಟವಾದ ಸಂವಿಧಾನವನ್ನು ನೀಡುವ ಮೂಲಕ ವಿಶ್ವದ ಗಮನ ಸೆಳೆದಿರುವ ಡಾ.ಅಂಬೇಡ್ಕರ್ ಅವರ ಬಗ್ಗೆ ನಮಗೂ ಅಪಾರ ಗೌರವ, ಮನ್ನಣೆ ಇದೆ. ಆದರೆ ಜನಸಾಮಾನ್ಯರಿಗೆ ತೊಂದರೆ ಕೊಟ್ಟು ಪ್ರತಿಭಟನೆ ನಡೆಸುವ ಮೂಲಕ ತೊಂದರೆ ಮಾಡುವುದು ಯಾರೊಬ್ಬರಿಗೂ ಒಳಿತಾಗುವುದಿಲ್ಲ. ಈಗಲಾದರೂ ನಾಗರಿಕ ಸಮಾಜ ಎಚ್ಚೆತ್ತುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಅತಿಥಿ ಉಪನ್ಯಾಸಕರ ವೇತನ ಪಾವತಿಗೆ ವಿಧಾನಪರಿಷತ್ ಸದಸ್ಯ ವಿವೇಕಾನಂದ ಸ್ಪಂದನೆ

ಮೈಸೂರು, ಜ.7(ಬಿಎಲ್‌ಯು)– ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸರ್ಕಾರದಿಂದ ವೇತನ ಪಾವತಿಗೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.


ಕೆ.ವಿವೇಕಾನಂದ

ರಾಜ್ಯದಲ್ಲಿ 470 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, 10,500 ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಆದರೆ ಕಳೆದ ಎರಡು ತಿಂಗಳಿಂದ ಇವರಿಗೆ ವೇತನವಾಗದೆ ಸಂಕಷ್ಟದಲ್ಲಿದ್ದರು. ಈ ಸಂಬಂಧ ಅತಿಥಿ ಉಪನ್ಯಾಸಕರ ನಿಯೋಗ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ವಿವೇಕಾನಂದ ಅವರನ್ನು ಭೇಟಿ ಮಾಡಿ ವಸ್ತುಸ್ಥಿತಿ ಮನವರಿಕೆ ಮಾಡಿ ಕೊಟ್ಟಿದ್ದರು.

ಇದಕ್ಕೆ ತಕ್ಷಣ ಸ್ಪಂದಿಸಿದ ವಿವೇಕಾನಂದ ಅವರು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತೆ ಮಂಜುಶ್ರೀ ಅವರಿಗೆ ದೂರವಾಣಿ ಕರೆ ಮಾಡಿ ಅತಿಥಿ ಉಪನ್ಯಾಸಕರ ಬವಣೆ ವಿವರಿಸಿದರು. ಈ ಸಂಬಂಧ ಅತಿಥಿ ಉಪನ್ಯಾಸಕರಿಗೆ 2024–25ನೇ ಸಾಲಿನಲ್ಲಿ ಗೌರವ ಧನ ಪಾವತಿಸಲು ಅಗತ್ಯ ಅನುದಾನಕ್ಕೆ ಬೇಡಿಕೆ ಸಲ್ಲಿಸಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ ಮಂಜುಶ್ರೀ ಸೂಚಿಸಿದ್ದಾರೆ. ತಮ್ಮ ಸಮಸ್ಯೆಗೆ ಸ್ಪಂದಿಸಿದ ವಿವೇಕಾನಂದ ಅವರಿಗೆ ಅತಿಥಿ ಉಪನ್ಯಾಸಕರ ಹಿತರಕ್ಷಣಾ ಸಮಿತಿ ಕೃತಜ್ಞತೆ ಸಲ್ಲಿಸಿದೆ.

ನಮ್ಮ ಆಕ್ಷೇಪಣೆ ಪರಿಗಣಿಸದಿದ್ದರೆ ಕೋರ್ಟ್ ಮೊರೆ

ಮೈಸೂರು, ಜ.7(ಬಿಎಲ್‌ಯು)– ಮೈಸೂರಿನ ಕೆಆರ್‌ಎಸ್ ರಸ್ತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವ ಸಂಬಂಧ ನಾವು ನೀಡಿರುವ ಆಕ್ಷೇಪಣೆ ಪರಿಗಣಿಸದೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದರೆ ನ್ಯಾಯಾಲಯದ ಮೊರೆ ಹೋಗುತ್ತೇವೆ ಎಂದು ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಎಚ್ಚರಿಸಿದ್ದಾರೆ.


ಸ್ನೇಹಮಯಿ ಕೃಷ್ಣ

ಕೃಷ್ಣಾಜಮ್ಮಣ್ಣಿ ಅವರ ನೆನಪಿಗಾಗಿ ಆ ರಸ್ತೆಗೆ 'ಪ್ರಿನ್ಸೆಸ್ ರಸ್ತೆ' ಹೆಸರಿಡಲಾಗಿದೆ. ಆದರೆ ಶಾಸಕ ಹರೀಶ್‌ಗೌಡ ಆ ರಸ್ತೆಗೆ ಸಿದ್ದರಾಮಯ್ಯ ಹೆಸರಿಡುತ್ತಾರಂತೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪಾಲಿಕೆ ಸಭೆಯ ನಡಾವಳಿಗಳನ್ನು ಗಮನಿಸಿದಾಗ ಅಲ್ಲಿನ ಆದೇಶವೇ ಅಂತಿಮವಲ್ಲ. ರಸ್ತೆಗೆ ಹೆಸರಿಡುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಅನುಮತಿ ಪಡೆಯಬೇಕಿದೆ ಎಂದು ತಿಳಿಸಿದ್ದಾರೆ. ಈ ವಿಚಾರವಾಗಿ ಯಾರೂ ಆತಂಕಪಡುವ ಅಗತ್ಯವಿಲ್ಲ. ನಮ್ಮ ಆಕ್ಷೇಪಣೆ ಹಾಗೂ ದಾಖಲೆಗಳನ್ನು ಪರಿಶೀಲನೆ ನಡೆಸದೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದರೆ ನಾವು ನ್ಯಾಯಾಲಯದ ಮೊರೆ ಹೋಗುತ್ತೇವೆ. ಈ ಮೂಲಕ ರಾಜಕುಮಾರಿ ಹೆಸರು ಉಳಿಸುತ್ತೇವೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ.

ಬ್ಯಾಟರಿಚಾಲಿತ ವ್ಹೀಲ್‌ಚೇರ್ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಜ.7–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2024–25ನೇ ಸಾಲಿಗೆ ವಿಕಲಚೇತನ ವ್ಯಕ್ತಿಗಳಿಗೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಬ್ಯಾಟರಿ ಚಾಲಿತ ವ್ಹೀಲ್‌ಚೇರ್ ಸೌಲಭ್ಯ ಪಡೆಯಲು ಅರ್ಹ ವಿಕಲಚೇತನ ವ್ಯಕ್ತಿಗಳು ಜ.20ರ ಒಳಗಾಗಿ ಆನ್‌ಲೈನ್ ಮೂಲಕ Suvidha website URL: https://suvidha.karnataka.gov.in



ಪೋರ್ಟಲ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಹೆಚ್.ಡಿ.ಕೋಟೆ–9611519719, ಸರಗೂರು–7090994492, ಹುಣಸೂರು–9739644332, ಕೆ.ಆರ್.ನಗರ–9480253202, ಮೈಸೂರು ತಾಲೂಕು–9591136015, 6360483829, ನಂಜನಗೂಡು–8951113120, ಪಿರಿಯಾಪಟ್ಟಣ–7204151852, ತಿ.ನರಸೀಪುರ– 8050829685 ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಯ ವಿಕಲಚೇತನರ ಸಹಾಯವಾಣಿ ಕೇಂದ್ರದ ದೂ. ಸಂಖ್ಯೆ: 0821–2490333ನ್ನು ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾತ್ಮ ಗಾಂಧಿ ರಸ್ತೆ, ರಾಮಾನುಜ ರಸ್ತೆಯಲ್ಲಿ ಕಾಮಗಾರಿ ವೀಕ್ಷಣೆ


ಡೆಕ್ ನಿರ್ಮಾಣ ಮತ್ತು ಚರಂಡಿ ಕಾಮಗಾರಿ ಕುರಿತು ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಮೈಸೂರು ಪಾಲಿಕೆ ಅಧಿಕಾರಿಗಳ ತಂಡ ಸ್ಥಳ ಪರಿಶೀಲನೆ ನಡೆಸಿತು.

ಮೈಸೂರು, ಜ.7(ಎಸ್‌ಪಿಎನ್)– ಮೈಸೂರು ಅಗ್ರಹಾರ ಸುತ್ತಮುತ್ತ ಡೆಕ್ ನಿರ್ಮಾಣ ಮತ್ತು ಚರಂಡಿ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆ; ಇದರಿಂದ ವಾಹನ ಸವಾರರಿಗೆ ಆಗುತ್ತಿರುವ ಕಿರಿಕಿರಿ ಕುರಿತು ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಮೈಸೂರು ನಗರಪಾಲಿಕೆ ಅಧಿಕಾರಿಗಳ ತಂಡ ಸ್ಥಳ ಪರಿಶೀಲನೆ ನಡೆಸಿದರು.

ಈ ವೇಳೆ ಮಹಾತ್ಮಗಾಂಧಿ ರಸ್ತೆ, ರಾಮಾನುಜ ರಸ್ತೆಯಲ್ಲಿ ಹಮ್ಮಿಕೊಂಡಿರುವ ಡೆಕ್ ನಿರ್ಮಾಣ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿನ ನಿವಾಸಿಗಳು ಶಾಸಕರಿಗೆ ದೂರು ನೀಡಿದ್ದ ಹಿನ್ನೆಲೆಯಲ್ಲಿ ಶಾಸಕರು ಮತ್ತು ಅಧಿಕಾರಿಗಳ ತಂಡ ಸ್ಥಳ ಪರಿಶೀಲನೆ ನಡೆಸಿತು.

ಪರಿಶೀಲನೆ ನಂತರ ಇನ್ನೊಂದು ತಿಂಗಳ ಒಳಗಾಗಿ ಎಂ.ಜಿ.ರಸ್ತೆ, ರಾಮಾನುಜ ರಸ್ತೆ ಜಂಕ್ಷನ್‌ನಲ್ಲಿ ನಡೆಯುತ್ತಿರುವ ಕಾಮಗಾರಿ ಮುಗಿಯಬೇಕು. ಇಲ್ಲದಿದ್ದರೆ ಶಿಸ್ತುಕ್ರಮಕ್ಕೆ ಶಿಫಾರಸು ಮಾಡುವುದಾಗಿ ಖಡಕ್ ಸೂಚನೆ ನೀಡಿದರು. ಈ ವೇಳೆ ಮೈಸೂರು ನಗರಪಾಲಿಕೆ ಕಾರ್ಯಪಾಲಕ ಅಭಿಯಂತರ ಮಹೇಶ್, ಕಿರಿಯ ಅಭಿಯಂತರ ಅಂಕಯ್ಯ, ಸೇರಿದಂತೆ ಸ್ಥಳೀಯ ನಿವಾಸಿಗಳೊಂದಿಗೆ ಶಾಸಕರು ಸ್ಥಳ ಪರಿಶೀಲಿಸಿದರು.

ಎಸ್‌ಬಿಎಂ ಮಂಜು ನೇತೃತ್ವದಲ್ಲಿ ನಾಮಪತ್ರ ಸಲ್ಲಿಕೆ...


ಮೈಸೂರಿನ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರ ಚುನಾವಣೆಗೆ ಎಸ್‌ಬಿಎಂ ಮಂಜು ನೇತೃತ್ವದಲ್ಲಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ಈ ವೇಳೆ ಮಾಜಿ ಅಧ್ಯಕ್ಷ, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು (ಸಾಮಾನ್ಯ), ನಿರ್ದೇಶಕರಾದ ಸೋಮಣ್ಣ ಅವರ ಪುತ್ರಿ ಶಿಲ್ಪ ರಾಮಕೃಷ್ಣಯ್ಯ, ಮಾಜಿ ಅಧ್ಯಕ್ಷ ಎಸ್.ಕೃಷ್ಣ ಅವರ ಪುತ್ರ ಕೆ.ಪ್ರಶಾಂತ್, ಮಾಜಿ ನಿರ್ದೇಶಕರಾದ ವರದರಾಜು, ಮಧು, ನಿರ್ದೇಶಕರಾದ ರವಿ ರಾಜಕೀಯ (ಸಾಮಾನ್ಯ), ಎ.ಮಂಚಪ್ಪ (ಪರಿಶಿಷ್ಟ ಮೀಸಲು), ಆರ್.ರವಿಕುಮಾರ್ (ಎಸ್.ಆರ್) ಹಿಂದುಳಿದ ವರ್ಗದ ಅಭ್ಯರ್ಥಿ, ಅರವಿಂದ (ಸಾಮಾನ್ಯ), ಅಭ್ಯರ್ಥಿಗಳಾದ ಜಿ.ಕುಮಾರ್ ಗೌಡ (ಸಾಮಾನ್ಯ), ವಸಂತ ಮುನೀಶ್ (ಮಹಿಳಾ ಮೀಸಲು), ಛಾಯಮ್ಮ (ಮಹಿಳಾ ಮೀಸಲು), ರೋಹಿತ್ .ಎಸ್ (ಎಸ್‌ಟಿ ಮೀಸಲು), ವಿಕಾಸ್‌ಗೌಡ (ಸಾಮಾನ್ಯ) ಅವರು ಚುನಾವಣಾ ಅಧಿಕಾರಿ ರಾಜು, ಕಾರ್ಯನಿರ್ವಾಹಕ ಅಧಿಕಾರಿ ಹರ್ಷಿತ್‌ಗೌಡ ಅವರಿಗೆ ನಾಮಪತ್ರ ಸಲ್ಲಿಸಿದರು.

ಜ.17, ಸರಗೂರು ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ

ಸಮ್ಮೇಳನಾಧ್ಯಕ್ಷರಾಗಿ ಡಾ.ವೈ.ಡಿ.ರಾಜಣ್ಣ ಆಯ್ಕೆ



ಮೈಸೂರು, ಜ.7– ಸರಗೂರು ನೂತನ ತಾಲೂಕು ಕೇಂದ್ರವಾಗಿ ರೂಪುಗೊಂಡ ನಂತರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಜನವರಿ 17 ರಂದು ಸರಗೂರು ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ಆಯೋಜನೆ ಮಾಡಲಾಗಿದೆ. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿ, ಕವಿ ಡಾ. ವೈ.ಡಿ. ರಾಜಣ್ಣ ಅವರನ್ನು ಸರಗೂರು ತಾಲೂಕು ಕಸಾಪ ಸಮಿತಿ ಆಯ್ಕೆ ಮಾಡಿದೆ. ತಾಲೂಕು ಕಸಾಪ ಅಧ್ಯಕ್ಷ ಕೆಂಡಗಣ್ಣಸ್ವಾಮಿ ನೇತೃತ್ವದಲ್ಲಿ ವ್ಯವಸ್ಥೆಗಳು ಭರದಿಂದ ಸಾಗಿವೆ.

ನಾಳೆ ಜಿಲ್ಲಾ ಮಟ್ಟದ ಸಿರಿಧಾನ್ಯ ನಡಿಗೆ

ಮೈಸೂರು,ಜ.7–ಜನವರಿ 9ರಂದು ಬೆಳಗ್ಗೆ 7.45 ಗಂಟೆಗೆ ಜಿಲ್ಲಾ ಮಟ್ಟದ ಸಿರಿಧಾನ್ಯ ನಡಿಗೆ ಕಾರ್ಯಕ್ರಮವನ್ನು ಆಯೋಜಿಸಿದ್ದು, ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಬೆಳಗ್ಗೆ 8 ಗಂಟೆಗೆ ಪ್ರಾರಂಭಗೊಂಡು ಡಿಸಿ ಕಚೇರಿವರೆಗೆ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 11 ಗಂಟೆಗೆ ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಪಿ.ಕಾಳಿಂಗರಾವ್ ಸಭಾ ಭವನದಲ್ಲಿ ಸಿರಿಧಾನ್ಯ ಉತ್ಪಾದಕರು, ಮಾರಾಟಗಾರರ ಸಂವಾದ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸದರಿ ಕಾರ್ಯಕ್ರಮಗಳ ಬಗ್ಗೆ ವಿವಿಧ ದೃಶ್ಯಮಾಧ್ಯಮ ಹಾಗೂ ಮುದ್ರಣ ಮಾಧ್ಯಮದವರು ಪಾಲ್ಗೊಳ್ಳುವಂತೆ ಮೈಸೂರು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಥಪೂರ್ಣವಾಗಿ ಅಂಬಿಗರ ಚೌಡಯ್ಯ ಜಯಂತಿ ಆಚರಣೆ

ಮೈಸೂರು,ಜ.7– ಜ.21 ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದ ಕಿರು ಮಂದಿರದಲ್ಲಿ 'ಅಂಬಿಗರ ಚೌಡಯ್ಯ ಜಯಂತಿ'ಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ತಿಳಿಸಿದರು.


'ಅಂಬಿಗರ ಚೌಡಯ್ಯ ಜಯಂತಿ' ಆಚರಣೆ ಸಂಬಂಧ ಮೈಸೂರು ಡಿಸಿ ಕಚೇರಿಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸಭೆ ನಡೆಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಅಂಬಿಗರ ಚೌಡಯ್ಯ ಜಯಂತಿ ಸಂಬಂಧ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಈ ಸಂಬಂಧ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡಲು ಅಗತ್ಯ ಕ್ರಮ ವಹಿಸಿ, ಜಯಂತಿ ನಡೆಯುವ ಸ್ಥಳದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶಾಮಿಯಾನ ವ್ಯವಸ್ಥೆ ಮಾಡಲು ಮಹಾನಗರಪಾಲಿಕೆಯ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಸಭೆಯಲ್ಲಿ ಸೂಚಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮಾತನಾಡಿ, ಕಾರ್ಯಕ್ರಮದಲ್ಲಿ ಕಲಾತಂಡಗಳಿಂದ ಗೀತ ಗಾಯನವನ್ನು ಏರ್ಪಡಿಸಲಾಗುವುದು.

ಆಹ್ವಾನ ಪತ್ರಿಕೆಯ ಮುದ್ರಣ ಮಾಡಿ ಸರ್ಕಾರದ ಶಿಷ್ಟಾಚಾರದಂತೆ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಈ ಸಂಬಂಧ ಸಮಿತಿಯವರು ಸಹಕರಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಕರ್ನಾಟಕ ಕಾವಲು ಪಡೆಯ ಅಧ್ಯಕ್ಷ ಮೋಹನ್‌ಕುಮಾರ್ ಗೌಡ, ಮೈಸೂರು ಚಳುವಳಿಗಾರ ಅರವಿಂದ್ ಶರ್ಮ ಸೇರಿದಂತೆ ಅಂಬಿಗರ ಚೌಡಯ್ಯ ಸಮಿತಿ ಮುಖಂಡರು ಉಪಸ್ಥಿತರಿದ್ದರು.

ಜ.10ರಂದು ವೈಕುಂಠ ಏಕಾದಶಿ


ಮೈಸೂರು, ಜ.7– ಮೈಸೂರಿನ ಉದಯಗಿರಿ ಬಡಾವಣೆಯ ರಾಜಪಥ ರಸ್ತೆಯಲ್ಲಿರುವ ಶ್ರೀ ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಜ.10ರಂದು ನಡೆಯುವ ವೈಕುಂಠ ಏಕಾದಶಿ ದಿನದಂದು ಬೆಳಗ್ಗೆ 6 ಗಂಟೆಗೆ ವೈಕುಂಠ ದ್ವಾರ ತೆರೆಯಲಾಗುತ್ತದೆ. ರಾತ್ರಿ 8.30ಕ್ಕೆ ಮಹಾಮಂಗಳಾರತಿ ನಡೆಯಲಿದೆ.



ದೇಶ – ವಿದೇಶ

ಟಿಬೆಟ್‌ನಲ್ಲಿ ಭೂಕಂಪ; 6.8ರಷ್ಟು ತೀವ್ರತೆ ದಾಖಲು; 100ಕ್ಕೂ ಅಧಿಕ ಸಾವು

ಬೀಜಿಂಗ್/ಲಾಸಾ: ನೇಪಾಳ–ಟಿಬೆಟ್ ಗಡಿಯಲ್ಲಿ ಮಂಗಳವಾರ ಬೆಳಿಗ್ಗೆ 9.05ರ ಹೊತ್ತಿಗೆ 6.8ರಷ್ಟು ತೀವ್ರತೆಯ ಭೂಕಂಪನ ಸಂಭವಿಸಿದೆ.



ಚೀನಾ ಸ್ವಾಯತ್ತ ಟಿಬೆಟ್‌ನ ಕ್ಸಿಗಾಜ್ ನಗರದ ಡಿಂಗ್ರಿ ಕೌಂಟಿ ಭೂಕಂಪದ ಕೇಂದ್ರಬಿಂದುವಾಗಿದೆ. ಭೂಕಂಪದಲ್ಲಿ 100ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದಾರೆ ಮತ್ತು 130ಕ್ಕೂ ಜನ ಗಾಯಗೊಂಡಿದ್ದಾರೆ ಎಂದು ಚೀನಾದ ಸುದ್ದಿ ಸಂಸ್ಥೆ ಕ್ಸಿನ್ಹುವಾ ತಿಳಿಸಿದೆ. ಭೂಕಂಪದ ಕೇಂದ್ರವನ್ನು 28.5 ಡಿಗ್ರಿ ಉತ್ತರ ಅಕ್ಷಾಂಶ ಮತ್ತು 87.45 ಡಿಗ್ರಿ ಪೂರ್ವ ರೇಖಾಂಶದಲ್ಲಿ ಗುರುತಿಸಲಾಗಿದೆ. ಚೀನಾ ಭೂಕಂಪ ನೆಟ್‌ವರ್ಕ್ ಸೆಂಟರ್ ನೀಡಿದ ವರದಿಯ ಪ್ರಕಾರ, 10 ಕಿಮೀ ಆಳದಲ್ಲಿ ಭೂಕಂಪ ಸಂಭವಿಸಿದೆ ಎಂದು ಸರ್ಕಾರಿ ಕ್ಸಿನ್‌ಹುವಾ ವರದಿ ಮಾಡಿದೆ. 8 ಲಕ್ಷಕ್ಕೂ ಹೆಚ್ಚು ಜನರು ವಾಸಿಸುವ ಟಿಬೆಟ್‌ನ ಶಿಗಾಟ್ಸೆ ಪ್ರದೇಶದಾದ್ಯಂತ ಕಂಪನದ ಅನುಭವಾಗಿದೆ. ಇದರೊಂದಿಗೆ ನೇಪಾಳದ ಕಠ್ಮಂಡು, ಭಾರತದ ಕೆಲ ಭಾಗ ಸೇರಿ ಭೂತಾನ್‌ನಲ್ಲೂ ಭೂಮಿ ಕಂಪಿಸಿದ ಅನುಭವಾಗಿದೆ. ಕಠ್ಮಂಡುವಿನಲ್ಲಿ ಬೆಳಿಗ್ಗೆ 6.50ರ ಹೊತ್ತಿಗೆ 7.1ರಷ್ಟು ತೀವ್ರತೆಯ ಭೂಕಂಪವಾದ ಬಗ್ಗೆ ವರದಿಯಾಗಿತ್ತು.

ನಕ್ಸಲರು ಅಡಗಿಸಿಟ್ಟಿದ್ದ 10 ಕೆ.ಜಿ ಐಇಡಿ ಪತ್ತೆ

ಸುಕ್ಮಾ: ಛತ್ತೀಸಗಢದ ಬಿಜಾಪುರದಲ್ಲಿ ನಡೆದ ಸ್ಫೋಟದಲ್ಲಿ 8 ಪೊಲೀಸ್ ಸಿಬ್ಬಂದಿ ಮತ್ತು ಚಾಲಕ ಸಾವಿಗೀಡಾದ ಒಂದು ದಿನದ ನಂತರ, ಭದ್ರತಾ ಪಡೆಗಳು ಸುಕ್ಮಾ ಜಿಲ್ಲೆಯಲ್ಲಿ ಮಾವೋವಾದಿಗಳು ಹುದುಗಿಸಿಟ್ಟಿದ್ದ 10 ಕೆಜಿ ಸುಧಾರಿತ ಸ್ಫೋಟಕ ಸಾಧನವನ್ನು(ಐಇಡಿ) ವಶಪಡಿಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ಕೇಂದ್ರೀಯ ಮೀಸಲು ಪೊಲೀಸ್ ಪಡೆ ಮತ್ತು ಜಿಲ್ಲಾ ಪೊಲೀಸರ ತಂಡವು ಕೊಂಟಾ–ಗೋಲಪಲ್ಲಿ ರಸ್ತೆಯ ಬೆಲ್ಪೊಚ್ಚ ಗ್ರಾಮದ ಬಳಿ ಸ್ಫೋಟಕ ಸಾಧನವನ್ನು ಪತ್ತೆ ಮಾಡಿದೆ. ರಸ್ತೆಯಲ್ಲಿ ಐಇಡಿ ಹುದುಗಿಸಿರುವುದನ್ನು ಪತ್ತೆಮಾಡಿದ ಭದ್ರತಾ ಸಿಬ್ಬಂದಿ ದೊಡ್ಡ ಅಪಾಯವನ್ನು ತಡೆಗಟ್ಟಿದ್ದಾರೆ ಎಂದು ತಿಳಿಸಿದ್ದಾರೆ. ಬಿಜಾಪುರ ಜಿಲ್ಲೆಯ ಅಂಬೇಲಿ ಬಳಿ ನಕ್ಸಲರು 60–70 ಕೆ.ಜಿ ತೂಕದ ಐಇಡಿ ಬಳಸಿ ಭದ್ರತಾ ಸಿಬ್ಬಂದಿಯ ವಾಹನವನ್ನು ಸ್ಫೋಟಿಸಿದ್ದರು. ಈ ವಿಧ್ವಂಸಕ ಕೃತ್ಯದಲ್ಲಿ 8 ಮಂದಿ ಭದ್ರತಾ ಸಿಬ್ಬಂದಿ, ಎಸ್‌ಯುವಿಯಲ್ಲಿ ಪ್ರಯಾಣಿಸುತ್ತಿದ್ದ ರಾಜ್ಯ ಪೊಲೀಸ್‌ನ ಜಿಲ್ಲಾ ಮೀಸಲು ಗಾರ್ಡ್ ಮತ್ತು ಬಸ್ತಾರ್ ಫೈಟರ್ಸ್ ಘಟಕಗಳ ತಲಾ ನಾಲ್ವರು ಮತ್ತು ವಾಹನದ ಚಾಲಕ ಸ್ಥಳದಲ್ಲೇ ಸಾವಿಗೀಡಾಗಿದ್ದರು.

ಅಮೆರಿಕ: ಭಗವದ್ಗೀತೆ ಮೇಲೆ ಪ್ರಮಾಣ ವಚನ ಸ್ವೀಕರಿಸಿದ ಭಾರತದ ಸುಹಾಸ್ ಸುಬ್ರಹ್ಮಣ್ಯಂ

ವಾಷಿಂಗ್ಟನ್: ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನ ಸದಸ್ಯರಾಗಿ ವರ್ಜಿನಿಯಾದಿಂದ ಆಯ್ಕೆಯಾದ ಭಾರತ ಮೂಲದ ಅಮೆರಿಕದ ಕಾಂಗ್ರೆಸ್ ಸದಸ್ಯ ಸುಹಾಸ್ ಸುಬ್ರಮಣ್ಯಂ ಅವರು ಭಗವದ್ಗೀತೆ ಮೇಲೆ ಪ್ರಮಾಣವಚನ ಸ್ವೀಕರಿಸಿದ್ದಾರೆ. ಸುಬ್ರಮಣ್ಯಂ ಅವರ ತಾಯಿ ತಮ್ಮ ಮಗ ಪ್ರಮಾಣವಚನ ಸ್ವೀಕರಿಸಿದ್ದನ್ನು ಕಣ್ತುಂಬಿಕೊಂಡರು. 'ನನ್ನ ತಾಯಿಯು ಭಾರತದಿಂದ ವಲಸೆ ಬಂದು ಡಲ್ಲೆಸ್ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಆಕೆಯ ಮಗ ಅಮೆರಿಕದ ಕಾಂಗ್ರೆಸ್‌ನಲ್ಲಿ ವರ್ಜಿನಿಯಾವನ್ನು ಪ್ರತಿನಿಧಿಸಲು ಹೋಗುತ್ತಾನೆ ಎಂದು ನೀವು ಹೇಳಿದ್ದರೆ, ಅವರು ನಿಮ್ಮನ್ನು ನಂಬುತ್ತಿರಲಿಲ್ಲ. ನಾನು ಕಾಂಗ್ರೆಸ್‌ನಲ್ಲಿ ವರ್ಜೀನಿಯಾದ 10ನೇ ಪ್ರತಿನಿಧಿಯಾಗಿದ್ದೇನೆ' ಎಂದು ಹೇಳಿದ್ದಾರೆ. ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರ ಮಾಜಿ ನೀತಿ ಸಲಹೆಗಾರರಾಗಿದ್ದ ಸುಬ್ರಹ್ಮಣ್ಯಂ 2019ರಲ್ಲಿ ಮೊದಲ ಬಾರಿಗೆ ವರ್ಜಿನಿಯಾದಿಂದ ಆಯ್ಕೆಯಾಗಿದ್ದರು. ಇನ್ನೊಂದೆಡೆ ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ಗೆ ಚುನಾಯಿತರಾದ ಮೊದಲ ಹಿಂದೂ ಅಮೇರಿಕನ್ ತುಳಸಿ ಗಬ್ಬಾರ್ಡ್ (43) ಭಗವದ್ಗೀತೆ ಮೇಲೆ ಪ್ರಮಾಣ ವಚನ ಸ್ವೀಕರಿಸಿದ್ದಾರೆ.



ನಟಿ ಹನಿ ರೋಸ್‌ಗೆ ಅಶ್ಲೀಲ ಕಾಮೆಂಟ್; 60 ವರ್ಷದ ವ್ಯಕ್ತಿ ಬಂಧನ

ಕೊಚ್ಚಿ: ಮಲಯಾಳಂ ನಟಿ ಹನಿ ರೋಸ್ ತಮ್ಮ ಫೇಸ್‌ಬುಕ್ ಪುಟದಲ್ಲಿ ಕೆಲವು ಕಿಡಿಗೇಡಿಗಳು ಅಶ್ಲೀಲ ಕಾಮೆಂಟ್‌ಗಳನ್ನು ಮಾಡುತ್ತಿದ್ದಾರೆ ಎಂದು ಆರೋಪಿಸಿ ಇತ್ತೀಚೆಗೆ ನೀಡಿದ್ದ ದೂರಿಗೆ ಸಂಬಂಧಿಸಿದಂತೆ ಕೇರಳ ಪೊಲೀಸರು ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ. ಪ್ರಕರಣ ಸಂಬಂಧ ಹನಿ ರೋಸ್ ಖುದ್ದಾಗಿ ಕೊಚ್ಚಿ ಸೆಂಟ್ರಲ್ ಪೊಲೀಸ್ ಠಾಣೆಗೆ ಭೇಟಿ ನೀಡಿ ಹೇಳಿಕೆಯನ್ನು ದಾಖಲಿಸಿದ್ದಾರೆ. ಘಟನೆ ಸಂಬಂಧ ಈಗಾಗಲೇ 30 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು, ಒಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹನಿ ರೋಸ್ ಅಧಿಕೃತ ಫೇಸ್‌ಬುಕ್ ಪುಟದಲ್ಲಿ ಅಶ್ಲೀಲ ಕಾಮೆಂಟ್‌ಗಳನ್ನು ಪೋಸ್ಟ್ ಮಾಡಿರುವವರನ್ನು ಗುರುತಿಸಲಾಗುತ್ತಿದೆ. ಕೆಲವರು ಈಗಾಗಲೇ ಕಾಮೆಂಟ್‌ಗಳನ್ನು ಡಿಲೀಟ್ ಮಾಡಿದ್ದಾರೆ. ಅಂತಹ ಪೋಸ್ಟ್‌ಗಳನ್ನು ರಿಸ್ಟೋರ್ ಮಾಡಲಾಗುತ್ತಿದೆ. ಆರೋಪಿಗಳನ್ನು ಗುರುತಿಸಿ ಕಾನೂನು ಕ್ರಮ ಜರುಗಿಸಲಾಗುವುದು. ಪ್ರಕರಣ ಸಂಬಂಧ ಪಣಂಗಾಡು ಮೂಲದ 60 ವರ್ಷದ ಶಾಜಿ ಎಂಬುವರನ್ನು ಬಂಧಿಸಲಾಗಿದೆ. ಉಳಿದ ಎಲ್ಲಾ ಆರೋಪಿಗಳ ವಿರುದ್ಧ ಐಟಿ ಕಾಯ್ದೆಯ ಸೆಕ್ಷನ್ 75 ಮತ್ತು ಸೆಕ್ಷನ್ 67 ಸೇರಿದಂತೆ ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.



ಮಟನ್ ಜೊತೆ ಗೋಮಾಂಸ ಬಳಕೆ ಆರೋಪ: ಬ್ರಿಟನ್‌ನಲ್ಲಿ ಪಾಕ್ ರೆಸ್ಟೋರೆಂಟ್ ಧ್ವಂಸ

ಶೇಫೀಲ್ಡ್: ಕುರಿ ಮಾಂಸದ ಜೊತೆಗೆ ಗೋಮಾಂಸ ಬೆರೆಸುತ್ತಿದ್ದಾರೆ ಎಂದು ಆರೋಪಿಸಿ ಭಾರತೀಯರು ಬ್ರಿಟನ್‌ನಲ್ಲಿನ ಪಾಕ್ ರೆಸ್ಟೋರೆಂಟ್ ಒಂದನ್ನು ಧ್ವಂಸಗೊಳಿಸಿದ್ದಾರೆ. ಈ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ. ಭಾರತೀಯರು ರೆಸ್ಟೋರೆಂಟ್ ಸಿಬ್ಬಂದಿ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿದ್ದಾರೆ ಎಂದು ವರದಿಯಾಗಿದೆ. ಅಲ್ಲದೆ ರೆಸ್ಟೋರೆಂಟ್‌ನ ಪೀಠೋಪಕರಣಗಳನ್ನು ಧ್ವಂಸ ಮಾಡಿದ್ದು 2 ಲಕ್ಷ ರೂ. ನಷ್ಟವಾಗಿದೆ ಎಂದು ರೆಸ್ಟೋರೆಂಟ್ ಮಾಲೀಕರು ಆರೋಪಿಸಿದ್ದಾರೆ.



ಬ್ರಿಟನ್‌ನಲ್ಲಿರುವ ಶೆಫೀಲ್ಡ್‌ನ ರೆಸ್ಟೋರೆಂಟ್ ಒಂದರಲ್ಲಿ ಬೀಫ್ ಖಾದ್ಯದ ವಿಚಾರವಾಗಿ ಗಲಾಟೆ ನಡೆದಿದೆ. ಇಲ್ಲಿನ ಅಬ್ಬಾಸಿನ್ ಡಿನ್ನರ್ ರೆಸ್ಟೋರೆಂಟ್‌ಗೆ ಊಟಕ್ಕೆಂದು ಬಂದ ಭಾರತೀಯ ಮೂಲದ ಗ್ರಾಹಕರು ಮೆನುವಿನಲ್ಲಿ ಬೀಫ್ ಖಾದ್ಯಗಳ ಹೆಸರನ್ನು ಕಂಡು ಕೋಪಗೊಂಡು ಮಾಲೀಕ ಮಹಮ್ಮದ್ ಉಲ್ಲಾ ಮೇಲೆ ಹಲ್ಲೆ ನಡೆಸಿದ್ದಾರೆ. ಬ್ರಿಟಿಷ್ ಮಾಧ್ಯಮ ವರದಿಗಳ ಪ್ರಕಾರ, ಉಗ್ರರು ರೆಸ್ಟೋರೆಂಟ್ ಕಿಟಕಿಗಳನ್ನು ಒಡೆದು, ಕುರ್ಚಿಗಳು, ಟೇಬಲ್‌ಗಳನ್ನು ಉರುಳಿಸುವ ಮೂಲಕ ಮತ್ತು ವಿವಿಧ ವಸ್ತುಗಳನ್ನು ಹಾನಿ ಮಾಡುವ ಮೂಲಕ ಧ್ವಂಸಗೊಳಿಸಿದ್ದಾರೆ.

ಮೈಸೂರು ಮಿತ್ರ
ಬುಧವಾರ 8 ಜನವರಿ 2025

ಆಟೋ ನಿಲ್ದಾಣ ಸ್ಥಳಾಂತರಿಸಬೇಡಿ

• ಮಾಂಸ ಮಾರುಕಟ್ಟೆ ಬಳಿಯೇ ಮುಂದುವರೆಸಿ • ಅಧಿಕಾರಿಗಳಿಗೆ ಶಾಸಕ ಪೊನ್ನಣ್ಣ ಸೂಚನೆ




ವಿ.ಪೇಟೆಯಲ್ಲಿ ಆಟೋ ನಿಲ್ದಾಣ ಪರಿಶೀಲಿಸಿದ ಶಾಸಕ ಪೊನ್ನಣ್ಣ ಚಾಲಕರ ಅಹವಾಲು ಆಲಿಸಿದರು. ಪೊನ್ನಣ್ಣ ಸ್ವತಃ ಆಟೋ ಓಡಿಸುವ ಮೂಲಕ ಚಾಲಕರಿಗೆ ಬೆಂಬಲ ನೀಡಿದರು.

ವಿರಾಜಪೇಟೆ, ಜ.7–ಪಟ್ಟಣದ ಕುರಿ ಮಾಂಸ ಮಾರುಕಟ್ಟೆ ಬಳಿಯ ಆಟೋ ನಿಲ್ದಾಣವನ್ನು ಸ್ಥಳಾಂತರಿಸದಂತೆ ಪುರಸಭೆ ಅಧಿಕಾರಿಗಳಿಗೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಸೂಚನೆ ನೀಡಿದರು.

ಸಮಸ್ಯೆ ಪರಿಹರಿಸಿದ ಬಳಿಕ ಶಾಸಕರು ತಾವೇ ಆಟೋ ಚಾಲನೆ ಮಾಡುವ ಮೂಲಕ ಚಾಲಕರಿಗೆ ಬೆಂಬಲ ಸೂಚಿಸಿದರು. ಕುರಿ ಮಾಂಸ ಮಾರುಕಟ್ಟೆ ಬಳಿ ಇರುವ ಆಟೋ ನಿಲ್ದಾಣವನ್ನು ಸ್ಥಳಾಂತರಿಸಬೇಕೆಂದು ಪುರಸಭೆ ಅಧಿಕಾರಿಗಳು ಸೂಚನೆ ನೀಡಿದ್ದರು. ಇದರಿಂದಾಗಿ ಆಟೋ ಬಾಡಿಗೆಯಿಂದಲೇ ಬದುಕು ಸಾಗಿಸುವ ಆಟೋ ಚಾಲಕರು ಕಂಗಾಲಾಗಿದ್ದರು. ಈ ಬಗ್ಗೆ ಮಡಿಕೇರಿ ಜಿಲ್ಲಾ ಆಟೋ ಮಾಲೀಕರು ಮತ್ತು ಚಾಲಕರ ಸಂಘದ ಅಧ್ಯಕ್ಷ ಎಂ.ಎಂ.ಶಶಿಧರ್ ನೇತೃತ್ವದಲ್ಲಿ ಚಾಲಕರು, ಶಾಸಕ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಅವರ ಬಳಿ ಅಳಲು ತೋಡಿಕೊಂಡು ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಿದ್ದರು.

ಮನವಿಗೆ ತಕ್ಷಣ ಸ್ಪಂದಿಸಿದ ಶಾಸಕರು ಸ್ಥಳಕ್ಕೆ ಭೇಟಿ ನೀಡಿ, ಆಟೋ ನಿಲ್ದಾಣ ಪರಿಶೀಲನೆ ನಡೆಸಿ ಚಾಲಕರ ಅಹವಾಲು ಆಲಿಸಿದರು. ಹಲವಾರು ವರ್ಷಗಳಿಂದ ಇಲ್ಲಿಯೇ ಆಟೋ ನಿಲ್ದಾಣವಿದೆ. ಇದೀಗ ಸ್ಥಳಾಂತರ ಮಾಡಿದಲ್ಲಿ ಬಾಡಿಗೆ ಇಲ್ಲದೆ ನಮ್ಮ ಕುಟುಂಬಗಳು ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ಆಟೋ ಚಾಲಕರು ಶಾಸಕರ ಗಮನ ಸೆಳೆದರು.

ಸ್ಥಳೀಯ ವ್ಯಾಪಾರಿಗಳು ಹಾಗೂ ಜನಸಾಮಾನ್ಯರಿಗೆ ತೊಂದರೆಯಾಗದಂತೆ ಈಗಿರುವ ಸ್ಥಳದಲ್ಲೇ ಆಟೋ ನಿಲ್ದಾಣವನ್ನು ಮುಂದುವರೆಸಲು ನಗರ ಠಾಣೆ ಸಬ್ ಇನ್ಸ್‌ಪೆಕ್ಟರ್ ಪ್ರಮೋದ್ ಹಾಗೂ ಪುರಸಭೆ ಅಧಿಕಾರಿಗಳಿಗೆ ಶಾಸಕ ಪೊನ್ನಣ್ಣ ಸೂಚನೆ ನೀಡಿದರು. ಆಟೋ ಚಾಲಕರು ಸಾರ್ವಜನಿಕರ ಸೇವೆ ಮಾಡುವ ಮೂಲಕ ಜೀವನ ನಡೆಸುತ್ತಿದ್ದಾರೆ ಎಂದರು.

ಈ ಸಂದರ್ಭ ವಿರಾಜಪೇಟೆ ಪುರಸಭೆ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಕಾಳಪ್ಪ, ಸದಸ್ಯರಾದ ಮೊಹಮ್ಮದ್ ರಾಫಿ, ರಾಜೇಶ್, ಜಲೀಲ್, ಮತೀನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಕಾಂಗ್ರೆಸ್ ಮುಖಂಡರು, ಸಾರ್ವಜನಿಕರು ಹಾಜರಿದ್ದರು.

ಫೆ.2, ಮಾನವ ಬಂಧುತ್ವ ವೇದಿಕೆ ಸಮಾವೇಶ



ಮಡಿಕೇರಿ ಸುದರ್ಶನ ಅಥಿತಿ ಗೃಹದಲ್ಲಿ ಮಾನವ ಬಂಧುತ್ವ ವೇದಿಕೆ ಸಮಾವೇಶದ ಪೂರ್ವಭಾವಿ ಸಭೆ ನಡೆಯಿತು.

ಮಡಿಕೇರಿ, ಜ.7–ಬುದ್ಧ, ಬಸವ, ಅಂಬೇಡ್ಕರ್ ಅವರ ಆಶಯ ಮತ್ತು ಚಿಂತನೆಗಳನ್ನು ಒಳಗೊಂಡ ಸಚಿವ ಸತೀಶ್ ಜಾರಕಿಹೊಳಿ ಅವರ ಸಾರಥ್ಯದಲ್ಲಿ ಪ್ರಾರಂಭವಾಗಿರುವ ಮಾನವ ಬಂಧುತ್ವ ವೇದಿಕೆ ದಶಮಾನೋತ್ಸವ ಸಂಭ್ರಮದಲ್ಲಿದ್ದು, ಫೆ.2ರಂದು ದಾವಣಗೆರೆಯಲ್ಲಿ ನಡೆಯಲಿರುವ ಬೃಹತ್ ಸಮಾವೇಶಕ್ಕೆ ಕೊಡಗಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ವೇದಿಕೆ ಜಿಲ್ಲಾ ಸಂಚಾಲಕ ಜೆ.ಎಲ್.ಜನಾರ್ಧನ್ ಮನವಿ ಮಾಡಿದರು.

ನಗರದ ಸುದರ್ಶನ ಅತಿಥಿಗೃಹದಲ್ಲಿ ಕಾರ್ಯಕ್ರಮದ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ವಿವಿಧ ವಿಷಯಗಳ ಕುರಿತು ಚರ್ಚಿಸಿ ಮಾತನಾಡಿದ ಅವರು, ಎಲ್ಲಾ ಸದಸ್ಯರ ಅಭಿಪ್ರಾಯ ಪಡೆದು ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಂದ ತಲಾ ಎರಡು ಬಸ್‌ಗಳಂತೆ ಚಳುವಳಿಗಾರರು, ಸಂವಿಧಾನವನ್ನು ಗೌರವಿಸುವ ಮತ್ತು ಉಳಿಸುವ ಮಹತ್ವಕಾಂಕ್ಷೆ ಹೊಂದಿರುವ ಬುದ್ಧ, ಬಸವ, ಅಂಬೇಡ್ಕರ್ ಅನುಯಾಯಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದರು.

ಸಭೆಯಲ್ಲಿ ಮಹಿಳಾ ಸಂಚಾಲಕರು ಸಹ ಭಾಗವಹಿಸಿ, ಗ್ರಾಮ ಸಮಿತಿಗಳ ಮುಖಾಂತರ ಪ್ರತಿ ಹಳ್ಳಿಗಳಿಂದಲೂ ಕನಿಷ್ಠ 5 ಜನರನ್ನು ಕರೆತರುವ ಜವಾಬ್ದಾರಿ ತೆಗೆದುಕೊಂಡರು. ಮುಂದಿನ ದಿನಗಳಲ್ಲಿ ಮಾನವ ಬಂಧುತ್ವ ವೇದಿಕೆಗೆ ಕೊಡಗು ಜಿಲ್ಲೆಯಲ್ಲಿ ಅತಿ ಹೆಚ್ಚು ಸದಸ್ಯರನ್ನು ನೋಂದಾವಣೆ ಮಾಡುವ ಮೂಲಕ ವೇದಿಕೆಯನ್ನು ಪ್ರಬಲಗೊಳಿಸಿ, ಜಿಲ್ಲೆಯ ಜನರಿಗೆ ವೈಜ್ಞಾನಿಕ ಬುದ್ಧ, ಬಸವ, ಅಂಬೇಡ್ಕರ್ ಅವರ ಆಶಯಗಳನ್ನು ಪಸರಿಸುವ ಕೆಲಸಕ್ಕೆ ಕೈಜೋಡಿಸುವಂತೆ ತೀರ್ಮಾನಿಸಲಾಯಿತು.

ಸಭೆಯಲ್ಲಿ ರಾಜ್ಯ ಮಹಿಳಾ ಒಕ್ಕೂಟದ ಸಂಚಾಲಕಿ ಡಾ.ಲೀಲಾ ಸಂಪಿಗೆ, ಮಂಗಳೂರು ವಿಭಾಗೀಯ ಸಂಚಾಲಕ ಕೆ.ಎಸ್. ಸತೀಶ್ ಕುಮಾರ್, ರಾಜ್ಯ ಸಮಿತಿ ಸದಸ್ಯ ರಮನಾಥ್, ಜಿಲ್ಲಾ ಮಹಿಳಾ ಸಮಿತಿಯ ಸಂಚಾಲಕಿ ಡಾ.ಹೆಚ್.ಎಂ.ಕಾವೇರಿ, ಸದಸ್ಯರಾದ ನೆರವಂಡ ಉಮೇಶ್, ಸಾಮಾಜಿಕ ಹೋರಾಟಗಾರ ಟಿ.ಪಿ. ರಮೇಶ್, ನಿವೃತ್ತ ಉಪನ್ಯಾಸಕಿ ರೇವತಿ, ಮಡಿಕೇರಿ ಮಹಿಳಾ ಸಂಚಾಲಕಿ ಕೆ.ಜಿ. ರಮ್ಯಾ, ಸೋಮವಾರಪೇಟೆ ತಾಲೂಕು ಸಂಚಾಲಕ ಎಂ.ಎಸ್.ವೀರೇಂದ್ರ, ವಿರಾಜಪೇಟೆ ಮಹಿಳಾ ಒಕ್ಕೂಟದ ಸಂಚಾಲಕಿ ವಿ.ಪಿ.ಲಿಖಿತಾ, ರಾಜ್ಯ ಸಮಿತಿ ಸದಸ್ಯ ಕರುಣಾಕರ, ಸದಸ್ಯರಾದ ಬಸೀರ್, ರಾಜು, ಎಂ.ಪಿ.ವಿಶ್ವ, ಮಂಜುನಾಥ್ ಮಾದ್ರೆ, ಪೃಥ್ವಿರಾಜ್, ವಿರಾಜಪೇಟೆ, ಮಡಿಕೇರಿ, ಸೋಮವಾರಪೇಟೆ ತಾಲೂಕು ಸಂಚಾರಕರು ಹಾಜರಿದ್ದರು.

ಬಾವಲಿ ಗ್ರಾಮದಲ್ಲಿ ತೋಟದೊಳಗೆ ವ್ಯಾನ್ ಬಿದ್ದು ಕಾರ್ಮಿಕರಿಗೆ ಗಾಯ



ನಾಪೋಕ್ಲು–ವಿರಾಜಪೇಟೆ ಮುಖ್ಯರಸ್ತೆ ಬಾವಲಿ ತೋಟದೊಳಗೆ ಬಿದ್ದಿರುವ ವ್ಯಾನ್.

ಮಡಿಕೇರಿ, ಜ.7–ಚಾಲಕನ ನಿಯಂತ್ರಣ ಕಳೆದುಕೊಂಡು ವ್ಯಾನ್ ರಸ್ತೆಬದಿ ತೋಟದೊಳಗೆ ಬಿದ್ದು ಕಾರ್ಮಿಕರು ಗಾಯಗೊಂಡು ಆಸ್ಪತ್ರೆಗೆ ದಾಖಲಾದ ಘಟನೆ ನಾಪೋಕ್ಲು–ವಿರಾಜಪೇಟೆ ಮುಖ್ಯರಸ್ತೆ ಬಾವಲಿ ಗ್ರಾಮದಲ್ಲಿ ನಡೆದಿದೆ.

ಬಾವಲಿ ಗ್ರಾಮದ ನಿವಾಸಿ ಕೋಚಮಂಡ ವಿಜು ಅವರು ನಾಪೋಕ್ಲು ಕಡೆಯಿಂದ ತಮ್ಮ ವ್ಯಾನ್‌ನಲ್ಲಿ ಕಾಫಿ ಕೊಯ್ಲು ಕೆಲಸಕ್ಕೆ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದರು. ಈ ಸಂದರ್ಭ ವಿರಾಜಪೇಟೆ ಮುಖ್ಯರಸ್ತೆಯಿಂದ ಬಾವಲಿ–ಪಾರಾಣೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಬಳಿ ನಿಯಂತ್ರಣ ತಪ್ಪಿ ವ್ಯಾನ್ ತೋಟಕ್ಕೆ ಬಿದ್ದಿದೆ.

ಅಪಘಾತದಿಂದ ಕಾರು ಜಖಂಗೊಂಡಿದ್ದು, ಕಾರಿನಲ್ಲಿದ್ದ ಕಾರ್ಮಿಕರು, ಮಕ್ಕಳು ಸೇರಿದಂತೆ ಹಲವರಿಗೆ ಕೈ, ಕಾಲು, ತಲೆ ಭಾಗಕ್ಕೆ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗಿದ್ದು, ಕೆಲವರನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕದ ಪ್ರತಿನಿಧಿಯಾಗಿ ಶ್ವೇತನ್ ಜಿ.ರೈ ಭಾಗಿ

ಮಡಿಕೇರಿ, ಜ.7–ದೆಹಲಿಯಲ್ಲಿ ಜ.12ರಂದು ನಡೆಯಲ್ಲಿರುವ ರಾಷ್ಟ್ರ ಮಟ್ಟದ ಯುವ ಜನೋತ್ಸವದಲ್ಲಿ ಕೊಡಗಿನ ಶ್ವೇತನ್ ಜಿ.ರೈ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ.



ಶ್ವೇತನ್ ಜಿ.ರೈ

ದಾವಣಗೆರೆಯಲ್ಲಿ ನಡೆದ ರಾಜ್ಯ ಮಟ್ಟದ ವಿಜ್ಞಾನ ಮೇಳದಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದು, ದೆಹಲಿಯಲ್ಲಿ ನಡೆಯುವ ರಾಷ್ಟ್ರ ಮಟ್ಟದ ಯುವ ಜನೋತ್ಸವದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ ಮಡಿಕೇರಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಮತ್ತು ತಾಲೂಕು ಯುವ ಒಕ್ಕೂಟ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಆಶ್ರಯದಲ್ಲಿ ನಡೆದ ಜಿಲ್ಲಾ ಮಟ್ಟದ ಯುವ ಜನೋತ್ಸವದ ವೈಯಕ್ತಿಕ ವಿಜ್ಞಾನ ಮೇಳದಲ್ಲಿ ಶ್ವೇತನ್ ಜಿ.ರೈ ಪ್ರಥಮ ಸ್ಥಾನ ಗಳಿಸಿದ್ದರು ಎಂದು ಕೊಡಗು ಜಿಲ್ಲಾ ಯುವ ಒಕ್ಕೂಟದ ಅಧ್ಯಕ್ಷ ಪಿ.ಪಿ. ಸುಕುಮಾರ್ ತಿಳಿಸಿದ್ದಾರೆ.

ಕಳತ್ಮಾಡ್ ಲಯನ್ಸ್ ಪ್ರೌಢಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿಯಾಗಿರುವ ಶ್ವೇತನ್ ಜಿ.ರೈ ಗೋಣಿಕೊಪ್ಪ ವಿಜಯನಗರದ ನಿವಾಸಿ ಬಿ.ಟಿ.ಗಣೇಶ್ ರೈ ಹಾಗೂ ಗೀತಾ ರೈ ದಂಪತಿ ಪುತ್ರ.

ಮಾಯಮುಡಿಯಲ್ಲಿ ಹುಲಿ ದಾಳಿಗೆ ಹಸು ಬಲಿ

ಪೊನ್ನಂಪೇಟೆ:ಪೊನ್ನಂಪೇಟೆಯ ಮಾಯಮುಡಿ ಗ್ರಾಮದಲ್ಲಿ ಸೋಮವಾರ ರಾತ್ರಿ ಹುಲಿ ದಾಳಿಗೆ ಹಸು ಬಲಿಯಾಗಿದೆ.


ಕೊಜಂಡ ನಂಜಪ್ಪ ಅವರಿಗೆ ಸೇರಿದ ಹಸುವನ್ನು ಹುಲಿ ಕೊಂದುಹಾಕಿದೆ. ಸ್ಥಳಕ್ಕೆ ತಿತಿಮತಿ ಅರಣ್ಯ ವಲಯ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಇದೇ ವೇಳೆ ಮಾಯಮುಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಆಪಟ್ಟೀರ ಟಾಟು ಮೊಣ್ಣಪ್ಪ ಮಾತನಾಡಿ, ಹುಲಿ ಮಾಯಮುಡಿ ವ್ಯಾಪ್ತಿಯಲ್ಲೇ ಇರುವುದರಿಂದ ಗ್ರಾಮಸ್ಥರು, ವಿದ್ಯಾರ್ಥಿಗಳು ಹಾಗೂ ಕಾರ್ಮಿಕರಿಗೆ ಭಯದ ವಾತಾವರಣ ಸೃಷ್ಟಿಯಾಗಿದೆ. ಆದ್ದರಿಂದ ಬೇಗನೇ ಹುಲಿ ಸೆರೆ ಹಿಡಿಯುವಂತೆ ಆಗ್ರಹಿಸಿದರು.



ಮಾಯಮುಡಿ ಗ್ರಾಮದಲ್ಲಿ ಹುಲಿ ದಾಳಿಗೆ ಹಸು ಬಲಿಯಾಗಿರುವುದು.

ಜ.14ರವರೆಗೆ ನಿಷೇಧಾಜ್ಞೆ ಜಾರಿ



ಕಟ್ಟೆಮಾಡು ಶ್ರೀ ಮಹಾಮೃತ್ಯುಂಜಯ ದೇವಸ್ಥಾನ.

ಮಡಿಕೇರಿ, ಜ.7–ಕಟ್ಟೆಮಾಡು ಶ್ರೀ ಮಹಾಮೃತ್ಯುಂಜಯ ದೇವಸ್ಥಾನ ವಾರ್ಷಿಕೋತ್ಸವ ಸಂದರ್ಭ ವಸ್ತ್ರಸಂಹಿತೆ ವಿವಾದ ಹಿನ್ನೆಲೆಯಲ್ಲಿ ದೇವಸ್ಥಾನ ವ್ಯಾಪ್ತಿ ಜಾರಿಗೊಳಿಸಿದ್ದ ನಿಷೇಧಾಜ್ಞೆಯನ್ನು ಜ.14ರ ಬೆಳಗ್ಗೆ 10 ಗಂಟೆ ವರೆಗೆ ವಿಸ್ತರಿಸಿ ಉಪವಿಭಾಗಾಧಿಕಾರಿ ವಿನಾಯಕ್ ನರ್ವಡೆ ಆದೇಶಿಸಿದ್ದಾರೆ.

ಸದರಿ ಸ್ಥಳದಲ್ಲಿ ಪ್ರಸ್ತುತ ಉಂಟಾಗಿರುವ ಬೆಳವಣಿಗೆಗಳ ಸಂಬಂಧ ಆರಕ್ಷಕ ಅಧೀಕ್ಷಕರ ಕೋರಿಕೆ ಪರಿಗಣಿಸಿ, ಜ.7ರ ಬೆಳಗ್ಗೆ 6 ಗಂಟೆಯಿಂದ ಜ.14ರ ಬೆಳಗ್ಗೆ 10 ಗಂಟೆವರೆಗೆ ದೇವಸ್ಥಾನದ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ವಿಧಿಸಲಾಗಿದೆ.

ಈ ಅವಧಿಯಲ್ಲಿ 5ಕ್ಕಿಂತ ಹೆಚ್ಚು ಜನ ಗುಂಪು ಸೇರುವುದು, ಪ್ರತಿಭಟನೆ, ಮೆರವಣಿಗೆ, ರ‍್ಯಾಲಿ, ಜಾತ್ರೆ, ಪ್ರಚೋದನಾತ್ಮಕ ಘೋಷಣೆ ಕೂಗದಂತೆ ಆದೇಶಿಸಲಾಗಿದೆ.

ಬಿಳಿಗಿರಿರಂಗನಬೆಟ್ಟದಲ್ಲಿ ಸಂಪುಟ ಸಭೆಗೆ ಮನವಿ



ಬಿಳಿಗಿರಿರಂಗನಬೆಟ್ಟದ ದೇಗುಲ ವ್ಯವಸ್ಥಾಪನಾ ಸಮಿತಿಗೆ ಆಯ್ಕೆಯಾದ ಸದಸ್ಯರನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಅಭಿನಂದಿಸಿದರು.

ಯಳಂದೂರು, ಜ.7–ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಮುಂದಿನ ದಿನಗಳಲ್ಲಿ ರಾಜ್ಯ ಸಚಿವ ಸಂಪುಟ ಸಭೆ ಹಮ್ಮಿಕೊಳ್ಳಲು ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗುವುದು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ಬಿಳಿಗಿರಿರಂಗನಾಥಸ್ವಾಮಿ ದೇವಸ್ಥಾನ ವ್ಯವಸ್ಥಾಪನಾ ಸಮಿತಿಗೆ ಆಯ್ಕೆಯಾದ ಸದಸ್ಯರಿಗೆ ಅಭಿನಂದಿಸಿ ಮಾತನಾಡಿದ ಅವರು, ಹಿಂದೆ ದಿ.ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಇಲ್ಲಿ ಸಚಿವ ಸಂಪುಟ ಸಭೆ ನಡೆದಿತ್ತು. ಈಗ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ಸಂಪುಟ ಸಭೆ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಇಲ್ಲೂ ಸಚಿವ ಸಂಪುಟ ಸಭೆ ನಡೆಸಲು ಮನವಿ ಮಾಡಲಾಗುವುದು. ದೇಗುಲದ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ರೂಪಿಸಲು, ಇಲ್ಲಿ ಸುಸಜ್ಜಿತ ದಾಸೋಹ ಭವನ ನಿರ್ಮಿಸಲು ಕ್ರಮ ವಹಿಸಲಾಗುವುದು. ಅಲ್ಲದೆ, ಬೆಟ್ಟದ ಸಮಗ್ರ ಅಭಿವೃದ್ಧಿಗೆ ನಮ್ಮ ತಂದೆ ಬಿ.ರಾಚಯ್ಯ ಅವರ ಕಾಲದಲ್ಲಿ ನೀಡಿದ್ದ ಜಮೀನುಗಳ ಬಗ್ಗೆ ಅರಣ್ಯ ಹಾಗೂ ಕಂದಾಯ ಇಲಾಖೆಯಲ್ಲಿರುವ ಗೊಂದಲಗಳ ನಿವಾರಣೆಗೆ ಇಲ್ಲಿ ಸಂಪುಟ ಸಭೆ ನಡೆದರೆ ಪರಿಹಾರ ಸಿಗಲಿದೆ ಎಂದರು.

ಈ ಸಂದರ್ಭದಲ್ಲಿ ವ್ಯವಸ್ಥಾಪನಾ ಸಮಿತಿಗೆ ನೇಮಕವಾದ ಗುಂಬಳ್ಳಿ ರಾಜಣ್ಣ, ಜೆ.ಶ್ರೀನಿವಾಸ್, ಕೇತಮ್ಮ, ಸ್ಫೂರ್ತಿ, ವೆಂಕಟರಾಮು, ಸಿದ್ದರಾಜು, ಎಂ.ಸುರೇಶ್, ವಿ.ನಾರಾಯಣಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಉಪಾಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್, ಚೇತನ್ ದೊರೆರಾಜ್, ರಾಘವೇಂದ್ರ, ನಂಜುಂಡಸ್ವಾಮಿ, ಶಿವು, ವಿಶ್ವ, ವೆಂಕಟೇಶ್ ಅನೇಕರು ಇದ್ದರು.

ಫೆ.15, ಮಹದೇಶ್ವರಬೆಟ್ಟದಲ್ಲಿ ಸಚಿವ ಸಂಪುಟ ಸಭೆ

ಪೂರ್ವಭಾವಿ ಸಭೆ ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾಹಿತಿ

ಮಹದೇಶ್ವರಬೆಟ್ಟಕ್ಕೆ ಭೇಟಿ, ಪರಿಶೀಲನೆ

ಮಹದೇಶ್ವರಬೆಟ್ಟಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಂಗಳವಾರ ಭೇಟಿ ನೀಡಿ, ಸಚಿವ ಸಂಪುಟ ಸಭೆ ಸಂಬಂಧ ಸ್ಥಳ ಹಾಗೂ ಪೂರ್ವ ಸಿದ್ಧತೆ ಪರಿಶೀಲಿಸಿದರು.

ಬೆಟ್ಟದ ದೀಪದಗಿರಿ ಒಡ್ಡುವಿನಲ್ಲಿರುವ ಮಹದೇಶ್ವರರ ಬೃಹತ್ ಪ್ರತಿಮೆ ಇರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಅಧಿಕಾರಿಗಳೊಂದಿಗೆ ಚರ್ಚಿಸಿ ವಿವರ ಪಡೆದರು. ಬಳಿಕ ದೇವಾಲಯಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದರು.

ಇದೇ ವೇಳೆ ಶಾಸಕ ಎಂ.ಆರ್.ಮಂಜುನಾಥ್, ಆಯುಕ್ತ ಡಿ.ಎಸ್.ರಮೇಶ್, ಜಿಲ್ಲಾಧಿಕಾರಿ ಶಿಲ್ಪನಾಗ್, ಡಿಐಜಿಪಿ ಡಾ.ಬೋರಲಿಂಗಯ್ಯ, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್, ಮಲೆಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ.ರಘು ಇನ್ನಿತರರು ಇದ್ದರು.



ಮಹದೇಶ್ವರಬೆಟ್ಟಕ್ಕೆ ಸಚಿವ ಕೆ.ವೆಂಕಟೇಶ್ ಭೇಟಿ ನೀಡಿ, ಸಚಿವ ಸಂಪುಟ ಸಭೆ ಸಂಬಂಧ ಸ್ಥಳ ಹಾಗೂ ಪೂರ್ವ ಸಿದ್ಧತೆ ಪರಿಶೀಲಿಸಿದರು.

ಚಾಮರಾಜನಗರ, ಜ.7–ಮಲೆಮಹದೇಶ್ವರ ಬೆಟ್ಟದಲ್ಲಿ ಫೆ.15ರಂದು ರಾಜ್ಯ ಸಚಿವ ಸಂಪುಟ ಸಭೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಕೆಡಿಪಿ ಸಭಾಂಗಣದಲ್ಲಿ ಮಂಗಳವಾರ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಸಚಿವ ಸಂಪುಟ ಸಂಬಂಧ ಪೂರ್ವಭಾವಿ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ ಅವರು, ಮೊದಲು ಫೆಬ್ರವರಿ 13ರಂದು ಮಹದೇಶ್ವರಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಲು ದಿನಾಂಕ ನಿಗದಿ ಮಾಡಲಾಗಿತ್ತು. ಆದರೆ 13 ಮತ್ತು 14ರಂದು ಬೆಂಗಳೂರಿನಲ್ಲಿ ಗ್ಲೋಬಲ್ ಇನ್ವೆಸ್ಟರ್ ಮೀಟ್ ಇರುವುದರಿಂದ ಫೆ.15ಕ್ಕೆ ಸಚಿವ ಸಂಪುಟ ಸಭೆ ನಿಗದಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸಚಿವ ಸಂಪುಟ ನಡೆಯುತ್ತಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಲಾಗಿದೆ. ಆಯಾ ಇಲಾಖಾವಾರು ಅಧಿಕಾರಿಗಳು ಅಭಿವೃದ್ಧಿ ಕಾರ್ಯ ಸಂಬಂಧ ಮಾಹಿತಿ ನೀಡಿದ್ದಾರೆ. ಈ ಕುರಿತು ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಿ ಪರಿಹಾರ ಕಲ್ಪಿಸಬೇಕಿದೆ. ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅಭಿವೃದ್ಧಿ ಸಂಬಂಧ ಏನೇನೂ ಸಾಧ್ಯವೋ ಅವೆಲ್ಲವನ್ನೂ ಮಾಡಲಿದ್ದೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದರು.

ಇದೇ ವೇಳೆ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಜಿಲ್ಲಾಧ್ಯಕ್ಷ ಹೆಚ್.ವಿ.ಚಂದ್ರು, ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಅಧ್ಯಕ್ಷ ಎಸ್.ಸುರೇಶ್ ಇನ್ನಿತರರು ಇದ್ದರು.

ಇದಕ್ಕೂ ಮೊದಲು ಸಚಿವರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರೈತ ಮುಖಂಡರ ಅಹವಾಲುಗಳನ್ನು ಆಲಿಸಿ ಚರ್ಚೆ ನಡೆಸಿದರು.

ಬಿಳಿಗಿರಿರಂಗನಾಥಸ್ವಾಮಿ ರಥೋತ್ಸವಕ್ಕೆ ಸಿದ್ಧತೆ ಕೈಗೊಳ್ಳಿ

ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಸೂಚನೆ

ಯಳಂದೂರು: ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಜ.15ರಂದು ನಡೆಯಲಿರುವ ಸಂಕ್ರಾಂತಿ ರಥೋತ್ಸವ ಹಾಗೂ ಚಿಕ್ಕಜಾತ್ರೆಗೆ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಶಾಸಕ ಎ.ಆರ್.ಕೃಷ್ಣಮೂರ್ತಿ ಅಧಿಕಾರಿಗಳಿಗೆ ಸೂಚಿಸಿದರು.

ಬಿಳಿಗಿರಿರಂಗನಬೆಟ್ಟದ ಗಣ್ಯರ ಪ್ರವಾಸಿ ಮಂದಿರದಲ್ಲಿ ನಡೆದ ಜಾತ್ರೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಂಕ್ರಾಂತಿ ಹಬ್ಬದ ಮರುದಿನ ಬೆಟ್ಟದಲ್ಲಿ ಚಿಕ್ಕ ತೇರು ನಡೆಯುತ್ತದೆ. ಈ ಬಾರಿ ಜ.15ರಂದು ಬೆಳಗ್ಗೆ 11.55 ರಿಂದ ಮಧ್ಯಾಹ್ನ 12.06ರೊಳಗೆ ಸಲ್ಲುವ ಮೀನಾ ಲಗ್ನದಲ್ಲಿ ರಥಾರೋಹಣ ಆರಂಭವಾಗಲಿದೆ ರಥೋತ್ಸವಕ್ಕೆ ಹೆಚ್ಚಿನ ಭಕ್ತರು ಆಗಮಿಸುವ ನಿರೀಕ್ಷೆ ಇದ್ದು, ಭಕ್ತರಿಗೆ ತೊಂದರೆಯಾಗದಂತೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಕುಡಿಯುವ ನೀರು, ನಿರಂತರ ವಿದ್ಯುತ್, ಶೌಚಾಲಯ ಇನ್ನಿತರ ಮೂಲಸೌಕರ್ಯ ಒದಗಿಸಬೇಕು. ಕೆಎಸ್‌ಆರ್‌ಟಿಸಿ ವತಿಯಿಂದ ಹೆಚ್ಚು ಬಸ್‌ಗಳನ್ನು ನಿಯೋಜಿಸಬೇಕು. ಭಕ್ತರು ಗುಂಬಳ್ಳಿ ಚೆಕ್‌ಪೋಸ್ಟ್ ಬಳಿ ವಾಹನ ನಿಲ್ಲಿಸಿ, ಅಲ್ಲಿಂದ ದೇಗುಲಕ್ಕೆ ತೆರಳಲು ವಿಶೇಷ ಬಸ್‌ಗಳಲ್ಲಿ ಹೋಗಬೇಕು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾಹುಡೇದ, ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ಜಿಲ್ಲಾಧ್ಯಕ್ಷ ಹೆಚ್.ವಿ. ಚಂದ್ರು, ಉಪಾಧ್ಯಕ್ಷ ಕಿನಕಹಳ್ಳಿ ಪ್ರಭುಪ್ರಸಾದ್, ತಹಸೀಲ್ದಾರ್ ಜಯಪ್ರಕಾಶ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್.ಶಶಿಧರ್, ಡಿವೈಎಸ್‌ಪಿ ಎಂ. ಧರ್ಮೇಂದ್ರ, ಸಿಪಿಐ ಕೆ.ಶ್ರೀಕಾಂತ್, ವಲಯ ಅರಣ್ಯ ಅಧಿಕಾರಿ ನಾಗೇಂದ್ರ ನಾಯಕ, ಬಿಳಿಗಿರಿರಂಗನ ಬೆಟ್ಟದ ಕಾರ್ಯನಿರ್ವಾಹಕಾಧಿಕಾರಿ ಮೋಹನ್ ಕುಮಾರ್, ಪಾರುಪತ್ತೇದಾರರಾದ ರಾಜು, ಶೇಷಾದ್ರಿ, ಅರ್ಚಕರಾದ ರವಿಕುಮಾರ್, ಎಸ್.ನಾಗೇಂದ್ರ ಭಟ್, ದೇವಾಲಯ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ರಾಜಣ್ಣ, ಜೆ.ಶ್ರೀನಿವಾಸ್, ಕೇತಮ್ಮ, ಸ್ಫೂರ್ತಿ, ವೆಂಕಟರಾಮು, ಸಿದ್ದರಾಜು, ಎಂ.ಸುರೇಶ್, ವಿ.ನಾರಾಯಣಸ್ವಾಮಿ, ಪಿಎಸ್‌ಐ ಹನುಮಂತ ಉಪ್ಪಾರ್, ವೆಂಕಟೇಶ್, ಗ್ರಾಪಂ ಅಧ್ಯಕ್ಷ ಸಿ.ಡಿ.ಮಹದೇವ, ಸದಸ್ಯರಾದ ಪ್ರತೀಪ್ ಕುಮಾರ್, ಸಾಕಮ್ಮ ಇತರರು ಉಪಸ್ಥಿತರಿದ್ದರು.



ಬಿಳಿಗಿರಿರಂಗನಬೆಟ್ಟದಲ್ಲಿ ನಡೆದ ರಥೋತ್ಸವ ಪೂರ್ವಭಾವಿ ಸಭೆಯಲ್ಲಿ ಶಾಸಕ ಕೃಷ್ಣಮೂರ್ತಿ ಮಾತನಾಡಿದರು.

ದೇಶ ಮುಂದುವರಿಕೆಯಲ್ಲಿ ಶಿಕ್ಷಣದ ಪಾತ್ರ ಅಗಾಧ



ಕೊಳ್ಳೇಗಾಲದಲ್ಲಿ ನಡೆದ ಮಾನಸ ಶಿಕ್ಷಣ ಸಂಸ್ಥೆ ಸಮಾರೋಪದಲ್ಲಿ ಸಾಧಕ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಕೊಳ್ಳೇಗಾಲ: ದೇಶ ಮುಂದುವರೆಯಲು ಶಿಕ್ಷಣ ಕ್ಷೇತ್ರ ಅತೀ ಮುಖ್ಯವಾಗಿದ್ದು, ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಹೇಳಿದರು.

ಪಟ್ಟಣದ ಮಾನಸ ಸಂಸ್ಥೆಯ ಮಾನಸ ಸಮಾರೋಪದಲ್ಲಿ ಮಾತನಾಡಿದ ಅವರು, ಸರ್ಕಾರ ಉಚಿತ ಸೌಲಭ್ಯಗಳ ಬದಲು ಉಚಿತ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯ ನೀಡಿದ್ದಲ್ಲಿ ದೇಶ ಖಂಡಿತ ಅಭಿವೃದ್ಧಿಯತ್ತ ಸಾಗಲಿದೆ. ನಮ್ಮ ದೇಶದ ಮಕ್ಕಳ ಬುದ್ಧಿವಂತಿಕೆ, ಸಂಸ್ಕೃತಿಯನ್ನು ನಾನು ಸುತ್ತಿದ 25 ದೇಶಗಳಲ್ಲೂ ಕಂಡಿಲ್ಲ. ಪ್ರಸ್ತುತ 30 ವರ್ಷಗಳಲ್ಲಿ ತಂತ್ರಜ್ಞಾನ ಎಷ್ಟು ಬೆಳೆದಿದೆ ಎಂದರೆ ಪ್ರಪಂಚದ ಮೂಲೆ ಮೂಲೆಯಲ್ಲಿ, ಯಾರ ಮನೆಯ ಸಮಸ್ಯೆಯನ್ನು ಬೇಕಾದರೂ ಕಂಡುಹಿಡಿಯಬಹುದು. ಚೀನಾ ಕೌಶಲದಿಂದ ಜಗತ್ತಿಗೆ ಮುಂದುವರಿದ ದೇಶವಾಗಿದೆ ಎಂದರು.

ನೋಬೆಲ್ ಪ್ರಶಸ್ತಿ ಪಡೆದಿರುವ ಸಾಧಕರು ಕೂಡ ಬಹಳ ಕಡುಬಡತನದಿಂದ ಬಂದವರಾಗಿದ್ದಾರೆ. ವಿದ್ಯೆ ಬುದ್ಧಿವಂತರ ಸ್ವತ್ತು. ಅಂತಹ ವಿದ್ಯೆ, ಸಂಸ್ಕಾರವನ್ನು ಮಾನಸ ಶಿಕ್ಷಣ ಸಂಸ್ಥೆ ನೀಡುತ್ತಿದೆ. ಈ ನಿಟ್ಟಿನಲ್ಲಿ ಮಾನಸ ಸಂಸ್ಥೆ ವಿದ್ಯಾರ್ಥಿಗಳನ್ನು ಬುದ್ಧಿವಂತರನ್ನಾಗಿಸಲು ಪಣತೊಟ್ಟಿರುವುದು ಹೆಮ್ಮೆಯ ಸಂಗತಿ ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಮಾನಸ ವಿದ್ಯಾ ಸಂಸ್ಥೆಯ ಶೈಕ್ಷಣಿಕ ಸಾಧನೆಯನ್ನು ಕಳೆದ ಎರಡು ದಶಕಗಳಿಂದ ತಿಳಿದಿದ್ದೇನೆ. ಗುಣಾತ್ಮಕ ಶಿಕ್ಷಣಕ್ಕೆ ಹೆಸರುವಾಸಿಯಾಗಿದ್ದು, ಇಂತಹ ಸಂಸ್ಥೆ ಮೈಸೂರಿನಲ್ಲಿ ಶಾಖೆ ಪ್ರಾರಂಭವಾಗಬೇಕು. ಆ ಮೂಲಕ ಅಲ್ಲಿನ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಮುಂದಾಗಬೇಕು ಎಂದರು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಸಿ.ಮಂಜುನಾಥ ಪ್ರಸನ್ನ, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಜೇತವನಾದ ಬೌದ್ಧಬಿಕ್ಕು ಮನೋರಖಿತ ಬಂತೇಜಿ, ಸಂಸ್ಥೆ ಅಧ್ಯಕ್ಷ ನಾಗರಾಜು, ಕಾರ್ಯದರ್ಶಿ ಡಾ.ಎಸ್.ದತ್ತೇಶ್ ಕುಮಾರ್ ಮಾತನಾಡಿದರು. ಇದೇ ವೇಳೆ ಸಾಧಕ ಶಿಕ್ಷಕರು ಹಾಗೂ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಗುಂಡ್ಲುಪೇಟೆಯಲ್ಲಿ ವಿಜೃಂಭಣೆಯ ಅಯ್ಯಪ್ಪಸ್ವಾಮಿ ಜಾತ್ರೆ

ಗುಂಡ್ಲುಪೇಟೆ, ಜ.7– ಪಟ್ಟಣದ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ ವತಿಯಿಂದ ಅಯ್ಯಪ್ಪಸ್ವಾಮಿ ಜಾತ್ರೆ ಮತ್ತು ಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು.

ಜಾತ್ರೆ ಅಂಗವಾಗಿ ಭಾನುವಾರ ರಾತ್ರಿ ಅಯ್ಯಪ್ಪಸ್ವಾಮಿ ಬೆಳ್ಳಿ ಮೂರ್ತಿಯನ್ನು ಸಾವಿರಾರು ಅಯ್ಯಪ್ಪ ಮಾಲಾಧಾರಿಗಳ ನೇತೃತ್ವದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಇದೇ ವೇಳೆ ಉತ್ಸವ ಮೂರ್ತಿಗೆ ಭಕ್ತರು ಪೂಜೆ ಸಲ್ಲಿಸಿದರು.

ಸೋಮವಾರ ಮುಂಜಾನೆ ಆಂಜನೇಯ ದೇವಾಲಯ ಆವರಣದಲ್ಲಿ ಮಾಲಾಧಾರಿಗಳು ಕೊಂಡ ಹಾಯುವ ಮೂಲಕ ಕೊಂಡೋತ್ಸವ ಸಂಪನ್ನಗೊಂಡಿತು. ಜಾತ್ರೆಯ ಹಿನ್ನೆಲೆಯಲ್ಲಿ ಅಯ್ಯಪ್ಪ ಸ್ವಾಮಿ ದೇವಾಲಯವನ್ನು ತಳಿರು, ತೋರಣ ಮತ್ತು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಪಟ್ಟಣದ ಹಾಗೂ ನಾಡಿನ ವಿವಿಧ ಭಾಗದ ಭಕ್ತರು ದೇವರ ದರ್ಶನ ಪಡೆದರು.



ಗುಂಡ್ಲುಪೇಟೆ ಅಯ್ಯಪ್ಪಸ್ವಾಮಿ ಕೊಂಡೋತ್ಸವ ಅಂಗವಾಗಿ ಭಕ್ತರು ಪೂಜೆ ಸಲ್ಲಿಸಿದರು.

ದೆಹಲಿ ಚುನಾವಣೆ ದಿನಾಂಕ ಘೋಷಣೆ; ಫೆ.5ಕ್ಕೆ ಮತದಾನ; ಫೆ.8ರಂದು ಫಲಿತಾಂಶ

ನವದೆಹಲಿ: ದೆಹಲಿ ವಿಧಾನಸಭೆಯ ಚುನಾವಣೆ ದಿನಾಂಕ ಘೋಷಣೆಯಾಗಿದ್ದು ಫೆಬ್ರವರಿ 5ರಂದು ಮತದಾನ ನಡೆಯಲಿದ್ದು, ಫೆಬ್ರವರಿ 8ರಂದು ಫಲಿತಾಂಶ ಪ್ರಕಟವಾಗಲಿದೆ. ಇಂದು ಚುನಾವಣಾ ಆಯೋಗ ದೆಹಲಿ ವಿಧಾನಸಭೆ ಚುನಾವಣೆ 2025ರ ವೇಳಾಪಟ್ಟಿಯನ್ನು ಪ್ರಕಟಿಸಿದೆ. ದೆಹಲಿಯ 70 ಸ್ಥಾನಗಳಿಗೆ ಫೆಬ್ರವರಿ 5 ರಂದು ಮತದಾನ ನಡೆಯಲಿದೆ.

ಈ ಪತ್ರಿಕಾಗೋಷ್ಠಿಯಲ್ಲಿ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಿಂಗ್ ಸಂಧು ಉಪಸ್ಥಿತರಿದ್ದರು.

ದೆಹಲಿ ವಿಧಾನಸಭಾ ಚುನಾವಣೆಯ ಮತದಾನದ ಜೊತೆಗೆ ಚುನಾವಣಾ ಆಯೋಗವು ಚುನಾವಣಾ ಫಲಿತಾಂಶದ ದಿನಾಂಕವನ್ನೂ ಪ್ರಕಟಿಸಿದೆ. ಫಲಿತಾಂಶ ಫೆಬ್ರವರಿ 8 ರಂದು ಅಂದರೆ ಚುನಾವಣೆಯ 3 ದಿನಗಳ ನಂತರ ಪ್ರಕಟವಾಗಲಿದೆ.

ಕಳೆದ ಸೋಮವಾರ ಚುನಾವಣಾ ಆಯೋಗವೂ ದೆಹಲಿಯ ಮತದಾರರ ಸಂಖ್ಯೆಯನ್ನು ಬಹಿರಂಗಪಡಿಸಿತ್ತು. ಮತದಾರರ ಅಂತಿಮ ಪಟ್ಟಿಯ ಪ್ರಕಾರ ಕೇಂದ್ರಾಡಳಿತ ಪ್ರದೇಶವಾದ ದೆಹಲಿಯಲ್ಲಿ ಒಟ್ಟು 1 ಕೋಟಿ 55 ಲಕ್ಷದ 24 ಸಾವಿರದ 858 ನೋಂದಾಯಿತ ಮತದಾರರಿದ್ದಾರೆ. ಅದೇ ವೇಳೆ ಪುರುಷ ಮತದಾರರ ಸಂಖ್ಯೆ 84 ಲಕ್ಷ 49 ಸಾವಿರದ 645 ಹಾಗೂ ಮಹಿಳಾ ಮತದಾರರ ಸಂಖ್ಯೆ 71 ಲಕ್ಷ 73 ಸಾವಿರದ 952. ಈ ಬಾರಿ ದೆಹಲಿಯಲ್ಲಿ ಯುವ ಮತದಾರರ ಸಂಖ್ಯೆ 25.89 ಲಕ್ಷವಿದ್ದು ಮೊದಲ ಬಾರಿಗೆ ಮತ ಚಲಾಯಿಸಲು ಅರ್ಹರಾದವರ ಸಂಖ್ಯೆ 2.08 ಲಕ್ಷವಿದೆ.

ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ವದಂತಿಗಳನ್ನು ಹಬ್ಬಿಸಲಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಹೇಳಿದ್ದಾರೆ. ಇವಿಎಂ ಬಗ್ಗೆಯೂ ವದಂತಿ ಹಬ್ಬಿತ್ತು ಎಂದು ಹೇಳಿದರು.

ದುಬೈನಲ್ಲಿ ತರಬೇತಿ ವೇಳೆ ಕಾರು ಅಪಘಾತ; ನಟ ಅಜಿತ್ ಪಾರು



ದುಬೈ: ಖ್ಯಾತ ನಟ ಅಜಿತ್ ಕುಮಾರ್ ದುಬೈನಲ್ಲಿ ಕಾರ್ ರೇಸ್ ತರಬೇತಿ ವೇಳೆ ಅವರ ಕಾರು ಅಪಘಾತಕ್ಕೀಡಾಗಿದೆ. ಮುಂಬರುವ ರೇಸಿಂಗ್ ಚಾಂಪಿಯನ್‌ಶಿಪ್‌ಗಾಗಿ ತಯಾರಿಯ ಭಾಗವಾಗಿ ಟ್ರ್ಯಾಕ್‌ನಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಕಾರು ತಡೆಗೋಡೆಗೆ ಬಡಿದಿದ್ದು, ಅದೃಷ್ಟವಶಾತ್ ಅಜಿತ್ ಯಾವುದೇ ಗಾಯಗಳಿಲ್ಲದೆ ಅಪಘಾತದಿಂದ ಪಾರಾಗಿದ್ದಾರೆ.

ಆರಂಭದಲ್ಲಿ ಸುದ್ದಿಯಿಂದ ಗಾಬರಿಗೊಂಡಿದ್ದ ಅಭಿಮಾನಿಗಳು, ನಂತರ ಅವರ ಸುರಕ್ಷತೆಯ ಬಗ್ಗೆ ಸಮಾಧಾನ ವ್ಯಕ್ತಪಡಿಸಿದ್ದಾರೆ. ಅವರ ನಟನೆ, ವೃತ್ತಿಜೀವನದ ಜೊತೆಗೆ ಮೋಟಾರ್ ಸ್ಪೋರ್ಟ್‌ಗೆ ಅವರ ಸಮರ್ಪಣೆಯನ್ನು ಮೆಚ್ಚುತ್ತಿದ್ದಾರೆ. ತನ್ನ ಬಿಡುವಿಲ್ಲದ ವೇಳಾಪಟ್ಟಿಯ ನಡುವೆಯೂ ತನ್ನ ಆಸಕ್ತಿಗಳನ್ನು ಅನುಸರಿಸುವ ಅಜಿತ್ ಅವರ ಬದ್ಧತೆ ಅನೇಕರಿಗೆ ಸ್ಫೂರ್ತಿಯಾಗಿದೆ ಎಂದಿದ್ದಾರೆ.

ಅಜಿತ್ ಕುಮಾರ್ ಅವರು ಪ್ರತಿಷ್ಠಿತ ಮೈಕೆಲಿನ್ 24H ಸರಣಿಯಲ್ಲಿ ತಮ್ಮ ಚೊಚ್ಚಲ ಪ್ರವೇಶವನ್ನು ಗುರುತಿಸುವ ಮೂಲಕ ಮೋಟಾರ್ ರೇಸಿಂಗ್‌ಗೆ ಮರಳಲು ಸಜ್ಜಾಗುತ್ತಿದ್ದಾರೆ. ಅವರು Michelin 24H DUBAIಯ 20ನೇ ಆವೃತ್ತಿಯಲ್ಲಿ ಸ್ಪರ್ಧಿಸಲಿದ್ದಾರೆ. ಅಜಿತ್ ಕುಮಾರ್ ರೇಸಿಂಗ್ ಮತ್ತು ಜನವರಿ 12 ಮತ್ತು 13 ರಂದು ನಡೆಯಲಿರುವ ರೇಸಿಂಗ್ ಈವೆಂಟ್ ಅನ್ನು ಮುನ್ನಡೆಸಲಿದ್ದಾರೆ.

'ಫ್ರೀ ಬೀಸ್' ವ್ಯಾಖ್ಯಾನಿಸುವುದು ಕಷ್ಟ, ಚುನಾವಣಾ ಆಯೋಗದ 'ಕೈ ಕಟ್ಟಲಾಗಿದೆ': ಸಿಇಸಿ ರಾಜೀವ್ ಕುಮಾರ್



ನವದೆಹಲಿ: 'ಉಚಿತ' ಎಂದರೇನು ಎಂಬುದನ್ನು ವ್ಯಾಖ್ಯಾನಿಸುವುದು ತುಂಬಾ ಕಷ್ಟಕರವಾಗಿದೆ ಈ ವಿಚಾರದಲ್ಲಿ ಚುನಾವಣಾ ಆಯೋಗದ 'ಕೈ ಕಟ್ಟಲಾಗಿದೆ'. ಏಕೆಂದರೆ ವಿಷಯ ನ್ಯಾಯಾಲಯದಲ್ಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಮಂಗಳವಾರ ಹೇಳಿದ್ದಾರೆ.

ಇಂದು ದೆಹಲಿಯಲ್ಲಿ ವಿಧಾನಸಭಾ ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸಲು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ(ಸಿಇಸಿ) ಕುಮಾರ್ ಅವರು, 'ಫ್ರೀ ಬೀಸ್'ಗೆ ಅನುಮೋದಿತ ಮತ್ತು ಕಾನೂನಿನ ಮೂಲಕ ಉತ್ತರ ಕಂಡುಕೊಳ್ಳಲು ಇದು 'ಸೂಕ್ತ ಸಮಯ' ಎಂದರು.

ಚುನಾವಣಾ ಪ್ರಚಾರದ ಸಮಯದಲ್ಲಿ ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳನ್ನು ಘೋಷಿಸುವ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಈ ವಿಷಯವು ನ್ಯಾಯಾಲಯದಲ್ಲಿದೆ. 'ಉಚಿತ ಎಂದರೆ ಏನು?' ನನಗೆ ಬಿಟ್ಟಿ ಕೊಡುವುದು ಬೇರೆ ಯವರಿಗೆ ಅದು ಅರ್ಹತೆಯಾಗಿರಬಹುದು. ಉಚಿತ ಏನೆಂದು ವ್ಯಾಖ್ಯಾನಿಸು ವುದು ತುಂಬಾ ಕಷ್ಟ ಎಂದು ಹೇಳಿದರು.

ಉಚಿತ ಘೋಷಣೆಗಳನ್ನು ಮಾಡುವಾಗ, ಜನರು ರಾಜ್ಯದ ಹಣಕಾಸಿನ ಸ್ಥಿತಿಯ ಬಗ್ಗೆಯೂ ತಿಳಿದಿರಬೇಕು ಎಂದು ರಾಜೀವ್ ಕುಮಾರ್ ತಿಳಿಸಿದರು.

ರಾಜ್ಯದ ಹಣಕಾಸಿನ ಸ್ಥಿತಿ ಏನೆಂಬುದನ್ನು ನೋಡುವುದು ಅವಶ್ಯಕ. ಸಾಲ-ಜಿಡಿಪಿ ಅನುಪಾತ ಏನು. ಆ ಭರವಸೆಯ ಮೇಲೆ ನೀವು ಎಷ್ಟು ಸಾಲ ಪಡೆಯುತ್ತೀರಿ. ಈ ಭರವಸೆಯ ಆರ್ಥಿಕ ವೆಚ್ಚ ಎಷ್ಟು? ಎಂಬುದನ್ನು ಅವರು ಅರಿತಿರಬೇಕು ಎಂದರು.

ಪ್ರೊ.ಎನ್.ಉಷಾರಾಣಿ ಅವರಿಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ



ಮೈಸೂರು,ಜ.7(ಪಿಎಂ)- ಮೈಸೂರು ವಿಶ್ವವಿದ್ಯಾನಿಲಯದ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಎನ್.ಉಷಾರಾಣಿ ಅವರು ಕರ್ನಾಟಕ ಸರ್ಕಾರದ ಮಾಧ್ಯಮ ಅಕಾಡೆಮಿ ವತಿಯಿಂದ ಕೊಡಮಾಡುವ 2023ನೇ ಸಾಲಿನ ಪ್ರತಿಷ್ಠಿತ ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರೊ.ಉಷಾರಾಣಿ ಅವರು ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಬಹು ಮಾಧ್ಯಮ ಸಂಶೋಧನಾ ಕೇಂದ್ರದ ಸಂಸ್ಥಾಪಕ ನಿರ್ದೇಶಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕಲಾನಿಕಾಯದ ಡೀನ್ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಕೇಂದ್ರ ಸರ್ಕಾರದ ಪ್ರತಿಷ್ಠಿತ ಐಸಿಎಸ್‌ಎಸ್‌ಆರ್ ಸೀನಿಯರ್ ಫೆಲೋ ಗೌರವಕ್ಕೂ ಭಾಜನರಾಗಿದ್ದಾರೆ.

ಒಂದನೇ ಪುಟದಿಂದ

ದಿಲ್ಲಿ ಭೇಟಿಗೆ ವರಿಷ್ಠರ ಬ್ರೇಕ್

ಪ್ರವಾಸಕ್ಕೆ ಬ್ರೇಕ್ ಬಿದ್ದಿತು. ದೆಹಲಿಯಲ್ಲೇ ಬಿಡಾರ ಹೂಡಿರುವ ಶಿವಕುಮಾರ್, ಸತೀಶ್ ಜಾರಕಿಹೊಳಿಯ ಬೆಳಗಾವಿ ರಾಜಕೀಯಕ್ಕೆ ಪ್ರತಿಯಾಗಿ, ಮುಖ್ಯಮಂತ್ರಿ ಗಾದಿ ಪಡೆಯುವ ತಮ್ಮ ತಂತ್ರಗಾರಿಕೆ ನಡೆಸಿದ್ದಾರೆ. ವರಿಷ್ಠರ ಭೇಟಿ ಜೊತೆಗೆ ಕೇಂದ್ರದ ಇಬ್ಬರು ಸಚಿವರನ್ನು ಶಿವಕುಮಾರ್ ಇಂದು ದೆಹಲಿಯಲ್ಲಿ ಗೌಪ್ಯವಾಗಿ ಭೇಟಿ ಮಾಡಿರುವುದು ರಾಜಕೀಯ ವಲಯದಲ್ಲಿ ಹೆಚ್ಚಿನ ಚರ್ಚೆಗೆ ಗ್ರಾಸವಾಗಿದೆಯಾದರೂ ಭೇಟಿಯ ನಿಜ ಕಾರಣ ತಿಳಿದುಬಂದಿಲ್ಲ.

ಮೊದಲೇ ನಿಗದಿಯಾದಂತೆ ಜಾರಕಿಹೊಳಿ ತಂಡ ಸೋಮವಾರ ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಬೇಕಿತ್ತು. ಇದರ ಬೆನ್ನಲ್ಲೇ ಮುಖ್ಯಮಂತ್ರಿ ಅವರೂ, ಇಂದು ಮಂಗಳವಾರ, ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ ಇಂದೇ ನಗರಕ್ಕೆ ಹಿಂತಿರುಗುವ ಕಾರ್ಯಕ್ರಮ ನಿಗದಿಯಾಗಿತ್ತು. ತಮ್ಮ ಭೇಟಿ ಸಂದರ್ಭದಲ್ಲಿ ವಿಧಾನಪರಿಷತ್‌ಗೆ ಮೂವರ ನಾಮಕರಣ ಹಾಗೂ ತೆರವಾಗಿರುವ ಒಂದು ಸ್ಥಾನ ಭರ್ತಿ ಮಾಡುವುದು, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ, ಅಲ್ಲದೆ, ಬಜೆಟ್ ಅಧಿವೇಶನದಲ್ಲಿ ವಿಧಾನಪರಿಷತ್‌ನ ಸಭಾಪತಿ ಹಾಗೂ ಉಪಸಭಾಪತಿ ಸ್ಥಾನಕ್ಕೆ ಕಾಂಗ್ರೆಸ್‌ನವರನ್ನು ತರುವ ಸಂಬಂಧ ಚರ್ಚೆ ನಡೆಸುವ ಯೋಜನೆ ಇತ್ತು.

ದೆಹಲಿಗೆ ತೆರಳುವ ಮುನ್ನ ತಮ್ಮ ಆಪ್ತ ಸಚಿವರು ಮತ್ತು ಶಾಸಕರೊಂದಿಗೆ ಮುಖ್ಯಮಂತ್ರಿ ನಡೆಸಿದ ಔತಣಕೂಟದ ಕೆಲವು ರಾಜಕೀಯ ವಿಷಯಗಳು ಮಾಧ್ಯಮಗಳಲ್ಲಿ ಬಹಿರಂಗಗೊಳ್ಳುತ್ತಿದ್ದಂತೆ, ಶಿವಕುಮಾರ್ ದೆಹಲಿ ರಾಜಕೀಯ ರಂಗ ಪ್ರವೇಶ ಮಾಡಿದರು.

ಶಿವಕುಮಾರ್ ಪ್ರವೇಶ ಕೊಡುತ್ತಿದ್ದಂತೆ ವರಿಷ್ಠರು ಸಿದ್ದರಾಮಯ್ಯ ಮತ್ತು ಬೆಂಬಲಿಗ ಸಚಿವರ ದೆಹಲಿ ಭೇಟಿಗೆ ತಾತ್ಕಾಲಿಕ ತಡೆ ನೀಡಿದ್ದಲ್ಲದೆ, ದೆಹಲಿ ವಿಧಾನಸಭಾ ಚುನಾವಣೆ ನಂತರ ಬರುವಂತೆ ತಿಳಿಸಿದರು.

ವರಿಷ್ಠರು ಕಡೇ ಗಳಿಗೆಯಲ್ಲಿ ಸಚಿವರು ಮತ್ತು ಮುಖ್ಯಮಂತ್ರಿಗೆ ನೀಡಿದ್ದ ಸಮಯವನ್ನು ಮುಂದೂಡಿದ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಹಾಗೂ ಅವರ ಬೆಂಬಲಿಗರು ದೆಹಲಿ ಪ್ರವಾಸವನ್ನು ರದ್ದುಪಡಿಸಿದ್ದಾರೆ.

ದೆಹಲಿ ಪ್ರವಾಸ ರದ್ದಾಗುತ್ತಿದ್ದಂತೆ ಇಂದಿನ ಕಾರ್ಯಕ್ರಮಗಳಿಗೆ ಮೊದಲೇ ಸಮಯ ಕೇಳಿದ್ದವರಿಗೆ ಮುಖ್ಯಮಂತ್ರಿ ಅವಕಾಶ ಮಾಡಿಕೊಟ್ಟರು.

ಚೀನಾ ವೈರಸ್ ಬಗ್ಗೆ ನಿಗಾ ಇರಲಿ

ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಸಿರಾಟ ಸಮಸ್ಯೆ ಸಂಬಂಧಿ ಕಾಯಿಲೆ ಪತ್ತೆ ಮತ್ತು ಚಿಕಿತ್ಸೆಗೆ ಪ್ರತ್ಯೇಕ ವಿಭಾಗಗಳನ್ನು ತೆರೆದು ವೈದ್ಯರು ಮತ್ತು ಸಿಬ್ಬಂದಿಯನ್ನು ನೇಮಿಸುವಂತೆ ಸೂಚಿಸಿದೆ. ನಗರದ ಹೆಬ್ಬಾಳದ ಖಾಸಗಿ ಆಸ್ಪತ್ರೆಯಲ್ಲಿ ನಿನ್ನೆ ಎರಡು ಪ್ರಕರಣಗಳು ಪತ್ತೆಯಾದ ನಂತರ ಉಳಿದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಉಸಿರಾಟ ತೊಂದರೆಯಿಂದ ಬಳಲು ತ್ತಿರುವವರ ಮಾಹಿತಿಯನ್ನು ಪಡೆದುಕೊಂಡಿದೆ. ಕೆಲವು ಸಂಶಯಾಸ್ಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಚಿಕಿತ್ಸೆಗೆ ಒಳಪಡಿಸಲಾಗಿದೆ ಎಂದು ಇಲಾಖೆ ಉನ್ನತ ಮೂಲಗಳು ತಿಳಿಸಿವೆ.

ಮೈಸೂರು ಬಂದ್ ಹಿನ್ನೆಲೆಯಲ್ಲಿ ಪ್ರತಿಭಟನಾ ಸಭೆ

ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಭಾರಿ ಆಕ್ರೋಶ; ಏಕವಚನದಲ್ಲೇ ವಾಗ್ದಾಳಿ

ಸಂಪುಟದಿಂದ ವಜಾಗೊಳಿಸಲು ರಾಷ್ಟ್ರಪತಿಗಳಿಗೆ ಮನವಿ



ಮೈಸೂರಿನ ಪುರಭವನದ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಪ್ರತಿಭಟನಾಕಾರರಿಂದ ಜಿಲ್ಲಾಧಿಕಾರಿ ಕಚೇರಿ ಉಪತಹಸೀಲ್ದಾರ್ ವಿಶ್ವನಾಥ್ ಮನವಿ ಸ್ವೀಕರಿಸಿದರು.

ಮೈಸೂರು,ಜ.7(ಪಿಎಂ)- ಮೈಸೂರು ಬಂದ್ ಹಿನ್ನೆಲೆಯಲ್ಲಿ ನಗರದ ಪುರಭವನ ಆವರಣದಲ್ಲಿ ಮಂಗಳವಾರ ನಡೆದ ಪ್ರತಿಭಟನಾ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಭಾರೀ ಆಕ್ರೋಶ ವ್ಯಕ್ತವಾಯಿತು. ಅಲ್ಲದೆ, ಸಭೆಯ ಕೊನೆಯಲ್ಲಿ ಅಮಿತ್ ಶಾರನ್ನು ಸಂಪುಟದಿಂದ ವಜಾಗೊಳಿಸಬೇಕೆಂಬುದೂ ಸೇರಿದಂತೆ ವಿವಿಧ ಕ್ರಮಕ್ಕೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಸಾಕಷ್ಟು ಮುಖಂಡರು ಅಮಿತ್ ಶಾ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದರು. ಅಲ್ಲದೆ, ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧವೂ ಆಕ್ರೋಶಭರಿತ ಮಾತುಗಳು ಕೇಳಿಬಂದವು. ಅಶೋಕಪುರಂ ಮುಖಂಡ ಹೆಚ್.ವಾಸು ಮಾತನಾಡಿ, ಸಂವಿಧಾನದ ಆಶ್ರಯದ್ದೇ ಕಲಾಪದಲ್ಲಿ ನಿಂತು, ದೇಶದ ಗೃಹ ಮಂತ್ರಿಯಂತಹ ಜವಾಬ್ದಾರಿ ಸ್ಥಾನದಲ್ಲಿರುವ ಅಮಿತ್ ಶಾ, ಅವಿವೇಕದ ಮಾತುಗಳನ್ನಾಡಿ ತನ್ನ ಅಜ್ಞಾನ ಪ್ರದರ್ಶನ ಮಾಡಿದ್ದಾನೆಂದು ವಾಗ್ದಾಳಿ ನಡೆಸಿದರಲ್ಲದೆ, ಶೋಷಿತ ಸಮಾಜಗಳಿಗೆ ಅಂಬೇಡ್ಕರ್ ಅವರೇ ನಿಜವಾದ ದೇವರು. ಎಂದೆಂದಿಗೂ ಅಂಬೇಡ್ಕರ್ ಅವರನ್ನು ನಾವು ದೇವರೆಂದೇ ಪೂಜಿಸುತ್ತೇವೆ ಎಂದು ಹೇಳಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮನುವಾದಿಗಳಿಗೆ ಡಾ.ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನದ ಬಗ್ಗೆ ಹಿಂದಿನಿಂದಲೂ ಅಸಹನೆ ಇದೆ. ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಸೋಲಿಸಿದರೆಂದು ಮನುವಾದಿಗಳು ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ನಿಜವಾಗಲೂ ಸೋಲಿಸಿದವರು ಇದೇ ಮನುವಾದಿಗಳು. ಇವರು ಬರೀ ಸುಳ್ಳುಗಳನ್ನು ಹೇಳಿ ಸಮಾಜದ ದಿಕ್ಕು ತಪ್ಪಿಸುತ್ತಾರೆ. ಅವರ ಅಂತರಾಳದಲ್ಲಿರುವ ಅಂಬೇಡ್ಕರ್ ಕುರಿತ ಅಸಹನೆ ಕಟ್ಟೆಯೊಡೆದು ಅಮಿತ್ ಶಾ ಬಾಯಿಂದ ಬಂದಿದೆ. ಇಂತಹವರ ಸರ್ಕಾರದಿಂದ ತಳವರ್ಗದ ಜನ ಮುಖ್ಯವಾಹಿನಿಗೆ ಬರಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, ರಾಜ್ಯಸಭೆಯಲ್ಲಿ ಅಮಿತ್ ಶಾ ಭಾಷಣ ಮಾಡುವಾಗ, ಅವನು ಇದು ಇಷ್ಟೊಂದು ಗಂಭೀರ ಸ್ವರೂಪ ಪಡೆಯುತ್ತದೆಯೆಂದು ಬಹುಶಃ ಭಾವಿಸಿರಲಿಲ್ಲ. ಎರಡು ದಿನಗಳು ಆದ ಮೇಲೆ ತನ್ನ ಮಾತನ್ನು ತಿರುಚಿದ್ದಾರೆಂದು ಪ್ರತಿಪಾದಿಸಿದ. ಬಾಬಾ ಸಾಹೇಬರ ಬದಲು ದೇವರ ನೆನೆಯುವ ಹೇಳಿಕೆ ನೀಡಿದ ಅಮಿತ್ ಶಾ ದೇಶದ್ರೋಹಿ ಎಂದು ಕಿರಿಕಾರಿದರು.

ಪ್ರಗತಿಪರ ಚಿಂತಕ ಡಾ.ಕೃಷ್ಣಮೂರ್ತಿ ಚಮರಂ ಮಾತನಾಡಿ, ಇಡೀ ಮೈಸೂರು ಬಂದ್‌ಗೆ ಬೆಂಬಲ ನೀಡಿದೆ. ಅಂಬೇಡ್ಕರ್ ಅವರ ಕುರಿತ ಅಮಿತ್ ಶಾ ಹೇಳಿಕೆಯು ಇಡೀ ಭಾರತೀಯರು, ಸಂವಿಧಾನ, ಸಮಾನತೆಯಲ್ಲಿ ನಂಬಿಕೆ ಹೊಂದಿರುವವರಿಗೆ ಮಾಡಿದ ಅಪಮಾನ. ಅಮಿತ್ ಶಾಗೆ ಸ್ವಲ್ಪವಾದರೂ ಗೌರವ ಇದ್ದರೆ ಈಗಲಾದರೂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಫೆಬ್ರವರಿಯಲ್ಲಿ ಸಂಸತ್‌ಗೆ ಮುತ್ತಿಗೆ: ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿ, ನಮ್ಮ ಪ್ರತಿಕ್ರಿಯೆ ಹೇಗಿರುತ್ತದೆಂದು ತಿಳಿದುಕೊಳ್ಳಲು ಬಿಜೆಪಿ-ಆರ್‌ಎಸ್‌ಎಸ್ ನವರು ಅಮಿತ್ ಶಾ ಮೂಲಕ ಮಾಡಿದ ತಂತ್ರ ಇದು. ಬಾಬಾ ಸಾಹೇಬರ ಸಂವಿಧಾನವನ್ನು ಹಂತ ಹಂತವಾಗಿ ಶಿಥಿಲಗೊಳಿಸಬೇಕೆಂಬುದು ಇವರ ಅಜೆಂಡಾ. ಅಮಿತ್ ಶಾ ವಿರುದ್ಧದ ಈ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಬೇಕು. ಅಮಿತ್ ಶಾ ವಜಾ ಆಗಲೇಬೇಕು. ಹಾಗಾಗಿ ನಮ್ಮ ಹೋರಾಟ ದೆಹಲಿ ಮಟ್ಟಕ್ಕೆ ಹೋಗಬೇಕಾಗುತ್ತದೆ. ಫೆಬ್ರವರಿಯಲ್ಲಿ ಸಂಸತ್ ಅಧಿವೇಶನ ಶುರುವಾಗಲಿದ್ದು, ಈ ವೇಳೆ ಸಂಸತ್ ಮತ್ತು ಪ್ರಧಾನ ಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕುವ ಚಳವಳಿಯನ್ನು ಕರ್ನಾಟಕದಿಂದ ನಡೆಸಬೇಕು. ನಮಗೆ ನಮ್ಮ ತಂದೆ-ತಾಯಿ ಜನ್ಮಕೊಟ್ಟಿದ್ದಾರೆ. ಆದರೆ ಬದುಕು ಕೊಟ್ಟ ತಂದೆ ಅಂಬೇಡ್ಕರ್ ಎಂದು ಹೇಳಿದರು.


ಮುಖಂಡರಾದ ಸವಿತಾ ಪ.ಮಲ್ಲೇಶ್ ಮಾತನಾಡಿ, ಈ ದೇಶಕ್ಕಾಗಿ ದುಡಿದವರು, ಮಡಿದವರ ಅಪಮಾನಿಸುವುದೇ ಮನುವಾದಿಗಳ ಅಜೆಂಡಾ. ಇದನ್ನು ನಾವು ಖಂಡಿತ ಸಹಿಸಬಾರದು. ನಮ್ಮ ಹೋರಾಟ ತೀವ್ರಗೊಳ್ಳಬೇಕು. ಬ್ರಿಟಿಷರಂತೆ ಮನುವಾದಿಗಳು ಪರಕೀಯರು ಎಂದು ಕಿಡಿಕಾರಿದರು.

ಜ.11ರಂದು ಬೃಹತ್ ಪ್ರತಿಭಟನೆ: ಹಿರಿಯ ರಂಗಕರ್ಮಿ ಹೆಚ್.ಜನಾರ್ಧನ್ (ಜನ್ನಿ) ಮಾತನಾಡಿ, ವಿಕೃತ-ಕೊಳಕು ಮನಸ್ಥಿತಿ ಹೊಂದಿರುವವರಿಗೆ ಮಾತ್ರವೇ ಅಂಬೇಡ್ಕರ್ ಬಗ್ಗೆ ಅಗೌರವ ಇರಲು ಸಾಧ್ಯ ಅಂತಹ ವಿಕೃತಿಯ ಆಕೃತಿ ಈ ಅಮಿತ್ ಶಾ. ಈ ಮನುಷ್ಯ ರಾಜೀನಾಮೆ ಕೊಡುವವರೆಗೂ ನಿರಂತರ ಹೋರಾಟ ನಡೆಯಬೇಕು. ಹಾಗಾಗಿ ಜ.11ರಂದು ಎಲ್ಲಾ ಪ್ರಗತಿಪರ ಸಂಘಟನೆಗಳು ಗಾಂಧಿಚೌಕದ ಬಳಿ ಬೃಹತ್ ಹೋರಾಟ ಮಾಡೋಣ ಎಂದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಿ.ಶ್ರೀನಿವಾಸ ಪ್ರಸಾದ್ ಸಹೋದರ ವಿ.ರಾಮಸ್ವಾಮಿ, ಮಾಜಿ ಮೇಯರ್ ಪುರುಷೋತ್ತಮ್, ಮುಖಂಡರಾದ ಹರಿಹರ ಆನಂದಸ್ವಾಮಿ, ಈಶ್ವರ ಚಕ್ಕಡಿ, ಲೇಖಕ ಸಿದ್ದಸ್ವಾಮಿ ಸೇರಿದಂತೆ ನೂರಾರು ಮಂದಿ ಹಾಜರಿದ್ದರು.

> ಸುಪ್ರೀಂಕೋರ್ಟ್ ಈಗಾಗಲೇ ರಾಷ್ಟ್ರನಾಯಕರನ್ನು ಅಪಮಾನಿಸುವವರ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸುವಂತೆ ನಿರ್ದೇಶನ ನೀಡಿದೆ ಅಂತೆಯೇ ಅಮಿತ್ ಶಾ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಲು ಸಂಬಂಧಿಸಿದ ನ್ಯಾಯಾಲಯ ಹಾಗೂ ಪೊಲೀಸ್ ಪ್ರಾಧಿಕಾರಕ್ಕೆ ಆದೇಶಿಸಬೇಕು. ಅಮಿತ್ ಶಾ ವಿರುದ್ಧ ಅಸ್ಪೃಶ್ಯತಾ ಆಚರಣೆ ಕಾಯ್ದೆಯಡಿ ಕಾನೂನು ಕ್ರಮವಾಗಬೇಕು ಎಂಬಿತ್ಯಾದಿ ಅಂಶಗಳುಳ್ಳ ಮನವಿಯನ್ನು ರಾಷ್ಟ್ರಪತಿಗಳಿಗೆ ರವಾನಿಸಲು ಜಿಲ್ಲಾಧಿಕಾರಿ ಕಚೇರಿ ಉಪತಹಸೀಲ್ದಾರ್ ವಿಶ್ವನಾಥ್, ಸ್ಥಳಕ್ಕಾಗಮಿಸಿ ಪ್ರತಿಭಟನಾಕಾರರಿಂದ ಸ್ವೀಕರಿಸಿದರು.

ಕ್ಯಾಲೆಂಡರ್ ಪ್ರತಿಯೊಬ್ಬರ ಬದುಕಿನ ಅವಿಭಾಜ್ಯ ಅಂಗ

ಸಾಹಿತಿ ಬನ್ನೂರು ಕೆ.ರಾಜು ಅಭಿಮತ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಮೈಸೂರು,ಜ.7(ಪಿಎಂ)- ದಿನದರ್ಶಿಕೆ ಅರ್ಥಾತ್ ಕ್ಯಾಲೆಂಡರ್ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ. ಇದು ಪ್ರತಿಯೊಬ್ಬರ ಬದುಕಲ್ಲೂ ಹಾಸು ಹೊಕ್ಕಾಗಿದೆ ಎಂದು ಎಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ನಾಯಕ ಪಾಕ್ಷಿಕ ಪತ್ರಿಕಾ ಬಳಗದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಳಗದಿಂದ ಹೊರತಂದಿರುವ 2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಾವಿಲ್ಲದ ಮನೆಯಿಂದ ಸಾಸುವೆ ತರುವಂತೆ ಬುದ್ಧ ಹೇಳಿದ ಕಥೆ ನಮಗೆಲ್ಲಾ ಗೊತ್ತಿದೆ. ಪ್ರಸ್ತುತದ ಸನ್ನಿವೇಶವಾಗಿದ್ದರೆ, ಅದೇ ಬುದ್ಧ ಕ್ಯಾಲೆಂಡರ್ ಇಲ್ಲದ ಮನೆಯಿಂದ ಸಾಸುವೆ ತರುವಂತೆ ಹೇಳುತ್ತಿದ್ದನೇನೋ. ಕ್ಯಾಲೆಂಡರ್ ಸಹ ಪ್ರಾಚೀನ ಇತಿಹಾಸ ಹೊಂದಿದೆ. ಅಂಕೆ ಸಂಖ್ಯೆಗಳು ಇಲ್ಲದ ಅಕ್ಷರ ಸಂಸ್ಕೃತಿಗೂ ಮೊದಲೇ ಕ್ಯಾಲೆಂಡರ್ ಪರಿಕಲ್ಪನೆ ನಮ್ಮಲ್ಲಿ ಇತ್ತು. ಈಗ ಎಲ್ಲೆಲ್ಲೂ ವಿವಿಧ ರೀತಿಯ ಬಹುವರ್ಣದ ಕ್ಯಾಲೆಂಡರ್‌ಗಳದ್ದೇ ಸುಗ್ಗಿ. ಕ್ಯಾಲೆಂಡರ್ ಪ್ರತಿಯೊಬ್ಬರಿಗೂ ಅತ್ಯಗತ್ಯವಾಗಿದೆ. ಹಾಗಾಗಿ ಇಂತಹ ಜನೋಪಯೋಗಿ ಕ್ಯಾಲೆಂಡರ್ ಅನ್ನು ಸಾಮಾನ್ಯ ಜನರಿಗೆ ತಲುಪಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ನಾಯಕ ಪಾಕ್ಷಿಕ ಪತ್ರಿಕೆಯ ಸಂಪಾದಕ ಸತ್ಯನಾರಾಯಣ, ಕನ್ನಡಪರ ಹೋರಾಟಗಾರ ಎಸ್.ಬಾಲಕೃಷ್ಣ, ಸಮಾಜ ಸೇವಕರಾದ ಸುಣ್ಣದಕೇರಿ ರಮೇಶ್, ವೈ.ಎಸ್.ರಮೇಶ್ ಬಾಬು ಮತ್ತಿತರರು ಹಾಜರಿದ್ದರು.

ಕೇಕ್‌ಗೆ ಬಳಸುವ ರಸಾಯನಿಕ ಸೇವಿಸಿದ್ದ ಕೈದಿ ಸಾವು

ಮತ್ತಿಬ್ಬರ ಸ್ಥಿತಿ ಗಂಭೀರ

ಮೈಸೂರು, ಜ.7- ಕೇಕ್ ತಯಾರಿಕೆಯಲ್ಲಿ ಬಳಸುವ ಎಸೆನ್ಸ್ ರಸಾಯನಿಕ ಸೇವಿಸಿ ಆಸ್ಪತ್ರೆ ಸೇರಿದ್ದ ಕೈದಿಯೊಬ್ಬ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಮತ್ತಿಬ್ಬರ ಸ್ಥಿತಿ ಚಿಂತಾಜನಕವಾಗಿದೆ.

ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಮೈಸೂರು ಕೇಂದ್ರ ಕಾರಾಗೃಹದಲ್ಲಿದ್ದ ಮಾದೇಶ್(37) ಸೋಮವಾರ ಮೃತಪಟ್ಟಿದ್ದು, ನಾಗರಾಜ ಹಾಗೂ ರಮೇಶ್ ಸ್ಥಿತಿ ಗಂಭೀರವಾಗಿದೆ.

ಹೊಟ್ಟೆ ನೋವೆಂದು ದಾಖಲು: ಪತ್ನಿ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿದ್ದ ಮೈಸೂರಿನ ಸಾತಗಳ್ಳಿ ನಿವಾಸಿ, ಮೂಲತಃ ಗುಂಡ್ಲುಪೇಟೆ ತಾಲೂಕಿನ ಮಾದೇಶ್ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಹಿನ್ನೆಲೆಯಲ್ಲಿ ಕಳೆದ ಡಿಸೆಂಬರ್ 29ರಂದು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಇದೇ ಕಾರಣಕ್ಕೆ ಮರುದಿನ ಕೊಳ್ಳೆಗಾಲದ ನಾಗರಾಜ ಹಾಗೂ ಜನವರಿ 2ರಂದು ಹಾಸನದ ರಮೇಶ್ ಅವರನ್ನೂ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ನೀಡಿದರೂ ಚೇತರಿಸಿಕೊಳ್ಳದಿದ್ದಾಗ ವೈದ್ಯರಿಗೆ ಅನುಮಾನ ಬಂದು ಪ್ರಶ್ನಿಸಿದಾಗ ಈ ಮೂವರೂ ಕಾರಾಗೃಹದ ಕೇಕ್ ತಯಾರಿಕಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದು, ಕೇಕ್ ತಯಾರಿಗೆ ಬಳಸುವ ಎಸೆನ್ಸ್ ಅನ್ನು ಹೆಚ್ಚು ಪ್ರಮಾಣದಲ್ಲಿ ಸೇವಿಸಿರುವುದು ಗೊತ್ತಾಗಿದೆ. ಎಸೆನ್ಸ್ ಸೇವಿಸಿರುವ ಬಗ್ಗೆ ಮಾದೇಶ್, ವೈದ್ಯರಿಗೆ ತಿಳಿಸಿದ್ದಾನೆ. ಇದು ಜೈಲರ್ ಗಮನಕ್ಕೂ ಬಂದಿಲ್ಲ ಎಂದು ಹೇಳಲಾಗಿದೆ. ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅತ್ಯಾಚಾರ ಆರೋಪಿ ಅಸಾರಾಂ ಬಾಪುಗೆ ಸುಪ್ರೀಂಕೋರ್ಟ್ ಮಧ್ಯಂತರ ಜಾಮೀನು



ನವದೆಹಲಿ: 2013ರ ಅತ್ಯಾಚಾರ ಪ್ರಕರಣದಲ್ಲಿ ಜೈಲಿನಲ್ಲಿರುವ ಸ್ವಯಂಘೋಷಿತ ದೇವಮಾನವ ಅಸಾರಾಂ ಅವರಿಗೆ ಮಾರ್ಚ್ 31 ರವರೆಗೆ ಸುಪ್ರೀಂ ಕೋರ್ಟ್ ಮಂಗಳವಾರ ಮಧ್ಯಂತರ ಜಾಮೀನು ನೀಡಿದೆ.

ವೈದ್ಯಕೀಯ ಕಾರಣಗಳಿಗಾಗಿ ನ್ಯಾಯಮೂರ್ತಿಗಳಾದ ಎಂ ಎಂ ಸುಂದ್ರೇಶ್ ಮತ್ತು ರಾಜೇಶ್ ಬಿಂದಾಲ್ ಅವರನ್ನೊಳಗೊಂಡ ನ್ಯಾಯಪೀಠ ಈ ಜಾಮೀನು ನೀಡಿದ್ದು, ಜೈಲಿನಿಂದ ಬಿಡುಗಡೆಯಾದ ನಂತರ ಅವರ ಅನುಯಾಯಿಗಳನ್ನು ಭೇಟಿ ಮಾಡದಂತೆ ನಿರ್ದೇಶಿಸಿದೆ.

86 ವಯಸ್ಸಿನ ಅಸಾರಾಂ ಅವರು ಹೃದಯ ಸಂಬಂಧಿ ಕಾಯಿಲೆಯ ಜೊತೆಗೆ ವಿವಿಧ ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. 2023 ರಲ್ಲಿ ಗಾಂಧಿನಗರ ನ್ಯಾಯಾಲಯವು ತನಗೆ ನೀಡಿದ್ದ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸುವಂತೆ ಅಸಾರಾಂ ಮಾಡಿದ ಮನವಿಯ ಕುರಿತು ಸುಪ್ರೀಂ ಕೋರ್ಟ್ ಗುಜರಾತ್ ಸರ್ಕಾರದ ಪ್ರತಿಕ್ರಿಯೆಯನ್ನು ಕೇಳಿತ್ತು

ವೈದ್ಯಕೀಯ ಆಧಾರದ ಮೇಲೆ ಮಾತ್ರ ಈ ವಿಚಾರವನ್ನು ಪರಿಶೀಲಿಸುವುದಾಗಿ ಸುಪ್ರೀಂಕೋರ್ಟ್ ಹೇಳಿತ್ತು ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸುವಂತೆ ಅಸಾರಾಂ ಮಾಡಿದ್ದ ಮನವಿಯನ್ನು ಗುಜರಾತ್ ಹೈಕೋರ್ಟ್ ಆಗಸ್ಟ್ 29, 2024 ರಂದು ತಿರಸ್ಕರಿಸಿತ್ತು.


ದಟ್ಟ ಮಂಜಿನ ಕಾರಣ ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿ; ಸ್ಥಳದಲ್ಲೇ ಒಂದೇ ಕುಟುಂಬದ ಮೂವರು ಸಾವು

ತುಮಕೂರು: ತುಮಕೂರು ತಾಲೂಕಿನ ಕೋರ ಹತ್ತಿರದ ಓಬಳಾಪುರ ಗೇಟ್ ಬಳಿ ಮಂಗಳವಾರ ಬೆಳಗಿನ ಜಾವ ಟ್ರ್ಯಾಕ್ಟರ್ ಗೆ ಬೈಕ್ ಡಿಕ್ಕಿಯಾಗಿ ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದಾರೆ. ಮಧುಗಿರಿ ತಾಲೂಕಿನ ಪುರವರ ಹೋಬಳಿ ಗೊಂದಿಹಳ್ಳಿ ಗ್ರಾಮದ ಮಮ್ತಾಜ್ (38) ಶಾಖೀರ್ ಹುಸೇನ್ (48), ಮಹ್ಮದ್ ಆಸೀಫ್ (12) ಮೃತರು.

ತುಮಕೂರಿನಿಂದ ಮಧುಗಿರಿ ಕಡೆಗೆ ಹೋಗುವಾಗ ರಸ್ತೆಯಲ್ಲಿ ಮುಂದೆ ಸಾಗುತ್ತಿದ್ದ ಟ್ರ್ಯಾಕ್ಟರ್ ಗೆ ಬೈಕ್ ಡಿಕ್ಕಿಯಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಡಿವೈಎಸ್‌ಪಿ ಕೆಆರ್. ಚಂದ್ರಶೇಖರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತದೇಹಗಳನ್ನು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ. ದಟ್ಟ ಮಂಜಿನ ಕಾರಣ ದಾರಿ ಕಾಣದೇ ಅಪಘಾತ ಸಂಭವಿಸಿದೆ ಎನ್ನಲಾಗಿದ್ದು, ಹೆಚ್ಚಿನ ವಿವರ ನಿರೀಕ್ಷಿಸಲಾಗಿದೆ.

ಕೆಆರ್ ನಗರ ರೈಲ್ವೆ ರಕ್ಷಣಾ ಪಡೆ ತರಬೇತಿ ಕೇಂದ್ರ ಸ್ಥಾಪನೆ

ಕೇಂದ್ರ ಬೃಹತ್ ಕೈಗಾರಿಕೆ, ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭರವಸೆ



ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ ಅವರನ್ನು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭೇಟಿಯಾಗಿ, ಚರ್ಚೆ ನಡೆಸಿದ ವೇಳೆ ಜೆಡಿಎಸ್ ಹಿರಿಯ ನಾಯಕರಾದ ಬಂಡೆಪ್ಪ ಕಾಶೆಂಪೂರ್ ಹಾಗೂ ಸಾ.ರಾ.ಮಹೇಶ್ ಇದ್ದರು.

ನವದೆಹಲಿ,ಜ.7- ಮೈಸೂರು ಜಿಲ್ಲೆಯ ಕೆ.ಆರ್.ನಗರದಲ್ಲಿ ರೈಲ್ವೆ ರಕ್ಷಣಾ ಪಡೆಯ ತರಬೇತಿ ಕೇಂದ್ರ (RPF) ಸ್ಥಾಪಿಸುವುದಾಗಿ ಕೇಂದ್ರ ರೇಲ್ವೆ ಸಚಿವ ಅಶ್ವಿನಿ ವೈಷ್ಣವ ಅವರು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಭರವಸೆ ನೀಡಿದ್ದಾರೆ.

ನವದೆಹಲಿಯಲ್ಲಿ ಮಂಗಳವಾರ ಭೇಟಿಯಾದ ಕುಮಾರಸ್ವಾಮಿ ಅವರ ಮನವಿಗೆ ತತ್‌ಕ್ಷಣವೇ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಅವರು, ಇದು ಅತ್ಯಂತ ಮಹತ್ವದ ಪ್ರಸ್ತಾವನೆ. ಈ ಬಗ್ಗೆ ಖುದ್ದು ತಾವೇ ಗಮನ ಹರಿಸುವುದಾಗಿ ತಿಳಿಸಿದ್ದಾರೆ.

ಮನವಿ ಪತ್ರ ಸಲ್ಲಿಸಿದ ಕುಮಾರಸ್ವಾಮಿ ಅವರು, ರೇಲ್ವೆ ಸುರಕ್ಷತೆಗೆ ಮೈಸೂರು ಭಾಗದಲ್ಲಿ ಹೆಚ್ಚು ಆದ್ಯತೆ ಕೊಡಬೇಕಿದೆ. ಆ ಭಾಗದಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿದ್ದು, ಒಟ್ಟಾರೆ ರೈಲ್ವೆ ಸುರಕ್ಷತೆಯು ಮಹತ್ವದ ಅಂಶವಾಗಿದೆ ಎಂದು ತಿಳಿಸಿದರು. ಇದಕ್ಕೂ ಸಕಾರಾತ್ಮಕವಾಗಿ ಸ್ಪಂದಿಸಿದ ರೈಲ್ವೆ ಸಚಿವರು, ಈ ಬಗ್ಗೆ ತಕ್ಷಣವೇ ಗಮನ ಹರಿಸುವುದಾಗಿ ಭರವಸೆ ನೀಡಿದರು.

ದೇವೇಗೌಡರು ಪ್ರಧಾನಿಯಾಗಿದ್ದಾಗ ಕೆ.ಆರ್. ನಗರದಲ್ಲಿದ್ದ ಹಳೆಯ ರೈಲು ನಿಲ್ದಾಣವನ್ನು ಬೇರೆಡೆಗೆ ಸ್ಥಳಾಂತರ ಮಾಡಲಾಗಿತ್ತು. ಹಳೆಯ ನಿಲ್ದಾಣದ ಜಾಗ ಹಾಗೆಯೇ ಖಾಲಿ ಉಳಿದಿದ್ದು, ಭೂಸ್ವಾಧೀನದ ಸಮಸ್ಯೆ ಇಲ್ಲ ರೈಲ್ವೆ ರಕ್ಷಣಾ ಪಡೆಯ ತರಬೇತಿ ಶಾಲೆ ಬಂದರೆ ಬೃಹತ್ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಆಗುತ್ತದೆ. ಸ್ಥಳೀಯ ಯುವಕರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ದುಡಿಮೆಗೆ ಅವಕಾಶ ಲಭ್ಯವಾಗುತ್ತದೆ. ಮೈಸೂರು ಭಾಗದ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ವಿವರಿಸಿದ ಕುಮಾರಸ್ವಾಮಿ, ರಾಮನಗರ- ಚನ್ನಪಟ್ಟಣ ನಡುವೆ ರೈಲ್ವೆ ಲೆವೆಲ್ ಕ್ರಾಸಿಂಗ್, ರೈಲ್ವೆ ಮೇಲು ಸೇತುವೆ(ಫ್ಲೈಓವರ್) ನಿರ್ಮಾಣ, ಬೆಂಗಳೂರು-ಮಂಗಳೂರು ನಡುವಿನ ರೇಲ್ವೆ ಮಾರ್ಗದ ಸಕಲೇಶಪುರ ರೈಲು ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಸೇರಿದಂತೆ ರಾಜ್ಯದಲ್ಲಿ ಬಾಕಿ ಇರುವ ವಿವಿಧ ರೇಲ್ವೆ ಯೋಜನೆಗಳನ್ನು ಕ್ಷಿಪ್ರಗತಿಯಲ್ಲಿ ಕಾರ್ಯಗತಗೊಳಿಸುವ ಬಗ್ಗೆಯೂ ಚರ್ಚಿಸಿದರು.

ಹೆಚ್‌ಡಿಕೆ ಇತರೆ ಮನವಿಗಳು: ಚನ್ನಪಟ್ಟಣ - ಬೆಂಗಳೂರು - ಮೈಸೂರು ಭಾಗದಲ್ಲಿ ಪ್ರಮುಖವಾದ ಎಲ್ಲಾ ರೈಲುಗಳ ನಿಲುಗಡೆ. ಹಾಸನ, ಮಂಗಳೂರು ಒಳಗೊಂಡ ಮುಂಬಯಿ - ಬೆಂಗಳೂರು - ಮುಂಬಯಿ ಮಾರ್ಗದಲ್ಲಿ ಹೊಸ ರೈಲಿಗೆ ಮಂಜೂರು. ಮದ್ದೂರು ಮತ್ತು ಮಂಡ್ಯದಲ್ಲಿ ಬೆಂಗಳೂರು - ಮಂಗಳೂರು - ಮುರುಡೇಶ್ವರ ನಡುವೆ ಸಂಚರಿಸುವ 16585 ರೈಲು ನಿಲುಗಡೆ. ಕೊಪ್ಪಳ ಜಿಲ್ಲೆಯಲ್ಲಿ ಹೊಸ ಬ್ರಾಡ್‌ಗೇಜ್ ರೈಲ್ವೆ ಮಾರ್ಗಗಳ ಮಂಜೂರಾತಿ. ಹೆಜ್ಜಾಲ- ಕನಕಪುರ - ಮಳವಳ್ಳಿ - ಕೊಳ್ಳೇಗಾಲ - ಯಳಂದೂರು - ಚಾಮರಾಜನಗರ ರೈಲು ಮಾರ್ಗಕ್ಕೆ ಶೀಘ್ರ ಅನುಮತಿ. ಹೀಗೆ ರಾಜ್ಯಕ್ಕೆ ಸಂಬಂಧಪಟ್ಟ ಎಲ್ಲಾ ಮನವಿಗಳಿಗೂ ರೈಲ್ವೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಕರ್ನಾಟಕದ ಅಭಿವೃದ್ಧಿಗೆ ನರೇಂದ್ರ ಮೋದಿ ಅವರ ಸರ್ಕಾರ ಬದ್ಧವಾಗಿದೆ ಎಂದು ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

ಉಕ್ಕು ಮತ್ತು ಅದಿರು ಸಾಗಾಣಿಕೆಗೆ ಸಹಕಾರ: ದೇಶಾದ್ಯಂತ ಉಕ್ಕು ಮತ್ತು ಅದಿರು ಸಾಗಾಣಿಕೆಗೆ ರೈಲ್ವೆ ಸಂಪೂರ್ಣ ಸಹಕಾರ ನೀಡುತ್ತದೆ ಎಂದು ಉಕ್ಕು ಸಚಿವರಿಗೆ ರೈಲ್ವೆ ಸಚಿವರು ಭರವಸೆ ನೀಡಿದ್ದಾರೆ. ರೈಲ್ವೆ ವಶದಲ್ಲಿರುವ ಖಾಲಿ ಜಾಗದಲ್ಲಿ ಅದಿರು ಸಾಗಾಣಿಕೆಗೆ ಪೈಪ್‌ಲೈನ್ ನಿರ್ಮಾಣಕ್ಕೆ ಅವಕಾಶ, ಅದಿರು ಮತ್ತು ಉಕ್ಕು ಸಾಗಾಣಿಕೆಗೆ ಹೆಚ್ಚುವರಿ ರಾಕ್‌ಗಳನ್ನು ಒದಗಿಸಬೇಕು ಎಂಬ ಮನವಿಗೂ ಸ್ಪಂದಿಸಿದರು ಎಂದು ಹೇಳಿದ್ದಾರೆ.

> ರೈಲ್ವೆ ರಕ್ಷಣಾ ಪಡೆ ತರಬೇತಿ ಕೇಂದ್ರ ಸ್ಥಾಪನೆಗೆ ಕೇಂದ್ರ ಸರ್ಕಾರ 150ರಿಂದ 200 ಕೋಟಿ ಹೂಡಿಕೆ ಮಾಡಲಿದೆ. ಪ್ರತೀ ವರ್ಷ 600 ಮಂದಿಗೆ ತರಬೇತಿ ದೊರೆಯಲಿದೆ. ಈ ಮೂಲಕ ಮೈಸೂರು ಅದರಲ್ಲೂ ಕೆ.ಆರ್.ನಗರ ತಾಲೂಕು ಅಭಿವೃದ್ಧಿಗೆ ದೊಡ್ಡ ಕೊಡುಗೆ ಸಿಕ್ಕಂತಾಗುತ್ತದೆ. ಸ್ಥಳೀಯರಿಗೆ ಉದ್ಯೋಗ ಲಭಿಸಲಿದೆ. ಈ ನಿಟ್ಟಿನಲ್ಲಿ ಅತೀವ ಆಸಕ್ತಿಯೊಂದಿಗೆ ಪ್ರಯತ್ನ ನಡೆಸಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.
>
> -ಸಾ.ರಾ.ಮಹೇಶ್, ಮಾಜಿ ಸಚಿವ

ಕಿರನೆಲ್ಲಿ ಶಾಲೆಗೆ ವಿಶೇಷ ಅತ್ಯುತ್ತಮ ಪ್ರಶಸ್ತಿ



ಕಾರ್ಯಕ್ರಮದಲ್ಲಿ ಉರ್ದು ಶಾಲೆಯ ದಯಾನಂದ್ ಅವರನ್ನು ಸನ್ಮಾನಿಸಲಾಯಿತು.

ಕಂಪಲಾಪುರ, ಜ.7– ಕಂಪಲಾಪುರ ಕ್ಲಸ್ಟರ್‌ನ ಕಿರನೆಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ತಾಲೂಕು ವಿಶೇಷ ಅತ್ಯುತ್ತಮ ಶಾಲಾ ಪುರಸ್ಕಾರ ಲಭಿಸಿದೆ.

ಸಮೀಪದ ಕಿರನೆಲ್ಲಿ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ಕ್ಲಸ್ಟರ್‌ನ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ, 2024–25ನೇ ಸಾಲಿನ ಅತ್ಯುತ್ತಮ ಶಾಲಾ ಶಿಕ್ಷಕ ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಯಿತು.

ತಾಲೂಕಿನಲ್ಲಿ ಇದೇ ಪ್ರಥಮ ಬಾರಿಗೆ ಇಂತಹ ಕಾರ್ಯಕ್ರಮ ಆಯೋಜಿಸಲಾಗಿದ್ದು, ಅತ್ಯುತ್ತಮ ಪುರಸ್ಕಾರ ಪ್ರಶಸ್ತಿ ಸುಂಡವಾಳು ಶಾಲೆಗೆ ಲಭಿಸಿದೆ. ಕಿರಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಹರಿಲಾಪುರ ಶಾಲೆಗೆ ಶಾಲೆ ಪ್ರಶಸ್ತಿ ಲಭಿಸಿದೆ.

ಅತ್ಯುತ್ತಮ ಶಾಲಾ ಶಿಕ್ಷಕ ಪುರಸ್ಕಾರ: ನಿಲುಫರ್ (ಬೆಕ್ಕಾ ಕಿ.ಪ್ರಾ.ಶಾಲೆ), ದಯಾನಂದ್ (ಉರ್ದು ಶಾಲೆ ಕಂಪಲಾಪುರ) ದಿನೇಶ್ ಆರಾಧ್ಯ (ಆರ್.ತುಂಗ ಶಾಲೆ). ಸರ್ಕಾರಿ ನೌಕರರ ಸಂಘದ ನಿರ್ದೇಶಕ ದೇವರಾಜ್ ಅವರನ್ನು ಗಣ್ಯರು ಸನ್ಮಾನಿಸಿದರು.

ಈ ವೇಳೆ ಡಯಟ್ ಪ್ರಾಂಶುಪಾಲ ನಾಗರಾಜಯ್ಯ, ಬಿಇಒ ಡಿ.ಎನ್. ರವಿಪ್ರಸನ್ನ, ಕ್ಷೇತ್ರ ಸಮನ್ವಯಾಧಿಕಾರಿ ಶಿವರಾಜ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಪ್ರಶಾಂತ್, ಸಿಆರ್‌ಪಿ ಸುದರ್ಶನ್, ಕಿರನೆಲ್ಲಿ ಶಾಲೆ ಮುಖ್ಯ ಶಿಕ್ಷಕ ಶ್ರೀಧರ್ ಸೇರಿದಂತೆ ಕ್ಲಸ್ಟರ್‌ನ ಎಲ್ಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಜರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ

ಕೋಟೆಯಲ್ಲಿ ಅಮಿತ್ ಶಾ ವಿರುದ್ಧ ಬೃಹತ್ ಪ್ರತಿಭಟನೆ

ಹೆಚ್.ಡಿ.ಕೋಟೆ, ಜ.7– ಡಾ.ಬಿ.ಆರ್. ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ಪ್ರಗತಿಪರ ಸಂಘಟನೆಗಳು ಹಾಗೂ ಪಟ್ಟಣದ ಸಿದ್ದಪ್ಪಾಜಿ ರಸ್ತೆ ನಿವಾಸಿಗಳು ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ಸಿದ್ದಪ್ಪಾಜಿ ರಸ್ತೆಯಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಪ್ರತಿಭಟನಾನಿರತರು, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬಾಪೂಜಿ ಸರ್ಕಲ್ ಬಳಿ ಮಾನವ ಸರಪಳಿ ನಿರ್ಮಿಸಿ, ಅಮಿತ್ ಶಾ ಪ್ರತಿಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಮೆರವಣಿಗೆಯಲ್ಲಿ ಮಿನಿ ವಿಧಾನಸೌಧಕ್ಕೆ ತೆರಳಿ ತಹಸೀಲ್ದಾರ್ ಶ್ರೀನಿವಾಸ್ ಅವರಿಗೆ ಮನವಿ ಸಲ್ಲಿಸಿದರು.

ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಸಮಾನತೆ, ಸಹಬಾಳ್ವೆ ಭ್ರಾತೃತ್ವ, ಜಾತ್ಯತೀತತೆ, ಧರ್ಮ ನಿರಪೇಕ್ಷ ಸಂವಿಧಾನವನ್ನು ದೇಶಕ್ಕೆ ನೀಡಿದ್ದಾರೆ. ಸಂವಿಧಾನದ ಆಶಯಗಳು



ಅಮಿತ್ ಶಾ ವಿರುದ್ಧ ಕೋಟೆಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಸ್ವಾತಂತ್ರ್ಯ ಭಾರತವನ್ನು ಈವರೆಗೂ ಮುನ್ನಡೆಸುತ್ತಾ ಬಂದಿದೆ. ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವುದು, ಕರ್ತವ್ಯವನ್ನು ಗೌರವಿಸುವುದು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಗೊಳಿಸುವುದು ಆಡಳಿತ ನಡೆಸುವ ಸರ್ಕಾರಗಳ ಕರ್ತವ್ಯವಾಗಿದೆ. ಆದರೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದು ಅವರ ವಿಕೃತ ಮನಸ್ಸಿಗೆ ಸಾಕ್ಷಿಯಾಗಿದೆ. ಅಮಿತ್ ಶಾ ಅವರು ಈ ಹಿಂದೆ ಗುಜರಾತ್‌ನಲ್ಲಿ ಕೋಮು ಸೌಹಾರ್ದತೆಗೆ ಬೆಂಕಿ ಇಟ್ಟಿದ್ದರು. ನ್ಯಾಯಾಧೀಶರ ಕೊಲೆ ಪ್ರಕರಣದಲ್ಲಿ ಅಪರಾಧಿಯಾಗಿ ಗಡಿಪಾರು ಆಗಿದ್ದವರು ಸಂಸದರಾಗಲು ಅರ್ಹತೆ ಇಲ್ಲದೆ ಜೈಲಿನಲ್ಲಿರಬೇಕಾದವರು ಇಂದು ಕೇಂದ್ರ ಗೃಹಮಂತ್ರಿಯಾಗಿದ್ದಾರೆ. ಕೂಡಲೇ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸಿ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಆದಿ ಕರ್ನಾಟಕ ಮಹಾಸಭಾ ಮಾಜಿ ಅಧ್ಯಕ್ಷ ಮುದ್ದುಮಲ್ಲಯ್ಯ ಮಾತನಾಡಿದರು. ಜೈ ಭೀಮ್ ಆಟೋ ಚಾಲಕರು ತಮ್ಮ ವಾಹನಗಳೊಂದಿಗೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ವರ್ತಕರು ಅಂಗಡಿ ಮುಂಗಟ್ಟು ಬಂದ್ ಮಾಡಿ ಬಂದ್‌ಗೆ ಬೆಂಬಲ ಸೂಚಿಸಿದ್ದರು. ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಪ್ರತಿಭಟನೆಯಲ್ಲಿ ದಲಿತ ಸಮುದಾಯದ ಮುಖಂಡರಾದ ಗೋಪಾಲ್, ಸೋಮಣ್ಣ, ಮಂಜುನಾಥ, ನರಸಿಂಹಮೂರ್ತಿ, ಚಾ.ನಂಜುಂಡ ಮೂರ್ತಿ, ಪುಟ್ಟಮಾದು, ಕುಮಾರ, ನಂಜಪ್ಪ, ನಾಗರಾಜು, ಮಹೇಶ, ಮಹದೇವು, ರುದ್ರ, ತೇಜು, ಕೃಷ್ಣ, ಚೆನ್ನ, ವೆಂಕಟೇಶ್, ಲಾರಿ ಪ್ರಕಾಶ, ಹಾನಗಟ್ಟ ದೇವರಾಜು, ಆಕಾಶ್, ಬಸವರಾಜು, ಹರ್ಷ, ಜೀವನ್, ಗೌತಮ್, ಸಿದ್ಧಾರ್ಥ್, ಸಂತು, ಜಯಂತ್, ವೇಣುಗೋಪಾಲ್, ಕಿಟ್ಟಿ, ಮಣಿ, ಚೆಲುವ, ಸಿದ್ದರಾಜು, ಸಲೀಂ, ಅನೀಫ್, ಫಯಾಜ್, ಅವೀಸ್, ಜಾವೀದ್, ಶಿವಶಂಕರ್, ಮುದ್ದುಮಲ್ಲಯ್ಯ, ಬಂಗಾರಯ್ಯ, ಸಿಂಗಯ್ಯ, ವೆಂಕಟೇಶ್, ಕಲೀಮ್, ಅಕ್ಬರ್ ಪಾಷಾ, ಮಲ್ಲೇಶ್, ಶಿವಲಿಂಗಪ್ಪ ಚೆಲುವರಾಜು, ಜೀವಿಕ ಬಸವರಾಜು, ರುದ್ರ, ರಾಜೇಶ್, ಪಾರ್ಥಸಾರಥಿ ಸೇರಿದಂತೆ ಮಹಿಳೆಯರು ಭಾಗವಹಿಸಿದ್ದರು.

ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥಕ್ಕೆ ಸ್ವಾಗತ



ಸುತ್ತೂರು ಜಾತ್ರೆ ಪ್ರಚಾರ ರಥಕ್ಕೆ ಗ್ರಾಪಂ ಅಧ್ಯಕ್ಷ ಮಂಜಪ್ಪ ಸ್ವಾಗತ ಕೋರಿದರು.

ಸಾಲಿಗ್ರಾಮ, ಜ.7– ಇಲ್ಲಿನ ಹಾಸನ–ಮೈಸೂರು ರಾಜ್ಯ ಹೆದ್ದಾರಿಯ ಭೇರ್ಯ ಗ್ರಾಮಕ್ಕೆ ಆಗಮಿಸಿದ ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥಕ್ಕೆ ಗ್ರಾಮದಲ್ಲಿ ಗ್ರಾಪಂ ಅಧ್ಯಕ್ಷ ಮಂಜಪ್ಪ ಸ್ವಾಗತಿಸಿದರು.

ವೀರಶೈವ ಮಹಾಸಭಾ ತಾಲೂಕು ಉಪಾಧ್ಯಕ್ಷ ಬಿ.ಎಂ.ಪ್ರಕಾಶ್ ಮಾತನಾಡಿ, ಈ ಹಿಂದೆ ಕಪಿಲಾ ನದಿ ತೀರದ ಶ್ರೀಸುತ್ತೂರು ಕ್ಷೇತ್ರದಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳು ವೀರಸಿಂಹಾಸನ ಮಠ ಸ್ಥಾಪಿಸಿದ್ದು, ಇದೀಗ ಕೋಟ್ಯಾಂತರ ಭಕ್ತರ ಮೆಚ್ಚುಗೆ ಗಳಿಸಿದೆ. ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ನಾವೆಲ್ಲರೂ ಭಾಗವಹಿಸಿ, ದಿವ್ಯ ಸಾನಿಧ್ಯ ವಹಿಸುವ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಆಶೀರ್ವಾದ ಪಡೆಯೋಣ ಎಂದರು.

ಗ್ರಾಪಂ ಸದಸ್ಯ ಬಿ.ಪಿ.ಪ್ರಕಾಶ್ ಮಾತನಾಡಿದರು. ವೀರಶೈವ ಸಮಾಜದ ಯೂತ್ ಅಧ್ಯಕ್ಷ ಅನಿಲ್, ಗ್ರಾಪಂ ಲೆಕ್ಕ ಸಹಾಯಕಿ ಅಶ್ವಿನಿ, ಸದಸ್ಯರಾದ ಪ್ರಕಾಶ್, ಬಿ.ಕೆ.ಕುಮಾರ್, ಜಯಕೀರ್ತಿ, ಚಂದು, ರಕ್ಷಿತ್, ನಿವೃತ್ತ ಶಿಕ್ಷಕ ನಿಂಗಪ್ಪ, ವಿಜಯ್, ಟೈಲರ್ ನಿಂಗನಾಯಕ, ಜಯಂತ್, ಲೋಕೇಶ್, ಮಹೇಶ್, ಹರೀಶ್, ನ್ಯಾಯಬೆಲೆ ವೆಂಕಟೇಶ್, ಗಿರೀಶ್, ವೀರಶೈವ ಮುಖಂಡರು ಹಾಗೂ ಗ್ರಾಮಸ್ಥರು ಪ್ರಚಾರ ರಥದಲ್ಲಿದ್ದ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಮೂರ್ತಿಗೆ ಪುಷ್ಪಾರ್ಚನೆ ಮಾಡಿದರು.

ಬೀದಿಗೆ ಬಿದ್ದಿದ್ದ ಹಂದಿಜೋಗಿ ಕುಟುಂಬಗಳಿಗೆ

ಆಹಾರ ಸಾಮಗ್ರಿ, ಮನೆ ಕೀ ಹಸ್ತಾಂತರ

ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಜಂಟಿ ನಿರ್ದೇಶಕ ರಂಗೇಗೌಡ ಭೇಟಿ

ನಂಜನಗೂಡು, ಜ.7– ಜಮೀನಿನ ಮಾಲೀಕ ಹೊರ ಹಾಕಿದ್ದರಿಂದ ಗುಡಿಸಲು ಕಳೆದುಕೊಂಡು ನೆಲೆ ಇಲ್ಲದೆ ಬೀದಿಗೆ ಬಿದ್ದು ರಸ್ತೆಬದಿ ಜೀವನ ನಡೆಸುತ್ತಿರುವ ತಾಲೂಕಿನ ಹೊರಳವಾಡಿ ಹೊಸೂರು ಗ್ರಾಮದ ಪರಿಶಿಷ್ಟ ಜಾತಿ ಹಂದಿಜೋಗಿ ಸಮುದಾಯದ ಎರಡು ಕುಟುಂಬಗಳನ್ನು ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಜಂಟಿ ನಿರ್ದೇಶಕ ರಂಗೇಗೌಡ ಭೇಟಿ ಮಾಡಿ ಆಹಾರ ಸಾಮಗ್ರಿ, ಮತ್ತು ಮನೆ ಕೀ ಹಸ್ತಾಂತರಿಸಿದರು.

ಈ ವೇಳೆ ಸಂತ್ರಸ್ತೆ ಎಲ್ಲಮ್ಮ ಮಾತನಾಡಿ, ನಾವು ಇದುವರೆಗೂ ಒತ್ತುವರಿ ಜಮೀನಿನಲ್ಲಿ ಜೀವಿಸುತ್ತಿದ್ದೇವು. ಜಮೀನಿನ ಮಾಲೀಕರ ಮೋಸದಿಂದಾಗಿ ನಮ್ಮ ಗುಡಿಸಲು ಕಳೆದುಕೊಂಡು ನೆಲೆ ಇಲ್ಲದೆ ರಸ್ತೆಬದಿ ಜೀವನ ನಡೆಸುವಂತಾಗಿದೆ. ಆದ್ದರಿಂದ ಜಮೀನಿನ ಸರ್ವೇ ಕಾರ್ಯ ನಡೆಸಿ ನಮಗೆ ನ್ಯಾಯ ಒದಗಿಸಬೇಕು. ನೆಲ ಕಳೆದುಕೊಂಡ ಜಾಗದಲ್ಲೇ ನಮಗೆ ನೆಲೆ ಒದಗಿಸಬೇಕು ಎಂದು ಮನವಿ ಮಾಡಿದರು.

ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಜಂಟಿ ನಿರ್ದೇಶಕ ರಂಗೇಗೌಡ ಮಾತನಾಡಿ, ಈಗಾಗಲೇ ತಾಲೂಕಿನ ಗೋಳೂರು ಗ್ರಾಮದ ಬಳಿಯ ವಿದ್ಯಾಪೀಠದಲ್ಲಿ



ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಜಂಟಿ ನಿರ್ದೇಶಕ ರಂಗೇಗೌಡ ಸಂತ್ರಸ್ತ ಹಂದಿಜೋಗಿ ಕುಟುಂಬಗಳಿಗೆ ಆಹಾರ ಸಾಮಗ್ರಿ, ಮನೆ ಕೀ ಹಸ್ತಾಂತರಿಸಿದರು.

ಕೌಶಲ್ಯಾಭಿವೃದ್ಧಿ ಇಲಾಖೆಗೆ ಸೇರಿದ 10 ಎಕರೆ ಪ್ರದೇಶದಲ್ಲಿ ವಿಶಾಲವಾದ 2 ಕೊಠಡಿಗಳನ್ನು ಸಿದ್ಧಪಡಿಸಿ, ನೀರಿನ ಸೌಲಭ್ಯ ಕಲ್ಪಿಸಿ ತಾತ್ಕಾಲಿಕ ನೆಲೆ ಒದಗಿಸಲಾಗಿದೆ. ಅಲ್ಲದೇ ಒಂದು ತಿಂಗಳ ಪಡಿತರ ಸಾಮಗ್ರಿ, ಹೊದಿಕೆಗಳನ್ನು ವಿತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ತಾಲೂಕು ಸಹಾಯಕ ನಿರ್ದೇಶಕ ಭೀಮರಾವ್ ವಡ್ಡಾರ್ ಮಾತನಾಡಿ, ಸಂತ್ರಸ್ತ ಕುಟುಂಬಗಳ ಬೇಡಿಕೆಯಂತೆ ಜಮೀನಿನ ಸರ್ವೇ ಕಾರ್ಯ ನಡೆಸಲು ಈಗಾಗಲೇ ಭೂಮಾಪನ ಇಲಾಖೆಗೆ ಪತ್ರ ಬರೆಯಲಾಗಿದೆ. ನಾಳೆ ಭೂಮಾಪನ ಇಲಾಖೆ ಅಧಿಕಾರಿಗಳು ಜಮೀನಿನ ಸರ್ವೇ ಕಾರ್ಯ ನಡೆಸಲಿದ್ದಾರೆ. ಈಗ ತಾತ್ಕಾಲಿಕವಾಗಿ ನೆಲೆ ಒದಗಿಸಲು ವಿದ್ಯಾಪೀಠದ ಬಳಿ ಇರುವ ಕೌಶಲಾಭಿವೃದ್ಧಿ ಇಲಾಖೆಯ ಕಟ್ಟಡದಲ್ಲಿ 2 ಕೊಠಡಿಗಳನ್ನು ಸಿದ್ಧಪಡಿಸಿ ಕೀ ಹಸ್ತಾಂತರಿಸಲಾಗಿದೆ. ಅಲ್ಲಿ ವಿಶಾಲ ಪ್ರದೇಶವಿದ್ದು ಹಂದಿ ಸಾಕಣೆ ನಡೆಸಬಹುದಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಶಾಶ್ವತ ನೆಲೆ ಕಲ್ಪಿಸಲು ಕ್ರಮ ವಹಿಸಲಾಗುವುದು ಎಂದರು.

ಈ ವೇಳೆ ಅಂಬೇಡ್ಕರ್ ಸೇನೆಯ ಮುಳ್ಳೂರು ಸ್ವಾಮಿ, ಶಿವರಾಜು ಸೇರಿದಂತೆ ಇತರರಿದ್ದರು.

ವಿದ್ಯಾರ್ಥಿಗಳು ಉತ್ತಮ ಅಧ್ಯಯನದ ಹವ್ಯಾಸ ರೂಢಿಸಿಕೊಳ್ಳಿ



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ತಿ.ನರಸೀಪುರ, ಜ.7– ವಿದ್ಯಾರ್ಥಿಗಳು ಪ್ರಾಥಮಿಕ ಹಂತದಲ್ಲೇ ಉತ್ತಮ ಅಧ್ಯಯನ ಮಾಡುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದು ನಾರಾಯಣ ಆಸ್ಪತ್ರೆ ಮುಖ್ಯಸ್ಥೆ ನಿರ್ಮಲ ಮಾದಪ್ಪ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪಟ್ಟಣ ಸಮೀಪದ ಹೆಮ್ಮರಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮೈಸೂರಿನ ನಾರಾಯಣ ಹೆಲ್ತ್‌ನ ಸಿಆರ್‌ಎಫ್ ನಿಧಿಯಿಂದ ಆರ್‌ಎಫ್‌ಸಿ ಸರ್ಕಾರೇತರ ಸಂಸ್ಥೆಯ ಮೂಲಕ ನೀಡಲಾದ ವಿಜ್ಞಾನ ಪ್ರಯೋಗಾಲಯ ಮತ್ತು ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಸೋಲಾರ್ ಪ್ಯಾನೆಲ್ ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ನಮ್ಮ ಸಂಸ್ಥೆ ಸರ್ಕಾರಿ ಶಾಲೆಗಳಿಗೆ ಅಗತ್ಯ ನೆರವು ನೀಡುತ್ತಾ ಬಂದಿದ್ದು, ಇಂದು ಈ ಶಾಲೆಗೆ ಸೌಲಭ್ಯ ಒದಗಿಸಲಾಗಿದೆ. ಮುಂದಿನ ದಿನಗಳಲ್ಲಿ ತಾಲೂಕಿನಲ್ಲಿ ಅಗತ್ಯವಿರುವ ಶಾಲೆಗಳಿಗೂ ಸೌಲಭ್ಯ ನೀಡುವುದಾಗಿ ಭರವಸೆ ನೀಡಿದರು.

ಪ್ರತಿಯೊಬ್ಬರೂ ಆರೋಗ್ಯ ಕಾಪಾಡಿಕೊಳ್ಳಲು ವಾಕಿಂಗ್ ಮಾಡುವುದು ಹಾಗೂ 30 ವರ್ಷದ ನಂತರ ಪ್ರತಿವರ್ಷ ಒಮ್ಮೆಯಾದರೂ ಆರೋಗ್ಯ ತಪಾಸಣೆ ಮಾಡಿಕೊಳ್ಳುವ ಅಗತ್ಯವಿದೆ. ತಪಾಸಣೆ ಬಗ್ಗೆ ಭಯ ಬಿಟ್ಟು ಆರೋಗ್ಯದ ಕಾಳಜಿ ವಹಿಸುವಂತೆ ಸಲಹೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ ಅವರು ಶಾಲೆಗೆ ಕೊಡುಗೆ ನೀಡಿದ ನಾರಾಯಣ ಹೆಲ್ತ್ ಸಂಸ್ಥೆಗೆ ಅಭಿನಂದನೆ ಸಲ್ಲಿಸಿ, ವಿದ್ಯಾರ್ಥಿಗಳಿಗೆ ಸದ್ಬಳಕೆ ಮಾಡಿಕೊಂಡು ಅಧ್ಯಯನ ಮಾಡುವಂತೆ ತಿಳಿಸಿದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ಪುರಸಭಾ ಸದಸ್ಯ ಹೆಳವರಹುಂಡಿ ಸೋಮಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ನಾರಾಯಣ ಹೆಲ್ತ್ ಸಂಸ್ಥೆಯ ಸಂತಕುಮಾರ್, ರೈಟ್ ಫಾರ್ ಕಾಸ್ ಸಂಸ್ಥೆ ಅಧ್ಯಕ್ಷ ಮಧು ಪಿ.ಕೃಷ್ಣಮೂರ್ತಿ, ಬಿಆರ್‌ಪಿ ಕೆ.ಪಿ.ಮಹಾದೇವಸ್ವಾಮಿ, ಸಿರಿದೇವಿ, ಸಿಆರ್‌ಪಿ ನವೀನ್, ಶಾಲಾ ಮತ್ತು ಸದಸ್ಯರು, ಶಾಲೆ ಮುಖ್ಯ ಶಿಕ್ಷಕಿ ಮಂಜುಳ, ಶಿಕ್ಷಕರಾದ ಸುಮಾ, ಪ್ರಸನ್ನ ಮೂರ್ತಿ, ಮಹಾದೇವಶೆಟ್ಟಿ, ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶಾಂತ ಕುಮಾರ್, ಗ್ರಾಮದ ಮುಖಂಡರಾದ ರೇವಣ್ಣ, ಬಸಪ್ಪ ಕಿಶೋರ್ ಹಾಜರಿದ್ದರು.

ಇಂದಿನಿಂದ ನಾಯಕತ್ವ ತರಬೇತಿ ಶಿಬಿರ



ನಂಜನಗೂಡು, ಜ.7– ಮಕ್ಕಳಲ್ಲಿ ದೇಶಪ್ರೇಮ, ಸೋದರತ್ವ ಭಾವನೆ, ಜಾತ್ಯಾತೀತತೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವ ಸಲುವಾಗಿ ಭಾರತ ಸೇವಾದಳದಿಂದ ಶ್ರೀಕಂಠೇಶ್ವರ ದೇವಾಲಯದ ಗಿರಿಜಾ ಕಲ್ಯಾಣ ಮಂಟಪದಲ್ಲಿ ಜ.8ರಿಂದ 11ರವರೆಗೆ ಜಿಲ್ಲಾಮಟ್ಟದ ಮಕ್ಕಳ ನಾಯಕತ್ವ ತರಬೇತಿ ಶಿಬಿರ ಆಯೋಜಿಸಲಾಗಿದೆ ಎಂದು ಸೇವಾದಳ ತಾಲೂಕು ಸಮಿತಿ ಅಧ್ಯಕ್ಷ ಕೃಷ್ಣಮೂರ್ತಿ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ ಸೇವಾದಳ ಜಿಲ್ಲಾ ಸಮಿತಿ ಮೈಸೂರು ಮತ್ತು ತಾಲೂಕು ಸಮಿತಿ ನಂಜನಗೂಡು ಹಾಗೂ ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಜ.8 ರಂದು ಬೆಳಗ್ಗೆ 9 ಗಂಟೆಗೆ ರಾಷ್ಟ್ರ ಧ್ವಜಾರೋಹಣವನ್ನು ಶಾಸಕ ದರ್ಶನ್ ನೆರವೇರಿಸಲಿದ್ದಾರೆ. ಜಿಲ್ಲಾ ಮತ್ತು ತಾಲೂಕು ಮಟ್ಟದ ಪದಾಧಿಕಾರಿಗಳು ಹಾಗೂ ಮುಖಂಡರು ಉಪಸ್ಥಿತರಿರುತ್ತಾರೆ. ಜ.9ರಂದು ನಂಜನಗೂಡು ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಗಣ್ಯರಿಂದ ರಾಷ್ಟ್ರಪ್ರೇಮ ಭಕ್ತಿಗೀತೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಭಾತ್ ಮೇರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಲ್ಲದೆ ನಿತ್ಯ ಯೋಗ, ವ್ಯಾಯಾಮ, ನಾಯಕತ್ವ ಗುಣದ ಅವಶ್ಯಕತೆ, ಆರೋಗ್ಯ, ಮಾನಸಿಕ ಬೆಳವಣಿಗೆ, ರಾಷ್ಟ್ರಾಭಿಮಾನ ಮತ್ತು ರಾಷ್ಟ್ರಪ್ರೇಮದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಬೋಧನೆ ಮಾಡಲಾಗುತ್ತದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಉಪಾಧ್ಯಕ್ಷ ಸತೀಶ್ ಈರೇಗೌಡನಹುಂಡಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಎಂ.ಶಿವಕುಮಾರ್, ರವಿಕುಮಾರ್, ಎಂ.ಎಸ್.ಶ್ರೀಪತಿ, ಹನುಮಂತರಾಜು ಉಪಸ್ಥಿತರಿದ್ದರು.

ಶಾಸಕ ಅನಿಲ್‌ರಿಂದ ಕ್ಯಾಲೆಂಡರ್ ಬಿಡುಗಡೆ



ಸರಗೂರು, ಜ.7– ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ರತ್ನಾಕರ ವಾಲ್ಮೀಕಿ ಯುವ ವೇದಿಕೆಯ ನೂತನ ಕ್ಯಾಲೆಂಡರ್ ಅನ್ನು ಶಾಸಕ ಅನಿಲ್ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಶಾಸಕರು, ಹಿಂದೂ ಧರ್ಮದ ಪ್ರಮುಖ ಗ್ರಂಥಗಳಲ್ಲಿ ಒಂದಾದ ರಾಮಾಯಣ ಮಹಾಕಾವ್ಯ ಬರೆದಿದ್ದರಿಂದ ರತ್ನಾಕರ ವಾಲ್ಮೀಕಿ ದೇಶ ಕಂಡ ಶ್ರೇಷ್ಠ ಕವಿ. ಇಂತಹ ಮಹಾನ್ ಕವಿಗಳ ಆದರ್ಶಗಳನ್ನು ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದರು.

ರತ್ನಾಕರ ವಾಲ್ಮೀಕಿ ಯುವ ವೇದಿಕೆ ಸದಸ್ಯ ಎಂ.ರವಿಕುಮಾರ್ ಮಾತನಾಡಿ, ಕಳೆದ 12 ವರ್ಷಗಳಿಂದ ಸಂಘ ಸಮಾಜಿಕ ಕಾರ್ಯಕ್ರಮಗಳ ಜೊತೆಗೆ ಸಾಮರಸ್ಯ ಕಾಪಾಡುವು ಅರಿವನ್ನು ಜನರಲ್ಲಿ ಮೂಡಿಸುತ್ತಿದೆ. ವಾಲ್ಮೀಕಿ ಅವರು ಬೇಡ ಕುಲದಲ್ಲಿ ಜನಿಸಿದ ಕವಿಯಾಗಿದ್ದು, ಆದರ್ಶ ಶಿಕ್ಷಕನಾಗಿ, ಪ್ರಜೆಗಳನ್ನು ಯಾವ ರೀತಿ ರಕ್ಷಿಸಬೇಕು. ಯಾವ ರೀತಿ ಆಡಳಿತ ನಡೆಸಬೇಕು ಎಂಬುದರ ಚಿತ್ರಣವನ್ನು ರಾಮಾಯಣದ ಮೂಲಕ ಇಡೀ ಜಗತ್ತಿಗೆ ತಿಳಿಸಿದವರು. ಅಜ್ಞಾನದಿಂದ ಸುಜ್ಞಾನದ ಕಡೆಗೆ ಸಾಗುವ ದಾರಿ ತೋರಿಸಿಕೊಟ್ಟ ಮಹಾತ್ಮರು ಎಂದು ಗುಣಗಾನ ಮಾಡಿದರು.

ಈ ವೇಳೆ ನಾಯಕ ಸಮಾಜದ ಯಜಮಾನರಾದ ಎಸ್.ಎನ್.ನವೀನ್ ಕುಮಾರ್, ಪಪಂ ಸದಸ್ಯ ಶ್ರೀನಿವಾಸ್, ಮುಖಂಡರಾದ ಶಂಭುಲಿಂಗ ನಾಯಕ, ಜಿಪಂ ಮಾಜಿ ಸದಸ್ಯ ಪಿ.ರವಿ, ಭೀಮರಾಜು, ಉದ್ಯಮಿ ನಿಂಗರಾಜು, ವೇದಿಕೆ ಅಧ್ಯಕ್ಷ ವಿಜಯಪ್ರಕಾಶ್ ನಾಯಕ, ರಾಜ್ಯದ್ಯಕ್ಷ ದೇವರಾಜು, ಎಸ್‌ಐ ನಂದೀಶ್ ಸೇರಿದಂತೆ ಸಂಘದ ಪಧಾದಿಕಾರಿಗಳು ಹಾಗೂ ಸರ್ವ ಸದಸ್ಯರು ಹಾಜರಿದ್ದರು.

ದಿನಗೂಲಿ ನೌಕರರಿಗೆ ಸಮವಸ್ತ್ರ ವಿತರಣೆ



ಸರಗೂರು ತಾಲೂಕು ಪ್ರಾದೇಶಿಕ ವಲಯದ ಕಳ್ಳ ಬೇಟೆ ತಡೆ ಶಿಬಿರ ಹಾಗೂ ಆನೆ ತಡೆ ಶಿಬಿರದ 25 ದಿನಗೂಲಿ ನೌಕರರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು ತಮ್ಮ ತಂದೆ ದಿ.ಪಿ.ಶಿವಪ್ಪ ಅವರ 24ನೇ ಪುಣ್ಯಸ್ಮರಣೆ ಅಂಗವಾಗಿ 2 ಜೊತೆ ಸಮವಸ್ತ್ರಗಳನ್ನು ವಿತರಿಸಿದರು. ಈ ವೇಳೆ ಶ್ರೀಕಾಂತ್ ಅವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಅಭಿನಂದಿಸಿದರು. ಈ ವೇಳೆ ಪಿ.ಶಿವಪ್ಪ ಅವರ ಪತ್ನಿ ರತ್ನಮ್ಮ, ಸರಸ್ವತಿ ಶ್ರೀಕಾಂತ್, ನೂತನ್ ಎಸ್.ಆರ್ಯ, ದೊಡ್ಡಹುಂಡಿ ಕಿರಣ್, ಸರಗೂರು ವಲಯ ಅರಣ್ಯ ಅಧಿಕಾರಿ ಹನುಮಂತರಾಜು, ಉಪವಲಯ ಅರಣ್ಯ ಅಧಿಕಾರಿಗಳಾದ ಅಭಿಲಾಷ್, ಅಕ್ಷಯ್ ಕುಮಾರ್, ಪ್ರದೀಪ್, ಕಿರಣ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

ಕಸಬಾ ಪಿಎಸಿಎಸ್‌ನಿಂದ ಕಿರಗಸೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಬಿಡುಗಡೆಗೊಳಿಸಿ

ಪ್ರತ್ಯೇಕ ಸಂಘ ರಚನೆಗೆ ಅವಕಾಶ ನೀಡದಿದ್ದರೇ ಹೋರಾಟ

ಕಾಂಗ್ರೆಸ್ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ರಮೇಶ್ ಎಚ್ಚರಿಕೆ

ತಿ.ನರಸೀಪುರ, ಜ.7– ಕಸಬಾ ಕೃಷಿ ಪತ್ತಿನ ಸಹಕಾರ ಸಂಘದಿಂದ ಕಿರಗಸೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳನ್ನು ಬಿಡುಗಡೆ ಮಾಡಿ ಪ್ರತ್ಯೇಕ ಸಂಘ ರಚನೆಗೆ ಅವಕಾಶ ಮಾಡಿಕೊಡದಿದ್ದಲ್ಲಿ ಅಧಿಕಾರಿಗಳ ವಿರುದ್ಧ ಹೋರಾಟ ನಡೆಸಬೇಕಾಗುತ್ತದೆ ಎಂದು ಕಾಂಗ್ರೆಸ್ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ರಮೇಶ್ ಎಚ್ಚರಿಕೆ ನೀಡಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನಡೆದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಕಿರಗಸೂರು ಗ್ರಾಪಂನಲ್ಲಿ ಹುಣಸೂರು, ಬಿಲಿಗೆರೆಹುಂಡಿ, ಕಿರಗಸೂರು, ಕೂಡ್ಲೂರು, ಮನ್ನೇಹುಂಡಿ ಮತ್ತು ಡಣಾಯಕನಪುರ ಗ್ರಾಮದ ಗ್ರಾಮಸ್ಥರು ನಿಯೋಜಿತ ಕೃಷಿ ಪತ್ತಿನ ಸಹಕಾರ ಸಂಘವನ್ನು ನೋಂದಣಿ ಮಾಡುವ ಸಂಬಂಧ ಸಭೆ ಸೇರಿ ಪ್ರವರ್ತಕರನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಕಸಬಾ ಪಿಎಸಿಎಸ್‌ನಿಂದ 6 ಗ್ರಾಮಗಳನ್ನು ಬಿಡುಗಡೆಗೊಳಿಸುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಆದೇಶ ನೀಡಿದ್ದಾರೆ. ಆದರೆ ಸಂಘದ ಕಾರ್ಯದರ್ಶಿ ಡಿ.ಎಂ.ಶಿವಕುಮಾರ್ ಸೇರಿದಂತೆ ಆಡಳಿತ ಮಂಡಳಿ ತಡೆಯಾಜ್ಞೆ ತರುವ ಮೂಲಕ ಸಂಘ ರಚನೆಗೆ ಅಡ್ಡಗಾಲು ಹಾಕಿ ರೈತರಿಗೆ ಅನ್ಯಾಯ ಮಾಡಲು ಹೊರಟಿದೆ ಎಂದು ಆರೋಪಿಸಿದರು.



ಮುಖಂಡರ ಸಭೆಯಲ್ಲಿ ಎಂ.ರಮೇಶ್ ಮಾತನಾಡಿದರು.

ಬಿಲಿಗೆರೆಹುಂಡಿಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘ ರಚನೆಯಾಗಬೇಕೆಂಬುದು ಗ್ರಾಮಸ್ಥರು ಮತ್ತು ರೈತರ ಆಶಯವಾಗಿದೆ. ರಾಜ್ಯ ಸರ್ಕಾರ ಸಹ ಪ್ರತಿ ಗ್ರಾಪಂಗೆ ಪ್ರಾಥಮಿಕ ಸಹಕಾರ ಸಂಘ ರಚನೆಯಾಗಬೇಕೆಂದು 2017–18ರಲ್ಲೇ ಆದೇಶ ನೀಡಿದೆ. ಅಲ್ಲದೇ ಸಹಕಾರ ಸಂಘ ರಚನೆ ಮಾಡಲು ಬೇರೆ ಪಂಚಾಯಿತಿಯವರನ್ನು ಕರೆತಂದಿಲ್ಲ. ರೈತರಿಗೋಸ್ಕರ ಮಾಡುತ್ತಿರುವ ಸಹಕಾರ ಸಂಘಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ತಡೆಯಾಜ್ಞೆ ತರವಲ್ಲ: ಗ್ರಾಮದಲ್ಲಿ ಸಹಕಾರ ಸಂಘ ತೆರೆಯಲು ನಮ್ಮ ಗ್ರಾಮಗಳನ್ನು ಕಸಬಾ ಸಂಘದಿಂದ ಬಿಡುಗಡೆಗೊಳಿಸುವಂತೆ ಸಲ್ಲಿಸಿದ್ದ ಮನವಿಗೆ ಸ್ಪಂದನೆ ದೊರಕಿ ಸಹಾಯಕ ನಿಬಂಧಕರು ಕೆಲ ಗ್ರಾಮಗಳನ್ನು ಬಿಡುಗಡೆಗೊಳಿಸುವಂತೆ ಆದೇಶ ನೀಡುತ್ತಿದ್ದಂತೆ ಕಸಬಾ ಸಂಘದ ಕಾರ್ಯಕಾರಿ ಮಂಡಳಿ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಿರುವುದು ಸರಿಯೇ ಎಂದು ಪ್ರಶ್ನಿಸಿದ ಅವರು ಇವರು ಸಹಕಾರ ಸಂಘದ ಅಭಿವೃದ್ಧಿ ಮಾಡುತ್ತಾರೆಯೇ? ಇವರಿಂದ ರೈತರ ಪರ ಕೆಲಸ ಮಾಡಲು ಸಾಧ್ಯವೇ ಎಂದು ಕಿಡಿಕಾರಿದ ರಮೇಶ್ ಕಸಬಾ ಸಂಘದ ಸಿಇಓ ಡಿ.ಎಂ.ಶಿವಕುಮಾರ್ ಎಂಬಾತ ಬಿಲಿಗೆರೆಹುಂಡಿ ಸಂಘದ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ರಾಜಕೀಯ ಪ್ರೇರಿತರಾಗಿ ಪ್ರಥಮ ಸಭೆ ನಡೆಸಿಲ್ಲ. ಸುಳ್ಳು ಅಂಶ ನೀಡಿ ದಾಖಲೆ ಸೃಷ್ಟಿಸಿಕೊಂಡಿದ್ದಾರೆ ಎಂದು ದೂರು ನೀಡಿರುವುದು ಖಂಡನೀಯ ಎಂದು ಆರೋಪಿಸಿದರು.

ಪ್ರತ್ಯೇಕ ಸಹಕಾರ ಸಂಘದ ಅವಶ್ಯಕತೆ ಇದ್ದು ಈ ಸಂಬಂಧ ಸಿಎಂ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್‌ಸಿ ಡಾ.ಯತೀಂದ್ರ ಅವರಿಗೆ ಮನವಿ ಸಲ್ಲಿಸುತ್ತೇವೆ. ಕೂಡಲೇ ಸಂಬಂಧಪಟ್ಟವರು ಸಮಸ್ಯೆ ಸರಿಪಡಿಸಬೇಕು. ಇಲ್ಲದಿದ್ದಲ್ಲಿ ಹೋರಾಟದ ಮೂಲಕ ನಮ್ಮ ಹಕ್ಕು ಪಡೆಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.


ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್ ಮಾತನಾಡಿದರು. ಈ ವೇಳೆ ಬಿಲಿಗೆರೆಹುಂಡಿ ನಂಜುಂಡೇಗೌಡ, ಡಣಾಯಕನಪುರ ಚಿನ್ನಬುದ್ದಿ, ಕೂಡ್ಲೂರು ಶಿವನಂಜು, ಗ್ರಾಪಂ ಸದಸ್ಯ ಮಹದೇವ ಸ್ವಾಮಿ, ಮಹೇಶಾಚಾರಿ, ರಾಜೀವ, ಬಿಜೆಪಿ ಮಹದೇವಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಮಹದೇವ, ಮಹದೇವನಾಯಕ, ಏಳುಮಲೆ ಮಂಜು, ಮನ್ನೇಹುಂಡಿ ಚಿನ್ನಸ್ವಾಮಿ, ಶಿವರಾಜು, ಕಿರಗಸೂರು ಪುಟ್ಟರಾಜು, ಸೋಮು, ಡಣಾಯಕನಪುರ ಮಹದೇವ ಸ್ವಾಮಿ, ಕೂಡ್ಲೂರು ದೇವರಾಜು, ಬಿ.ಸಿದ್ದರಾಜು, ಕಿರಗಸೂರು ಪುಟ್ಟರಾಜು ಸೇರಿದಂತೆ ಮತ್ತಿತರಿದ್ದರು.

ಶರಣ ಸಾಹಿತ್ಯ ಪರಿಷತ್ ಉಪಾಧ್ಯಕ್ಷರಿಗೆ ಸನ್ಮಾನ



ತಿ.ನರಸೀಪುರ ತಾಲೂಕು ಶರಣ ಸಾಹಿತ್ಯ ಪರಿಷತ್ ಉಪಾಧ್ಯಕ್ಷರಾಗಿ ಆಯ್ಕೆಯಾದ ಡೈರಿ ಅಧ್ಯಕ್ಷ ಮಹದೇವಪ್ಪ ಅವರನ್ನು ಬಿಳಿಗೆರೆಹುಂಡಿ ಡೈರಿ ವತಿಯಿಂದ ಸನ್ಮಾನಿಸಲಾಯಿತು. ಉಪಾಧ್ಯಕ್ಷ ಏಳುಮಲೆ ಮಂಜು, ಇಓ ಪುರುಷೋತ್ತಮ್, ನಿರ್ದೇಶಕರಾದ ಎನ್.ಮಹೇಶ್, ಮಹದೇವಪ್ಪ ಸುಂದರಸ್ವಾಮಿ, ಶಂಕರ್, ಸಿದ್ದೇಗೌಡ, ನಾಗರಾಜು, ಸಣ್ಣಯ್ಯ, ಮಹಾದೇವ, ನಾಯಕ ಸ್ವಾಮಿ, ಮಹದೇವಮ್ಮ, ಪುಟ್ಟಮಲ್ಲಮ್ಮ, ಹಾಲು ಪರೀಕ್ಷಕ ಅಭಿಷೇಕ್, ರಾಜಣ್ಣ ಇದ್ದಾರೆ.

ನಜೀರ್ ಅಹ್ಮದ್ ನಿಧನ



ಹುಣಸೂರು, ಜ.7– ನರದದ ವಿ.ಪಿ.ಬೋರೆ ನಿವಾಸಿ, 24ನೇ ವಾರ್ಡ್ ಮಾಜಿ ಪುರಸಭಾ ಸದಸ್ಯೆ ತಾಹೆರಾ ಅವರ ಪತಿ ನಜೀರ್ ಅಹ್ಮದ್ (65) ಮಂಗಳವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಐವರು ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿ.ಪಿ.ಬೋರೆ ಸ್ಮಶಾನದಲ್ಲಿ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಂಜಪ್ಪ



ಹುಣಸೂರು, ಜ.7– ಕಲ್ಕುಣಿಕೆ ಹೌಸಿಂಗ್ ಬೋರ್ಡ್ ನಿವಾಸಿ, ಎಲ್‌ಐಸಿ ನಿವೃತ್ತ ನೌಕರ ಕುಂಜಪ್ಪ ಉರುಫ್ ಸನ್ನಿ ಕುಂಜಪ್ಪ(72) ಸೋಮವಾರ ಸಂಜೆ ನಿಧನರಾದರು. ಮೃತರು ಪತ್ನಿ ರಾಣಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ಸ್ಮಶಾನದಲ್ಲಿ ಮಂಗಳವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೆಳಿಗ್ಗೆಯಿಂದಲೇ ಬಸ್ ಸಂಚಾರ ಸ್ಥಗಿತ; ಆಟೋಚಾಲಕರ ಪೈಪೋಟಿ; ಭರ್ಜರಿ ವಸೂಲಿ



ಬಸ್ ನಿಲ್ದಾಣದಲ್ಲಿ ನಿದ್ರೆಗೆ ಜಾರಿರುವ ಪ್ರಯಾಣಿಕರು.



ಗನ್‌ಹೌಸ್ ಸಮೀಪದ ಅರಮನೆಯ ವರಹಾ ಗೇಟ್ ಬಳಿ ಪರಸ್ಪರ ಬಡಿದಾಡುತ್ತಿರುವ ಆಟೋರಿಕ್ಷಾ ಚಾಲಕರು.

ಮೈಸೂರು, ಜ.7(ಎಂಟಿವೈ)– ಸಂಸತ್‌ನಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಕೇಂದ್ರ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ವಿರೋಧಿಸಿ ದಲಿತಪರ ಸಂಘಟನೆಗಳು ಕರೆ ನೀಡಿದ್ದ 'ಮೈಸೂರು ಬಂದ್'ಗೆ ಸಾರಿಗೆ ಬಸ್ ಸಂಚಾರ ಸ್ಥಗಿತಗೊಳಿಸಿದ್ದರಿಂದ ಪ್ರಯಾಣಿಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ವಿವಿಧೆಡೆಯಿಂದ ಮೈಸೂರಿಗೆ ಹಾಗೂ ಮೈಸೂರಿಂದ ವಿವಿಧ ನಗರ, ಪಟ್ಟಣಗಳಿಗೆ ತೆರಳಲು ಬೆಳಿಗ್ಗೆಯಿಂದಲೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಗ್ರಾಮಾಂತರ ಹಾಗೂ ನಗರ ಬಸ್ ನಿಲ್ದಾಣಕ್ಕೆ ಆಗಮಿಸಿದ್ದರು. ನಗರ ಬಸ್ ನಿಲ್ದಾಣದಿಂದ ಬೆಳಗ್ಗೆ 8 ಗಂಟೆವರೆಗೂ ಬಸ್‌ಗಳ ಸಂಚಾರ ಎಂದಿನಂತೆ ಇತ್ತು. ಬೆಂಗಳೂರು ಸೇರಿದಂತೆ ವಿವಿಧೆಡೆಗೆ ಬಸ್‌ಗಳ ಸಂಚಾರವಿತ್ತು. ಆದರೆ, ನಂತರ ಪ್ರತಿಭಟನಾಕಾರರು ಗುಂಪು ಗುಂಪಾಗಿ ಬಂದು ಬಸ್‌ಗಳ ಸಂಚಾರ ಸ್ಥಗಿತಗೊಳಿಸುವಂತೆ ಎಚ್ಚರಿಕೆ ನೀಡಿದರು. ಇದರಿಂದ ನಗರ ವಿಭಾಗದ ಎಲ್ಲಾ ಬಸ್‌ಗಳ ಸಂಚಾರ ಸ್ಥಗಿತಗೊಂಡರೆ, ಗ್ರಾಮಾಂತರ ಬಸ್ ನಿಲ್ದಾಣದಲ್ಲೂ ಬಸ್‌ಗಳ ಸಂಚಾರ ನಿಲ್ಲಿಸಿದವು.

ಬೇರೆ ಬೇರೆ ನಗರ, ಜಿಲ್ಲೆಗಳಿಂದ ಮೈಸೂರಿಗೆ ಆಗಮಿಸಿದ ಸಾರಿಗೆ ಬಸ್ಸುಗಳು ಗ್ರಾಮಾಂತರ ಬಸ್ ನಿಲ್ದಾಣ ಪ್ರವೇಶಿಸಲು ಸಾಧ್ಯವಾಗದ ಕಾರಣ ಎಂಎಂ ರಸ್ತೆ(ಛತ್ರಿ ಮರ), ಕುಪ್ಪಣ್ಣ ಪಾರ್ಕ್ ಬಳಿ, ಮಿನಿ ವಿಧಾನಸೌಧದ ಮುಂದಿನ ರಸ್ತೆ, ರಾಮಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ ಸೇರಿದಂತೆ ವಿವಿಧ ರಸ್ತೆಗಳ ಬದಿಯಲ್ಲಿಯೇ ನಿಲ್ಲಿಸಿ, ರಕ್ಷಣೆ ಪಡೆದವು.

ಬಿಕೋ ಎಂದ ಬಸ್ ನಿಲ್ದಾಣ: ಅಪಾರ ಸಂಖ್ಯೆ ಪ್ರಯಾಣಿಕರು ಹಾಗೂ ನೂರಾರು ಬಸ್‌ಗಳಿಂದ ಗಿಜಿಗುಡುತ್ತಿದ್ದ ಗ್ರಾಮಾಂತರ ಹಾಗೂ ನಗರ ಬಸ್ ನಿಲ್ದಾಣ ಇಂದು ಮೈಸೂರು ಬಂದ್‌ನಿಂದಾಗಿ ಬಿಕೋ ಎನ್ನುತ್ತಿದ್ದವು. ಅಂತರರಾಜ್ಯ ಹಾಗೂ ವಿವಿಧೆಡೆ ತೆರಳಲು ಬಂದಿದ್ದ ಪ್ರಯಾಣಿಕರು ಬಸ್‌ಗಳಿಲ್ಲದೆ ಪರದಾಡಿದರು. ಬಸ್ ನಿಲ್ದಾಣದಲ್ಲಿ ಕೆಲವರು ನಿದ್ರೆಗೆ ಜಾರಿದರು. ಬಸ್‌ಗಳಿಲ್ಲದ ಕಾರಣ ನಿಲ್ದಾಣವನ್ನು ಸ್ವಚ್ಛತಾ ಸಿಬ್ಬಂದಿ ಶುಚಿಗೊಳಿಸಿದರು.

ಬಡಿದಾಡಿಕೊಂಡ ಆಟೋಚಾಲಕರು

ಮೈಸೂರು ಬಂದ್ ಹಿನ್ನೆಲೆಯಲ್ಲಿ ಮಂಗಳವಾರ ಮೈಸೂರಲ್ಲಿ ಆಟೋರಿಕ್ಷಾಗಳಿಗೆ ಭಾರಿ ಬೇಡಿಕೆ ಇತ್ತು. ಸಾರಿಗೆ ಬಸ್‌ಗಳ ಸಂಚಾರ ಸ್ಥಗಿತಗೊಂಡಿದ್ದರಿಂದ ಕೆಲವು ಆಟೋ ಚಾಲಕರು ಪೈಪೋಟಿಗಿಳಿದರು. ಅದರಲ್ಲೂ ಪ್ರವಾಸಿಗರು ಹಾಗೂ ವಿದ್ಯಾರ್ಥಿನಿಯರು ಕೇಳಿದರೆ ದುಪ್ಪಟ್ಟು ಹಣ ಕೇಳಲಾಗುತ್ತಿತ್ತು. ಕೆಲವರು ಅನಿವಾರ್ಯವಾಗಿ ಹೆಚ್ಚು ಹಣ ನೀಡಿ ಆಟೋರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದರು. ಅರಮನೆ ವೀಕ್ಷಣೆಗೆ ಆಗಮಿಸಿದ್ದ ಪ್ರವಾಸಿಗರಿಂದ ಅಧಿಕ ಹಣ ಪಡೆಯುವ ವಿಚಾರವಾಗಿ ಇಬ್ಬರು ಆಟೋರಿಕ್ಷಾ ಚಾಲಕರು ಪರಸ್ಪರ ಬಡಿದಾಡಿಕೊಂಡರು. ವರಹಾ ಗೇಟ್ ಮುಂದೆ ಈ ಘಟನೆ ನಡೆದಿದ್ದು, ಆಟೋ ಚಾಲಕರಿಬ್ಬರ ರಂಪಾಟವನ್ನು ಇತರೆ ಚಾಲಕರು ಮಧ್ಯ ಪ್ರವೇಶಿಸಿ, ಬಿಡಿಸಿದರು.

ಹೆಬ್ಬಾಳಿನಲ್ಲಿ ಅಂಬೇಡ್ಕರ್ ವಿಚಾರ ವೇದಿಕೆ ಮನವಿ ಮೇರೆಗೆ ಅಂಗಡಿ–ಮುಂಗಟ್ಟುಗಳು ಬಂದ್



ಡಾ.ಬಿ.ಆರ್.ಅಂಬೇಡ್ಕರ್ ವಿಚಾರ ವೇದಿಕೆಯ ಪದಾಧಿಕಾರಿಗಳು ಮೈಸೂರು ಬಂದ್ ಬೆಂಬಲಿಸಿ, ನಂತರ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಮೈಸೂರು, ಜ.7(ಜಿಎ)–ಮೈಸೂರು ಬಂದ್‌ಗೆ ಬೆಂಬಲ ಸೂಚಿಸಿದ ಡಾ.ಬಿ.ಆರ್.ಅಂಬೇಡ್ಕರ್ ವಿಚಾರ ವೇದಿಕೆಯು ವಾರ್ಡ್ ನಂ.4ರ ವ್ಯಾಪ್ತಿಯ ಹೆಬ್ಬಾಳ್‌ನ ಮುಖ್ಯ ರಸ್ತೆಯಲ್ಲಿರುವ ಅಂಗಡಿ ಮುಂಗಟ್ಟುಗಳನ್ನು ಮನವಿ ಮಾಡಿ ಮುಚ್ಚಿಸಿದರು.

ನಂತರ ಕಾಲ್ನಡಿಗೆಯ ಮೂಲಕ ಟೌನ್ ಹಾಲ್ ಮುಂಭಾಗ ಬಂದು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ನಂತರ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಈ ವೇಳೆ ವೇದಿಕೆಯ ಗೌರವಾಧ್ಯಕ್ಷ ಕೃಷ್ಣ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಋಣ ದೇಶದ ಪ್ರತಿಯೊಬ್ಬರ ಮೇಲೆಯೂ ಕೂಡ ಇದೆ. ಆದರೆ ಕೇಂದ್ರ ಸಚಿವ ಅಮಿತ್ ಶಾ, ಅಂಬೇಡ್ಕರ್ ಅವರ ಬಗ್ಗೆ ಲಘುವಾಗಿ ಮಾತನಾಡಿರುವುದು ಖಂಡನೀಯ ಎಂದರು.

ವೇದಿಕೆ ಅಧ್ಯಕ್ಷ ಕೆ.ನಂಜಪ್ಪ ಬಸನಗುಡಿ ಮಾತನಾಡಿ, ಅಮಿತ್ ಶಾ ವಿಶ್ವ ಮಾನ್ಯ ನಾಯಕರಾದ ಅಂಬೇಡ್ಕರ್ ಬಗ್ಗೆ ಇಷ್ಟೊಂದು ಕೀಳು ಮಟ್ಟದ ಅಭಿರುಚಿಯಲ್ಲಿ ಮಾತನಾಡಲು ಅಧಿಕಾರದ ಮದ ಕಾರಣ. ಅಧಿಕಾರ ಮದದ ನಶೆಯನ್ನು ಇಳಿಸಲೇಬೇಕಾದ ಅನಿವಾರ್ಯ ಈಗ ಬಂದಾಗಿದೆ. ಜಿಲ್ಲಾಡಳಿತದ ಮೂಲಕ ಕೇಂದ್ರ ಸರ್ಕಾರಕ್ಕೆ ಈ ಸಂದೇಶ ರವಾನೆಯಾಗಲಿ, ಅಮಿತ್ ಶಾ ರಾಜೀನಾಮೆ ನೀಡಲಿ ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಗೌರವ ಸಲಹೆಗಾರ ಆರ್.ಬನ್ನಾರಿ ಸೇರಿದಂತೆ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಅಮಿತ್ ಶಾ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಜ. 26ರಂದು ಅಂಬೇಡ್ಕರ್ ಅನುಯಾಯಿಗಳಿಂದ ದೆಹಲಿ ನಡೆ

ಗಾಂಧಿನಗರದ ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ ಎಚ್ಚರಿಕೆ



ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಜ್ಞಾನಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜ.7(ಎಂಟಿವೈ)– ಸಂಸತ್‌ನಲ್ಲಿಯೇ ಡಾ.ಅಂಬೇಡ್ಕರ್ ಅವರ ಬಗ್ಗೆ ಲಘುವಾಗಿ ಹೇಳಿಕೆ ನೀಡಿರುವ ಕೇಂದ್ರ ಸಚಿವ ಅಮಿತ್ ಶಾ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಜ.26ರಂದು ದೆಹಲಿಯ ಕೆಂಪು ಕೋಟೆಯ ಕಡೆಗೆ ಅಂಬೇಡ್ಕರ್ ಅನುಯಾಯಿಗಳ ನಡೆ ಹಮ್ಮಿಕೊಳ್ಳಲಾಗುವುದು ಎಂದು ಗಾಂಧಿನಗರದ ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ ಎಚ್ಚರಿಸಿದ್ದಾರೆ.

ಮೈಸೂರು ಬಂದ್ ಹಿನ್ನೆಲೆಯಲ್ಲಿ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿದ ಬಳಿಕ ಮಾತನಾಡಿದ ಅವರು, ದೇಶಕ್ಕೆ ಪ್ರಪಂಚದಲ್ಲಿಯೇ ಅತ್ಯುತ್ತಮವಾದ ಸಂವಿಧಾನವನ್ನು ಕೊಡುಗೆ ನೀಡಿದ್ದಾರೆ. ಶೋಷಿತ ಸಮುದಾಯಗಳಿಗೆ ನ್ಯಾಯ ಒದಗಿಸಿದ್ದಾರೆ. ಆದರೆ, ದೇಶದ ಮಹತ್ವದ ಸ್ಥಾನದಲ್ಲಿರುವ ಸಂಸತ್‌ನಲ್ಲಿಯೇ ಕೇಂದ್ರ ಸಚಿವ ಅಮಿತ್ ಶಾ ಮಾತನಾಡುವ ಭರದಲ್ಲಿ ಉದ್ದೇಶಪೂರ್ವಕವಾಗಿ ಡಾ.ಅಂಬೇಡ್ಕರ್ ಅವರಿಗೆ ಅವಮಾನ ಮಾಡುವ ಹೇಳಿಕೆ ನೀಡುವ ಮೂಲಕ ರಾಷ್ಟ್ರಕ್ಕೇ ಅವಮಾನ ಮಾಡಿದ್ದಾರೆ. ಇದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಿಳಿದಿದ್ದರೂ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕಿಡಿಕಾರಿದರು.

ರಾಷ್ಟ್ರ ನಾಯಕರಿಗೆ ಅವಮಾನ ಮಾಡಿದ ಘಟನೆಯ ಸಂಬಂಧ ಸುಮೋಟೋ ಪ್ರಕರಣ ದಾಖಲು ಮಾಡುವಂತೆ ನ್ಯಾಯಾಲಯ ಈಗಾಗಲೇ ಆದೇಶ ನೀಡಿದೆ. ಈ ಹಿಂದೆ ಜೈಲಿಗೆ ಹೋಗಿ ಬಂದಿರುವ ಅಮಿತ್ ಶಾ ಅವರಿಗೆ ಕಾನೂನಿನ ಮೇಲೆ ನಂಬಿಕೆ ಇಲ್ಲ. ಆ ಕಾರಣದಿಂದ ದರ್ಪ ಪ್ರದರ್ಶಿಸುತ್ತಿದ್ದಾರೆ. ದೇಶದಾದ್ಯಂತ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದರೂ, ಅಮಿತ್ ಶಾ ವಿರುದ್ಧ ಯಾವುದೇ ಪ್ರಕರಣವೂ ದಾಖಲಾಗಿಲ್ಲ, ಅವರು ಕ್ಷಮೆಯನ್ನೂ ಕೇಳಿಲ್ಲ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅನುಯಾಯಿಗಳು ಉಗ್ರ ಹೋರಾಟ ನಡೆಸುವ ಅನಿವಾರ್ಯತೆ ಉಂಟಾಗಿದೆ ಎಂದರು.

ದೆಹಲಿ ನಮಗೆ ದೂರವಿಲ್ಲ. ರಾಷ್ಟ್ರದ ಅಖಂಡತೆಗೆ ಧಕ್ಕೆ ಬಂದಾಗ ನಾವು ಸುಮ್ಮನೆ ಕೂರುವುದಿಲ್ಲ. ಜ.26ರಂದು ಕೆಂಪುಕೋಟೆಯ ಮೇಲೆ ರಾಷ್ಟ್ರಧ್ವಜ ಹಾರಿಸುವ ನೈತಿಕತೆ ಪ್ರಧಾನಿ ನರೇಂದ್ರ ಮೋದಿ ಅವರಿಗಿಲ್ಲ. ಇನ್ನಾದರೂ ಕ್ರಮ ಕೈಗೊಳ್ಳಬೇಕು. ತಪ್ಪಿದರೆ ಜ.26ರಂದು ದೆಹಲಿಯ ಕಡೆ ಅಂಬೇಡ್ಕರ್ ಅಭಿಮಾನಿಗಳು ತೆರಳಲಿದ್ದಾರೆ. ಸಂವಿಧಾನ ಸಮರ್ಪಣೆ ದಿನದ ಅಂಗವಾಗಿ ದೆಹಲಿ ಚಲೋ ಮಾಡಲಿದ್ದೇವೆ ಎಂದು ತಿಳಿಸಿದರು.

ಯುವತಿಯರಿಗೆ ಉಚಿತ ಕಂಪ್ಯೂಟರ್ ತರಬೇತಿ

ಮೈಸೂರು, ಜ. 7– ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ಬಡ ವಿದ್ಯಾವಂತ ನಿರುದ್ಯೋಗಿ ಯುವತಿಯರಿಗೆ ಉಚಿತ ಕಂಪ್ಯೂಟರ್ ತರಬೇತಿ ಮತ್ತು ಉದ್ಯೋಗ ವಿಕಸನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತರಬೇತಿಯ ಅವಧಿ ಮೂರು ತಿಂಗಳು ಇರುತ್ತದೆ. ಬೆಳಿಗ್ಗೆ 10 ಗಂಟೆಯಿಂದ ಸಂಜೆ 4:00 ಗಂಟೆಯವರೆಗೆ ತರಗತಿ ನಡೆಯಲಿದ್ದು, ತರಗತಿಯಲ್ಲಿ ಬಿಪಿಓ, ಕಂಪ್ಯೂಟರ್ ಕೌಶಲ, ಕಮ್ಯುನಿಕೇಶನ್ ಕೌಶಲ ಉಚಿತ ತರಬೇತಿ ನೀಡಲಾಗುವುದು. ಕನಿಷ್ಠ ಎಸ್.ಎಸ್.ಎಲ್.ಸಿ ಉತ್ತೀರ್ಣ ಆಗಿರಬೇಕು. ವಯಸ್ಸು: 18 ರಿಂದ 35 ವರ್ಷ ಒಳಗಿರಬೇಕು. ಆರ್ಥಿಕವಾಗಿ ಹಿಂದುಳಿದ ವಿದ್ಯಾವಂತ ಬಡ ಯುವತಿಯರು ಸದರಿ ತರಬೇತಿಗೆ ಅರ್ಹತೆ ಹೊಂದಿರುತ್ತಾರೆ. ತರಬೇತಿಯು ಜ. 15 ರಿಂದ ಪ್ರಾರಂಭವಾಗುತ್ತದೆ.

ಅಭ್ಯರ್ಥಿಗಳು ಶೈಕ್ಷಣಿಕ ದಾಖಲಾತಿಗಳು, ಆಧಾರ್ ಕಾರ್ಡ್, ಆದಾಯ ಪ್ರಮಾಣ ಪತ್ರ/ ಬಿಪಿಎಲ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ ನೀಡಬೇಕಾಗುತ್ತದೆ. ಮಾಹಿತಿಗಾಗಿ ಸಮರ್ಥನಂ ಅಂಗವಿಕಲರ ಸಂಸ್ಥೆ, ನಂ –676, ನ್ಯೂ ಕೆ-21, ಲಕ್ಷ್ಮಿ ಚಿತ್ರಮಂದಿರ ಹತ್ತಿರ, ಚಾಮರಾಜ ಜೋಡಿ ರಸ್ತೆ, ಅಗ್ರಹಾರ, ಮೈಸೂರು 570004 ಅಥವಾ 6364867818, 9113806615 ಸಂಪರ್ಕಿಸಬಹುದು ಎಂದು ಸಂಸ್ಥೆಯ ಮೈಸೂರು ವಿಭಾಗೀಯ ಮುಖ್ಯಸ್ಥ ಶಿವರಾಜು ತಿಳಿಸಿದ್ದಾರೆ.

ಮೋಸ್ಟ್ ವಾಂಟೆಡ್ 6 ನಕ್ಸಲರು ಇಂದು ಚಿಕ್ಕಮಗಳೂರು ಜಿಲ್ಲಾಡಳಿತದ ಮುಂದೆ ಶರಣಾಗತಿ



ಲತಾ ವನಜಾಕ್ಷಿ

ಚಿಕ್ಕಮಗಳೂರು: ಚಿಕ್ಕಮಗಳೂರು ಅರಣ್ಯದಲ್ಲಿ ಅಡಗಿರುವ ಮೋಸ್ಟ್ ವಾಂಟೆಡ್ 6 ನಕ್ಸಲರು ಇಂದು ಜಿಲ್ಲಾಡಳಿತದ ಮುಂದೆ ಶರಣಾಗಲು ನಿರ್ಧರಿಸಿದ್ದಾರೆ ಈಗಾಗಲೇ ನಕ್ಸಲರು ಹಾಗೂ ಸರ್ಕಾರದ ನಡುವಿನ ಮಾತುಕತೆ ಪೂರ್ಣಗೊಂಡಿದೆ ಎಂದು ತಿಳಿದುಬಂದಿದೆ.

ದಕ್ಷಿಣ ಭಾರತದ ನಾಲ್ಕು ರಾಜ್ಯಗಳಿಗೆ ಬೇಕಾಗಿದ್ದ 6 ನಕ್ಸಲರು ಈಗ ಶರಣಾಗತರಾಗಲಿದ್ದಾರೆ. ರಾಜ್ಯ ಸರ್ಕಾರ ನಕ್ಸಲರ ಶರಣಾಗತಿ ಪ್ರಕ್ರಿಯೆ ಈಗಾಗಲೇ ಮುಗಿದಿದೆ. ಚಿಕ್ಕಮಗಳೂರಿನ ಮುಂಡಗಾರು ಲತಾ, ವನಜಾಕ್ಷಿ, ದಕ್ಷಿಣ ಕನ್ನಡದ ಸುಂದರಿ, ತಮಿಳುನಾಡಿನ ಕೆ ವಸಂತ ಅಲಿಯಾಸ್ ರಮೇಶ್, ಕೇರಳದ ಜೀಶ, ಆಂಧ್ರಪ್ರದೇಶದ ಮಾರೆಪ್ಪ ಅರೋಲಿ ಶರಣಾಗತರಾಗುವ ನಕ್ಸಲರು. ನಕ್ಸಲ್ ನಾಯಕ ವಿಕ್ರಂ ಗೌಡ ಎನ್‌ಕೌಂಟರ್ ಪ್ರಕರಣದ ಬಳಿಕ ಆತನ ಅನುಯಾಯಿಗಳಾಗಿದ್ದ ನಕ್ಸಲರಿಗೆ ಶರಣಾಗುವಂತೆ ಸರ್ಕಾರ ಸೂಚನೆ ನೀಡಿತ್ತು ಶರಣಾದ ನಕ್ಸಲರಿಗೆ ಆರ್ಥಿಕ, ಸಾಮಾಜಿಕ ನೆರವು, ಕಾನೂನು ನೆರವು ನೀಡುವುದಾಗಿ ಭರವಸೆ ನೀಡಿತ್ತು. ಈ ಬೆಳವಣಿಗೆ ಬೆನ್ನಲ್ಲೇ 6 ನಕ್ಸಲರು ಶರಣಾಗಲು ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ

ಕನ್ನಡ ಪುಸ್ತಕ ಪ್ರಕಾಶನ ಉದ್ಯಮಕ್ಕೆ ನೆರವು ನೀಡದಿದ್ದಲ್ಲಿ ಭಾಷೆ, ಸಂಸ್ಕೃತಿ ನಾಶ

● ಹಿರಿಯ ವಿದ್ವಾಂಸ ಡಿ.ಎ.ಶಂಕರ್ ಆತಂಕ ● ಸಿಪಿಕೆಯವರ 'ಚಿಂತನ ಚಿಂತಾಮಣಿ' ಬೃಹತ್ ಗ್ರಂಥ ಬಿಡುಗಡೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶಿವರಾತ್ರಿ ರಾಜೇಂದ್ರ ಭವನದಲ್ಲಿ ಮಂಗಳವಾರ ಸುತ್ತೂರು ಶ್ರೀಗಳ ಸಾನ್ನಿಧ್ಯದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅವರ 'ಚಿಂತನ ಚಿಂತಾಮಣಿ' ಬೃಹತ್ ಗ್ರಂಥವನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು, ಜ.7(ಎಸ್‌ಬಿಡಿ)– ರಾಜ್ಯ ಸರ್ಕಾರ ಕನ್ನಡ ಪುಸ್ತಕ ಪ್ರಕಾಶನ ಉದ್ಯಮಕ್ಕೆ ನೆರವು ನೀಡಿ ರಕ್ಷಿಸದಿದ್ದರೆ, ಭಾಷೆ ಮತ್ತು ಸಂಸ್ಕೃತಿ ನಶಿಸಿ ಹೋಗುವ ಆತಂಕವಿದೆ ಎಂದು ಹಿರಿಯ ವಿದ್ವಾಂಸ ಡಿ.ಎ.ಶಂಕರ್ ಹೇಳಿದರು.

ಮೈಸೂರಿನ ಸಂವಹನ ಪ್ರಕಾಶನ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶಿವರಾತ್ರಿ ರಾಜೇಂದ್ರ ಭವನದಲ್ಲಿ ಮಂಗಳವಾರ ಸುತ್ತೂರು ಶ್ರೀಗಳ ಸಾನ್ನಿಧ್ಯದಲ್ಲಿ ನಡೆದ ಸಮಾರಂಭದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅವರ 'ಚಿಂತನ ಚಿಂತಾಮಣಿ' ಬೃಹತ್ ಗ್ರಂಥವನ್ನು ಬಿಡುಗಡೆ ಮಾಡಿ, ಅವರು ಮಾತನಾಡಿದರು.

ಪುಸ್ತಕ ಪ್ರಕಾಶನ ಉದ್ಯಮ ಸಂಕಷ್ಟದಲ್ಲಿದೆ. ಪುಸ್ತಕ ಪ್ರಕಟಣೆ, ಮಾರಾಟ, ಗ್ರಂಥಾಲಯ ಅಭಿವೃದ್ಧಿ ತುಂಬಾ ಕಷ್ಟವಾಗಿದೆ. ಅತ್ಯುತ್ಕೃಷ್ಟವಾದ ವಿಷಯ ಓದುಗರಿಗೆ ತಲುಪಬೇಕು. ಮಾರುಕಟ್ಟೆಯಲ್ಲಿ ಪುಸ್ತಕಗಳು ಸಿಗುವಂತಾಗಬೇಕು. ಗ್ರಂಥಾಲಯಗಳು ಹೆಚ್ಚು ಶ್ರೀಮಂತವಾಗಬೇಕು. ಇದಾಗದಿದ್ದರೆ ಕನ್ನಡ ಭಾಷೆ ಹಾಗೂ ಸಂಸ್ಕೃತಿ ನಶಿಸುವ ಸಾಧ್ಯತೆ ಇದೆ. ಬರಹಗಾರರು, ಪ್ರಕಾಶಕರು ಹಾಗೂ ಓದುಗರು ಕನ್ನಡಿಗರೇ ಆಗಿರುವುದರಿಂದ ಕನ್ನಡದ ಕೆಲಸಕ್ಕೆ ರಾಜ್ಯ ಸರ್ಕಾರ ಆರ್ಥಿಕ ನೆರವು ನೀಡುವ ಮೂಲಕ ಪ್ರಕಾಶನ ಉದ್ಯಮವನ್ನು ಉಳಿಸುವುದು ಅತ್ಯವಶ್ಯವಾಗಿದೆ ಎಂದರು.

ಪುಸ್ತಕ ಅಚ್ಚಾಗಿ, ಪ್ರಕಟವಾದ ನಂತರ ಅದು ಓದುಗರು, ಭಾಷೆ ಹಾಗೂ ಸಂಸ್ಕೃತಿಯ ಸ್ವತ್ತಾಗುತ್ತದೆ. ಪ್ರಕಾಶಕರು ತುಂಬಾ ಸಂಕಷ್ಟದಲ್ಲಿರುವ ಈ ಸಂದರ್ಭದಲ್ಲಿ ಸಂವಹನ ಪ್ರಕಾಶನದ ಡಿ.ಎನ್.ಲೋಕಪ್ಪನವರು ಸಿಪಿಕೆ ಅವರ ಸಾವಿರಕ್ಕಿಂತ ಹೆಚ್ಚು ಪುಟಗಳಿರುವ ಈ ಬೃಹತ್ ಗ್ರಂಥವನ್ನು ಅತ್ಯಂತ ಪ್ರೀತಿ ಹಾಗೂ ಧೈರ್ಯದಿಂದ ಪ್ರಕಟಿಸಿದ್ದಾರೆ. ಇದಕ್ಕಾಗಿ ಅವರಿಗೆ ವಿಶೇಷ ಅಭಿನಂದನೆಗಳು ಎಂದು ಇದೇ ವೇಳೆ ಪ್ರಶಂಸಿಸಿದರು.

ವಿಷಯ ವಿಶ್ವಕೋಶ: ಸಿಪಿಕೆ ಅವರ 'ಚಿಂತನ ಚಿಂತಾಮಣಿ' ಒಂದು ಬೃಹತ್ ಗ್ರಂಥ ಮಾತ್ರವಲ್ಲ, ಇದೊಂದು ಲೇಖಕರೊಬ್ಬರೇ ಸೃಷ್ಟಿಸಿರುವ ವಿಷಯ ವಿಶ್ವಕೋಶ. ವಿಶ್ವವಿದ್ಯಾನಿಲಯದ ವಿಭಾಗಗಳು ವರ್ಷಗಳ ಕಾಲ ಮಾಡುವಂತಹ ಕೆಲಸವನ್ನು ಸಿಪಿಕೆ ಒಬ್ಬರೇ ಯಾವ ನಿರೀಕ್ಷೆ ಇಲ್ಲದೆ ಸಾಧಿಸಿದ್ದಾರೆ. ಯಾವಾಗಲೋ ಓದಿದ್ದ ಪುಸ್ತಕಗಳಲ್ಲಿ ತಮಗೆ ಪ್ರಿಯವಾದ, ಸಮಾಜಕ್ಕೆ ಅಗತ್ಯವಾದ ವಿಷಯಗಳನ್ನು ಟಿಪ್ಪಣಿ ಮಾಡಿಟ್ಟುಕೊಂಡು, ಎಲ್ಲವನ್ನೂ ಒಟ್ಟುಗೂಡಿಸಿ ಬೃಹತ್ ಗ್ರಂಥದ ರೂಪದಲ್ಲಿ ಓದುಗರಿಗೆ ನೀಡಿರುವುದು ನಿಜಕ್ಕೂ ತಪಸ್ಸು ಎಂದು ಬಣ್ಣಿಸಿದರು.

ಏಕವ್ಯಕ್ತಿ ನಿರ್ಮಿತ ಈ ವಿಶ್ವಕೋಶದಲ್ಲಿ 800ಕ್ಕೂ ಹೆಚ್ಚು ಚಿಂತನ ಬರಹಗಳಿದ್ದು, ಪ್ರತಿಯೊಂದರ ವಸ್ತು ವಿಷಯಗಳು ವಿಭಿನ್ನವಾಗಿವೆ ಕನ್ನಡ ಇಂಗ್ಲಿಷ್ ಹಾಗೂ ಸಂಸ್ಕೃತದ ಹಲವು ಮಹನೀಯರ ಕುರಿತ ಚಿಂತನ ಬರಹಗಳ ಜೊತೆಗೆ ಜಾನಪದವೂ ಈ ಗ್ರಂಥದಲ್ಲಿದೆ. ಇಲ್ಲಿರುವ ಚರ್ಚೆ, ಲೇಖಕರ ಪಟ್ಟಿ ನೋಡಿದರೆ ಆಶ್ಚರ್ಯವಾಗುತ್ತೆ ಸಿಪಿಕೆ ಅವರು ಅತ್ಯಂತ ತಳಸ್ಪರ್ಶಿ ಚಿಂತನೆಯೊಂದಿಗೆ ಅತ್ಯಂತ ಶಿಸ್ತಿನಿಂದ ಬರೆದಿದ್ದಾರೆ. ಈ ಮೂಲಕ ಅಪರೂಪವಾದುದ್ದನ್ನು ಸಾಧಿಸಿ, ಓದುಗರ ಮುಂದಿಟ್ಟಿದ್ದಾರೆ. 'ಚಿಂತನ ಚಿಂತಾಮಣಿ' ಸಿಪಿಕೆ ಅವರು ಕನ್ನಡಕ್ಕೆ ನೀಡಿರುವ ಅತ್ಯಂತ ದೊಡ್ಡ ಕಾಣಿಕೆ. ಓದುಗರು ಇದನ್ನು ಪ್ರೀತಿಯಿಂದ ಸ್ವೀಕರಿಸಿ, ಉಳಿಸಿಕೊಳ್ಳುತ್ತಾರೆಂಬ ವಿಶ್ವಾಸವಿದೆ ಎಂದು ನುಡಿದರು.

ಹಿರಿಯ ವಿದ್ವಾಂಸ ವಿದ್ವಾನ್ ಹೆಚ್.ವಿ.ನಾಗರಾಜರಾವ್ ಅವರು ಕೃತಿ ಕುರಿತು ಮಾತನಾಡಿದರು. ಲೇಖಕರಾದ ಡಾ.ಸಿಪಿಕೆ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಪ್ರಕಾಶಕರಾದ ಡಿ.ಎನ್.ಲೋಕಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಐಡೆಂಟಿಟಿ (ತ) + ಐಡೆಂಟಿಟಿ (ಮ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವನವಾಸ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗನ ಅಂಡ್ ರೋಜಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ವಿಡುದಲೈ–2(ತ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಗನ್ ಅಂಡ್ ರೋಜಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೊ (ಹಿಂ): ರಾ.7ಕ್ಕೆ, ಮಾರ್ಕೊ (ಮ): ರಾ.10.10ಕ್ಕೆ
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸ್

9ನೇ ದಿನ, ಬುಧವಾರ, 8–1–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಹಿಮಾಲಯಸ್ ಪ್ಲೇಟ್–1200 ಮೀ. 3 ವರ್ಷ(ಟರ್ಮ್ಸ್). ಮ.2.00ಕ್ಕೆ
1 ನ್ಯಾಚುರಲ್ ಲುಕ್ 2. ಆಶೀರ್ವಾದ್ 3. ಸೆಲ್ಮ

II. ಆಂಟಿ ಕ್ವೇರ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಮಿಂಗ್ಸ್ 2. ಐ ದಿ ಮೈಂಡ್ 3. ಇಗ್ನೊರೆನ್ಸ್ ಈಸ್ ಬ್ಲಿಸ್

III ಕ್ರಿಸ್ಟಲ್ ಮ್ಯಾನ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1. ನ್ಯಾಚುರಲ್ ಪ್ಲೈ 2. ಮಿರಾಕಲ್ ಹನಿ 3. ವಿಂಡ್ ಪವರ್

IV. ಶಿರಸಿ ಪ್ಲೇಟ್ ಡಿII–1200 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಟು ಹಾಟ್ ಟು ಟಚ್ 2. ಸ್ಟ್ರೀಟ್ ಸೆನ್ಸ್ 3. ಹಾಲ್ ಚಿಮೆನಿ

V. ಡಾ. ಐಶ್ವರಿ ಜಿ.ಕೆ.ಬಾಲಕೃಷ್ಣ ಮೆಮೋರಿಯಲ್ ಟ್ರೋಫಿ –1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.4.00ಕ್ಕೆ
1. ಡೆಸ್ ಎಕ್ಸ್ ಮೆಚಿನಾ 2. ಎಕ್ಯೂಬರೆನ್ಸ್ 3. ಮಿಸ್ಟಿಕ್ ಬಾಂಡ್

VI. ಬೋಲ್ಡ್ ಮೆಜೆಸ್ಟಿ ಪ್ಲೇಟ್–1600 ಮೀ. ರೇಟೆಡ್ 40 ರಿಂದ 65. ಸಂಜೆ 4.30ಕ್ಕೆ
1. ಸ್ಕ್ವೇರ್ ಕಟ್ 2. ವಾಟ್ ಈಸ್ ದಿಸ್ 3. ನ್ಯಾಚುರ್ ಗೋಲ್ಡ್

VII. ಶಿರಸಿ ಪ್ಲೇಟ್ ಡಿI– 1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಅನ್‌ಲೆಕ್ಸ್ 2 ವರೋನಿಕಾ 3. ಜೆರ್ಲಿ

ದಿನದ ಅತ್ಯುತ್ತಮ	ಮಿಂಗ್ಸ್
ಡಬ್ಬಲ್	ಸ್ಕ್ವೇರ್ ಕಟ್, ಅನ್‌ಲೆಕ್ಸ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಜ.10, ರಾಮಮಂದಿರದಲ್ಲಿ ವೈಕುಂಠ ಏಕಾದಶಿ



ಮೈಸೂರು, ಜ.7– ಮೈಸೂರಿನ ಜಯನಗರ(16ನೇ ಕ್ರಾಸ್, 2ನೇ ಮುಖ್ಯರಸ್ತೆ)ದಲ್ಲಿರುವ ಶ್ರೀರಾಮ ಮಂದಿರದಲ್ಲಿ ಜ.10ರಂದು ವೈಕುಂಠ ಏಕಾದಶಿ ಪ್ರಯುಕ್ತ ವೈಕುಂಠ ದ್ವಾರ, ವಿಶೇಷ ಪೂಜೆ ಮತ್ತು ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ಶುಕ್ರವಾರ(ಜ.10) ಬೆಳಗ್ಗೆ 5 ಗಂಟೆಗೆ ವೈಕುಂಠ ದ್ವಾರ ತೆರೆದು ರಾತ್ರಿ 10ಗಂಟೆಯವರೆಗೂ ಭಗವಂತನ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ರಾತ್ರಿ 8:30ಕ್ಕೆ ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ ಏರ್ಪಡಿಸಲಾಗಿದೆ. ಜೊತೆಗೆ ಪ್ರಸಾದದ ವ್ಯವಸ್ಥೆ ಕೂಡಾ ಇರುತ್ತದೆ ಎಂದು ಜಯನಗರ ಶ್ರೀ ರಾಮ ಮಂದಿರ ಟ್ರಸ್ಟ್ ಅಧ್ಯಕ್ಷ ಅರುಣ್ ಶರ್ಮ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಥಮಿಕ ಶಾಲೆಗಳಲ್ಲಿ ತರಗತಿಗೆ ಒಬ್ಬರಂತೆ ಶಿಕ್ಷಕರ ನೇಮಕ ಆಗುತ್ತಿಲ್ಲ; ರಂಗಶಿಕ್ಷಕರಂತೂ ಇಲ್ಲವೇ ಇಲ್ಲ

● ರಂಗಾಯಣ ಮಾಜಿ ನಿರ್ದೇಶಕ ಪ್ರಸನ್ನ ವಿಷಾದ ● ಅನಿವಾರ್ಯವಾಗಿ ರಂಗಶಿಕ್ಷಣ, ಶೈಕ್ಷಣಿಕ ರಂಗಭೂಮಿ ಕುರಿತು ಪೋಷಕರ ಬಳಿ ಪ್ರಸ್ತಾಪ

ಮೈಸೂರು, ಜ.7(ಎಸ್‌ಪಿಎನ್)– ನಮ್ಮ ಅಹವಾಲು ಕೇಳಬೇಕಿದ್ದ ಸರ್ಕಾರಗಳು ಸತ್ತು ಹೋಗಿವೆ. ಹಾಗಾಗಿ ರಂಗಶಿಕ್ಷಣ, ಶೈಕ್ಷಣಿಕ ರಂಗಭೂಮಿ ಕುರಿತು ಮಕ್ಕಳ ಜವಾಬ್ದಾರಿ ಹೊತ್ತಿರುವ ಪೋಷಕರ ಬಳಿ ಬಂದಿದ್ದೇವೆ ಎಂದು ಹಿರಿಯ ರಂಗಕರ್ಮಿ, ರಂಗಾಯಣ ಮಾಜಿ ನಿರ್ದೇಶಕ ಪ್ರಸನ್ನ ತಿಳಿಸಿದರು.

ಮೈಸೂರು ಹಾರ್ಡ್ವಿಕ್ ಶಾಲಾ ಆವರಣದ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ 'ಶಿಕ್ಷಣದಲ್ಲಿ ರಂಗಭೂಮಿಯ ಪ್ರಾಮುಖ್ಯತೆ' ಕುರಿತು ಸಂವಾದದಲ್ಲಿ ಮಾತನಾಡಿದ ಅವರು, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ನೇಮಕ ಆಗುತ್ತಿಲ್ಲ. ಇತ್ತ ತರಗತಿಗೆ ಒಬ್ಬರಂತೆ ಶಿಕ್ಷಕರ ನೇಮಕಾತಿ ಆಗಲಿ ಎಂಬ ಶಿಕ್ಷಣ ತಜ್ಞರ ಸಲಹೆಯನ್ನು ಸರ್ಕಾರ ಕೇಳುತ್ತಿಲ್ಲ.

ಹಾಗಾಗಿ ಈ ಸಂಗತಿಯನ್ನು ರಂಗಭೂಮಿ ಚಿಂತಕರು, ತಮ್ಮ ವೇದಿಕೆ ಮೂಲಕ ಶಿಕ್ಷಣ ಇಲಾಖೆಯ ದೋಷವನ್ನು ಸರ್ಕಾರದ ಗಮನ ಸೆಳೆಯಲಿ ಎಂಬ ಪೋಷಕರೊಬ್ಬರ ಪ್ರಶ್ನೆಗೆ ಉತ್ತರಿಸಿದ ಹಿರಿಯ ರಂಗಕರ್ಮಿ ಪ್ರಸನ್ನ, ಸರ್ಕಾರಿ ಶಾಲೆಗಳಲ್ಲಿ ರಂಗಶಿಕ್ಷಕರೂ ಸೇರಿದಂತೆ ಇತರೆ ವಿಷಯಗಳ ಶಿಕ್ಷಕರ ನೇಮಕಾತಿ ಆಗುತ್ತಿಲ್ಲ ಎಂಬ ದೂರು ಇದೆ. ಈ ಕೊರತೆ ನಡುವೆ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ರಂಗಶಿಕ್ಷಣ ದೊರೆಯಲು ಸಾಧ್ಯವೆ ಎಂದು ಪ್ರಶ್ನಿಸಿದರು.

ಪ್ರಾಥಮಿಕ ಹಂತದಿಂದಲೇ ವಿದ್ಯಾರ್ಥಿಗಳಿಗೆ ರಂಗಶಿಕ್ಷಣದ ಅಗತ್ಯತೆ ಇದೆ ಎಂದು ವರದಿ ಸಮೇತ ಸರ್ಕಾರದ ಬಳಿ ಈ ಹಿಂದೆ ನಾವು ಮಾಡಿದ ಮನವಿಗಳೆಲ್ಲವೂ ವ್ಯರ್ಥವಾಗಿವೆ. ಅದಕ್ಕೆ ಪೋಷಕರೇ ನಮ್ಮ ಏಕಮಾತ್ರ ಭರವಸೆಯಾಗಿದ್ದು, ಮಕ್ಕಳಲ್ಲಿ ಕನ್ನಡ ಪ್ರೇಮವಾಗಲಿ, ರಂಗಭೂಮಿ ಆಸಕ್ತಿಯನ್ನಾಗಲಿ ಮೂಡಿಸಲು ಅವರಿಂದ ಮಾತ್ರ ಸಾಧ್ಯ. ರಂಗಭೂಮಿ ಮಕ್ಕಳ ಮನಸ್ಸನ್ನು ಮುದಗೊಳಿಸುವ ವೇದಿಕೆ ಎಂದು ಅಭಿಪ್ರಾಯಪಟ್ಟರು. ಇತ್ತೀಚೆಗೆ ಬಿಹಾರದ ರಾಜ್ಯಪಾಲರು ಮೈಸೂರು ಭಾಷಾ ಸಂಸ್ಥಾನದ ಕಾರ್ಯಕ್ರಮವೊಂದರಲ್ಲಿ ಮಕ್ಕಳಿಗೆ ಹಿಂದಿ ಸಂಪರ್ಕ ಭಾಷೆಯಾಗಿ ಕಲಿಸಿ ಎಂಬ ಹೇಳಿಕೆ ಕುರಿತು ಸಭಿಕರೊಬ್ಬರು ಗಮನ ಸೆಳೆದಾಗ, ಈ ರೀತಿ ಯೋಚಿಸುವುದೇ ನಾನ್ಸೆನ್ಸ್, ದಕ್ಷಿಣ ಭಾರತ ರಾಜ್ಯಗಳ ಮೇಲೆ ತ್ರಿಭಾಷಾ ಸೂತ್ರ ಅಳವಡಿಕೆಗೆ ಕೇಂದ್ರ ಸರ್ಕಾರ ಒತ್ತಡ ಹಾಕುತ್ತಿದೆ. ಇದು ಆಯಾಯ ಭಾಷಿಕ ಜನರಲ್ಲಿ ದ್ವೇಷ ಬೆಳೆಸುವ ಹುನ್ನಾರ. ಈ ನಿರ್ಧಾರ ಮಕ್ಕಳ ಮೇಲೆ ಅನಗತ್ಯ ಹೊರೆಯಾಗುತ್ತದೆ. ಅಲ್ಲದೆ, ಕನ್ನಡ ಮಾತನಾಡುವ ಮಕ್ಕಳ ಮೇಲೆ ಸಂಪರ್ಕ ಭಾಷೆಯಾಗಿ ಹಿಂದಿ ಕಲಿಯಿರಿ ಎಂದು ಒತ್ತಡ ಹೇರು ವುದು ಎಷ್ಟರ ಮಟ್ಟಿಗೆ ಸರಿ. ಕರ್ನಾಟಕದ ರೈತನಿಗೆ ಕೇಂದ್ರ ಸರ್ಕಾರ ಹಿಂದಿ, ಇಂಗ್ಲಿಷ್‌ನಲ್ಲಿ ನೋಟೀಸ್ ನೀಡಿದರೆ ಏನು ಅರ್ಥವಾಗುತ್ತದೆ ಎಂದು ಕೇಂದ್ರ ಸರ್ಕಾರದ ನಿಲುವನ್ನು ಪ್ರಶ್ನಿಸಿದರು.



ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ವತಿಯಿಂದ 'ಶಿಕ್ಷಣದಲ್ಲಿ ರಂಗಭೂಮಿಯ ಪ್ರಾಮುಖ್ಯತೆ' ಕುರಿತು ವಿವಿಧ ಕ್ಷೇತ್ರದ ತಜ್ಞರೊಂದಿಗೆ ಸಂವಾದ ನಡೆಯಿತು

> "ಶಾಲಾ ಶಿಕ್ಷಣದಲ್ಲಿ ಶೈಕ್ಷಣಿಕ ರಂಗಭೂಮಿ, ರಂಗಶಿಕ್ಷಣ ಬೆಳೆಸಬೇಕಿದ್ದ ಸರ್ಕಾರಗಳು ಸತ್ತುಹೋಗಿವೆ. ಈ ವಿಚಾರದಲ್ಲಿ ಸಿದ್ದರಾಮಯ್ಯ ಅಥವಾ ನರೇಂದ್ರಮೋದಿ ಸರ್ಕಾರ ಎಂಬ ಭೇದವಿಲ್ಲ, ಎಲ್ಲರೂ ಒಂದೇ ರೀತಿ ವರ್ತಿಸುತ್ತಿದ್ದಾರೆ. – ಪ್ರಸನ್ನ, ಹಿರಿಯ ರಂಗಕರ್ಮಿ

ರಂಗಭೂಮಿ ಮೂಲಕ ಮಕ್ಕಳಿಗೆ ವೈಯಕ್ತಿಕ ನಡವಳಿಕೆ, ವ್ಯಕ್ತಿತ್ವ, ಬದುಕಿನ ಭರವಸೆ ಮೂಡಿಸಲು ಸಾಧ್ಯವಿದೆ. ಅಲ್ಲದೆ, ಕಲಿಕೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಲು ರಂಗಭೂಮಿ ಉತ್ತಮ ವೇದಿಕೆಯಾಗಲಿದೆ. ಪ್ರಸ್ತುತ ಶಾಲೆಗಳಲ್ಲಿ ರಂಗಶಿಕ್ಷಣ ಕಲಿಸಲು ರಂಗಶಿಕ್ಷಕರೇ ಇಲ್ಲ. ಹಾಗಾಗಿ ನಮ್ಮ ಮನವಿಯನ್ನು ಪೋಷಕರಿಂದ ಈಡೇರುವ ಭರವಸೆ ಮೇರೆಗೆ ದೇಶಾದ್ಯಂತ ರಂಗ ಚಳವಳಿ ರೂಪದಲ್ಲಿ ಅಲ್ಲಲ್ಲಿ ಪೋಷಕರು, ವಿದ್ಯಾರ್ಥಿಗಳು, ವಿವಿಧ ಕ್ಷೇತ್ರದ ತಜ್ಞರ ಒಳಗೊಂಡಂತೆ ತರಬೇತಿ ಶಿಬಿರ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ದೆಹಲಿ ರಂಗಭೂಮಿ ನಿರ್ದೇಶಕ ರಜನೀಶ್ ಬಿಷ್ತ್ ಮಾತನಾಡಿ, ಇಂದಿನ ಶಿಕ್ಷಣ ವ್ಯವಸ್ಥೆ ಮಕ್ಕಳನ್ನು ರೋಬೋಟ್ ಮಾಡುವಲ್ಲಿ ಶ್ರಮವಹಿಸುತ್ತಿದೆ. ಸಮಾಜದೊಂದಿಗೆ ಸಂಪರ್ಕ ಸಾಧಿಸುವ ವ್ಯಕ್ತಿಗಳನ್ನಾಗಿ ರೂಪಿಸುತ್ತಿಲ್ಲ. ಬದಲಾಗಿ, ಕಾರ್ಖಾನೆಗಳಿಗೆ, ಸಮಾಜಕ್ಕೆ ಬೇಕಿರುವ ರೋಬೋಟ್‌ಗಳನ್ನು ತಯಾರು ಮಾಡುವಂತೆ ಈಗಿನ ಶಿಕ್ಷಣ ಪದ್ಧತಿ ಇದೆ. ಮಕ್ಕಳು ತಮಗಿಷ್ಟದ ಕಲಿಕೆಗೆ ಬಿಡಬೇಕು. ಮಗು ನಾಟಕ ಮಾಡುತ್ತೇನೆ ಎಂದರೆ ಶಿಕ್ಷಕರು ಅದಕ್ಕೆ ಅಣಿಗೊಳಿಸಬೇಕು. ವಿಜ್ಞಾನದಲ್ಲಿ ಆಸಕ್ತಿಯಿದ್ದರೆ, ಅದಕ್ಕೆ ಪೂರಕ ವಾತಾವರಣ ನಿರ್ಮಿಸಬೇಕು. ಇವೆಲ್ಲವೂ ಸಾಧ್ಯವಿರುವುದು ರಂಗಭೂಮಿಯಲ್ಲಿ. ಹಾಗಾಗಿ ರಂಗಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಚಿತ್ರಕಲಾವಿದ ಚಲುವರಾಜು ಮಾತನಾಡಿ, ಶಾಲೆಗಳಲ್ಲಿ ಗಣಿತ, ವಿಜ್ಞಾನಕ್ಕೆ ಆದ್ಯತೆ ನೀಡಲಾಗುತ್ತದೆ. ಇದಕ್ಕೆ ಪೋಷಕರು ತನ್ನ ಮಗ ವೈದ್ಯ ಅಥವಾ ಇಂಜಿನಿಯರ್ ಆಗಲಿ ಎಂಬ ಒತ್ತಾಯವೇ ಮುಖ್ಯ ಕಾರಣ. ಆದರೆ ಮಕ್ಕಳ ಮನದಲ್ಲಿ ಏನಿದೆ ಎನ್ನುವ ಗೋಜಿಗೆ ಹೋಗದೆ ಪೋಷಕರ ಇಷ್ಟವನ್ನು ಮಕ್ಕಳ ಇಷ್ಟ ಎಂಬಂತೆ ಬಿಂಬಿತವಾಗುತ್ತಿವೆ.

ಮಕ್ಕಳ ಕೌಶಲಕ್ಕೆ ವೇದಿಕೆ ನೀಡುವ ಚಿತ್ರಕಲೆ ಮತ್ತು ರಂಗಕಲೆಗಳು ಶಿಕ್ಷಣದಲ್ಲಿ ಕೊನೆ ಸ್ಥಾನ ಪಡೆದಿವೆ. ಅಲ್ಲದೆ, ಮಕ್ಕಳು ಮನರಂಜನೆಯ ಭಾಗವಾಗಿ ನಾಟಕ ಮಾಡಬೇಕು, ವೇದಿಕೆಯಲ್ಲಿ ಪ್ರದರ್ಶನ ನೀಡಬೇಕು ಎನ್ನುವುದೇ ಅಂತಿಮವಲ್ಲ. ನಾಟಕದ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವುದು, ರಂಗ ಶಿಕ್ಷಣದ ಒಂದು ಭಾಗದ ಮುಂದುವರೆದು ಆ ಮೂಲಕ ಜಗತ್ತನ್ನು ಅರಿಯುವುದೇ ಶೈಕ್ಷಣಿಕ ರಂಗಭೂಮಿ ಮೂಲ ಉದ್ದೇಶ ಎಂದರು.

> "ಶಾಲಾ ದಿನಗಳಲ್ಲಿ ವಿದ್ಯಾರ್ಥಿಗಳು ತಮ್ಮ ಬಾಲ್ಯವನ್ನು ಸಂತೋಷದಿಂದ ಅನುಭವಿಸಬೇಕು. ಇದಕ್ಕೆ ಪೂರಕವಾಗಿ ಶಾಲಾ ವಾತಾವರಣ ಇರಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಮಕ್ಕಳನ್ನು ಜ್ಞಾನ ಬೆಳೆಯುವ ಗಿಡಗಳಂತೆ ಎಂದು ಎಲ್ಲರೂ ಭಾವಿಸಿದ್ದಾರೆ. 10ನೇ ತರಗತಿ ಪರೀಕ್ಷೆಯನ್ನು ಪೋಷಕರು, ಶಿಕ್ಷಕರು ವಾರ್ಷಿಕ ಫಸಲು ಎಂಬಂತೆ ಬಿಂಬಿಸುತ್ತಿದ್ದಾರೆ. ಆದರೆ, ಅರಿವು ಶಿಕ್ಷಣ ಸಂಸ್ಥೆಯಲ್ಲಿ 10ನೇ ತರಗತಿ ಪರೀಕ್ಷೆ, ಶಿಕ್ಷಣದ ಒಂದು ಹಂತ ಎಂಬುದನ್ನು ಪೋಷಕರು, ಮಕ್ಕಳಿಗೆ ಮನವರಿಕೆ ಮಾಡಲು ಯತ್ನಿಸುತ್ತಿದ್ದೇವೆ. –ಜನಾರ್ಧನ್, ಕಾರ್ಯದರ್ಶಿ, ಅರಿವು ವಿದ್ಯಾಸಂಸ್ಥೆ

60% ಕಮಿಷನ್ ಆರೋಪಕ್ಕೆ ಪೂರಕವಾಗಿ ಗುತ್ತಿಗೆದಾರರ ಬಾಕಿ ಹಣದ ಪಟ್ಟಿ ರಿಲೀಸ್ ಮಾಡಿದ ಹೆಚ್‌ಡಿಕೆ

ಬೆಂಗಳೂರು, ಜ.7– ಕಾಂಗ್ರೆಸ್ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ 60% ಕಮಿಷನ್ ಆರೋಪದ ವಾಗ್ದಾಳಿ ಮುಂದುವರೆಸಿದ್ದಾರೆ.



60% ಕಮಿಷನ್‌ಗೆ ದಾಖಲೆ ಕೊಡಿ ಎಂದಿದ್ದ ಸಿಎಂ ಸಿದ್ದರಾಮಯ್ಯ ಮತ್ತು ಸಚಿವರಿಗೆ ತಿರುಗೇಟು ಕೊಟ್ಟಿರುವ ಕುಮಾರಸ್ವಾಮಿ, ಯಾವ ಯಾವ ಇಲಾಖೆಯಲ್ಲಿ ಗುತ್ತಿಗೆದಾರರಿಗೆ ಹಣ ಬಾಕಿ ಇದೆ ಎಂದು ಅಂಕಿಅಂಶಗಳನ್ನು ಬಿಡುಗಡೆ ಮಾಡಿದ್ದಾರೆ.

ಟ್ವೀಟ್‌ನಲ್ಲಿ ಏನಿದೆ: ದಾಖಲೆ ಕೊಡಿ, ದಾಖಲೆ ಕೊಡಿ ಎನ್ನುತ್ತಿದ್ದೀರಿ. ಇಲ್ನೋಡಿ ಸನ್ಮಾನ್ಯ ಸಿದ್ದರಾಮಯ್ಯನವರೇ ನಿಮ್ಮ ಖೊಟ್ಟಿ ಗ್ಯಾರಂಟಿ ಸರ್ಕಾರದ ಲೂಟಿ ಸಾಕ್ಷಿಗುಡ್ಡೆ. ನಿಮ್ಮ ಸರ್ಕಾರ ಗುತ್ತಿಗೆದಾರರನ್ನು ಎಷ್ಟು ನಿರ್ಲಜ್ಜವಾಗಿ ಸುಲಿಗೆ ಮಾಡುತ್ತಿದೆ ಎನ್ನುವುದಕ್ಕೆ ಈ ಸಾಕ್ಷಿಗುಡ್ಡೆ ಸಾಕ್ಷ್ಯ ಸಾಲದೇ ಮುಖ್ಯಮಂತ್ರಿಗಳೇ ಎಂದು ಸಚಿವರು ಪ್ರಶ್ನೆ ಮಾಡಿದ್ದಾರೆ. ಚೆಂಬು ಹಾಕಿ ಹಂಡೆ ಹೊಡೆದರು ಎನ್ನುವಂತೆ ಗ್ಯಾರಂಟಿ ಹೆಸರಿನಲ್ಲಿ ಬಿಡಿಗಾಸು ಕೊಟ್ಟು ಕೋಟಿ ಕೋಟಿ ಲೂಟಿ ಮಾಡುತ್ತಿದ್ದೀರಿ.

ಗುತ್ತಿಗೆದಾರರ–32,000 ಕೋಟಿ ರೂ.ನಷ್ಟು ಬಿಲ್ ಬಾಕಿ ಬಿದ್ದಿದೆ. ಈ ಬಾಕಿ ಮೇಲೆ ನಿಮ್ಮ ಪರ್ಸಂಟೇಜ್ ಕರಿನೆರಳು ಕೂಡ ಬಿದ್ದಿದೆ. ಸಾಲಸೋಲ ಮಾಡಿ ಕಾಮಗಾರಿ ಮಾಡಿರುವ ಗುತ್ತಿಗೆದಾರರು ದಯಾಮರಣಕ್ಕೆ ಅರ್ಜಿ ಬರೆಯುತ್ತಿದ್ದಾರೆ.

ಗುತ್ತಿಗೆದಾರರ ಬಿಲ್ ಬಾಕಿ ಪಟ್ಟಿ

ಜಲ ಸಂಪನ್ಮೂಲ– 14,600 ಕೋಟಿ ರೂ.
ಲೋಕೋಪಯೋಗಿ– 10,000 ಕೋಟಿ ರೂ.
ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್–3,100 ಕೋಟಿ ರೂ.
ಸಣ್ಣ ನೀರಾವರಿ– 2,800 ಕೋಟಿ ರೂ.
ಇತರೆ ಇಲಾಖೆ– 1,500 ಕೋಟಿ ರೂ.
ಒಟ್ಟು–32,000 ಕೋಟಿ ರೂ. ಬಾಕಿ ಇದೆ ಅಂತ ಕಿಡಿಕಾರಿದ್ದಾರೆ.

ಭಂಡತನ ಏಕೆ, ಆಗಿರುವ ತಪ್ಪು ಸರಿಪಡಿಸಿಕೊಳ್ಳಿ. ವಿನಾಕಾರಣ ಸಮರ್ಥನೆ ಲಾಯಕ್ಕಲ್ಲ. ಗುತ್ತಿಗೆದಾರರ ಬದುಕು ಉಳಿಸಿ ರಾಜ್ಯದ ಅಭಿವೃದ್ಧಿ ಕಡೆಗೆ ಗಮನ ಹರಿಸಿ. ಇದ್ದಿದ್ದನ್ನು ಇದ್ದಹಾಗೆ ಹೇಳಿದ್ದೇನೆ. ನೀವೂ, ನಿಮ್ಮ ಸಂಪುಟ ನನ್ನ ಮೇಲೆ ವಾಗ್ಯುದ್ಧಕ್ಕಿಳಿದರೆ ಉಪಯೋಗವೇನು. ಗುತ್ತಿಗೆದಾರರ ಬಾಕಿ ಪಾವತಿಗಿಂತ ನನ್ನನ್ನು ಟಾರ್ಗೆಟ್ ಮಾಡುವುದು ಮುಖ್ಯವಲ್ಲ ಎಂದು ಸಿಎಂ ಮತ್ತು ಸಚಿವರಿಗೆ ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.

ಇಂದು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಂಸದರ ಜನಸಂಪರ್ಕ ಸಭೆ

ಮೈಸೂರು,ಜ.7(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಜ.8ರಂದು (ಬುಧವಾರ) ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಜನಸಂಪರ್ಕ ಸಭೆ ನಡೆಸಲಿದ್ದಾರೆ. ಬೆಳಗ್ಗೆಯಿಂದ ಸಂಜೆವರೆಗೂ ಸಂಸದರು ಹಲವಾರು ಚಾಮುಂಡೇಶ್ವರಿ ಕ್ಷೇತ್ರದ ಗ್ರಾಮಗಳು, ಕಾಲೋನಿಗಳಿಗೆ ಭೇಟಿ ನೀಡಿ, ಸಾರ್ವಜನಿಕರೊಂದಿಗೆ ಸಮಾಲೋಚನೆ ನಡೆಸಿ, ಅಹವಾಲು ಸ್ವೀಕರಿಸಲಿದ್ದಾರೆ.



ಬೆಳಗ್ಗೆ ಹಂಚ್ಯಾ, ರಮ್ಮನಹಳ್ಳಿ, ಕಾಮನಕೆರೆಹುಂಡಿ, ಹಳೆಕೆಸರೆ ಗ್ರಾಮಕ್ಕೆ ಭೇಟಿ ನೀಡಲಿರುವ ಸಂಸದರು ಜನರೊಂದಿಗೆ ಸಂವಾದ ನಡೆಸಲಿದ್ದಾರೆ. ಕ್ಷೇತ್ರದಲ್ಲಿನ ಕುಂದುಕೊರತೆಗಳ ಬಗ್ಗೆ ಅಹವಾಲು ಸ್ವೀಕರಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳು ಫಲಾನುಭವಿಗಳಿಗೆ ದೊರೆಯುತ್ತಿದೆಯೇ ಎಂಬ ಕುರಿತು ಮಾಹಿತಿ ಪಡೆಯಲಿದ್ದಾರೆ.

ಮಧ್ಯಾಹ್ನ ಕೆಆರ್.ಮಿಲ್ಸ್ ಕಾಲೋನಿಗೆ ಭೇಟಿ ನೀಡಲಿದ್ದಾರೆ. ಭೋಜನ ವಿರಾಮದ ನಂತರ ಸಂಜೆ ಹೂಟಗಳ್ಳಿ, ಕೆ.ಹೆಚ್.ಬಿ ಕಾಲೋನಿ ಹಾಗೂ ಕೂರ್ಗಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಜನ ಸಂಪರ್ಕ ಸಭೆ ನಡೆಸಲಿದ್ದಾರೆ.

ಗ್ರೌಂಡಿಂಗ್ ವ್ಯವಸ್ಥೆ ಹಲವು ವಿದ್ಯುತ್ ಅವಘಡ ತಡೆಗಟ್ಟುತ್ತದೆ

ತಾಂತ್ರಿಕ ಜರ್ನಲ್ ಸಮಿತಿ ಅಧ್ಯಕ್ಷ ಯು.ಎಸ್.ನಾಯ್ಕ ಅಭಿಮತ


ಲೇಖಕ ಎಂ.ಎಲ್.ಶೇಷಾದ್ರಿ ರಚಿತ 'ಎಲೆಕ್ಟ್ರಿಕಲ್ ಅರ್ಥಿಂಗ್' ಕೃತಿ, ಕವಿ ಹೇಮಂತ್ ಲಿಂಗಪ್ಪ ರಚಿತ 'ಮತ್ತೆ ಮತ್ತೆ ಮಳೆ' ಕವನ ಸಂಕಲನ ಹಾಗೂ ಕೆಪಿಟಿಸಿಎಲ್‌ಗೆ ಸಂಬಂಧಿಸಿದ ತಾಂತ್ರಿಕ ಜರ್ನಲ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜ.7(ಎಸ್‌ಪಿಎನ್)– ಲೇಖಕ ಎಂ.ಎಲ್.ಶೇಷಾದ್ರಿ ರಚಿತ 'ಎಲೆಕ್ಟ್ರಿಕಲ್ ಅರ್ಥಿಂಗ್' ಕೃತಿ, ಕವಿ ಹೇಮಂತ್ ಲಿಂಗಪ್ಪ ರಚಿತ 'ಮತ್ತೆ ಮತ್ತೆ ಮಳೆ' ಕವನ ಸಂಕಲನ ಹಾಗೂ ಕೆಪಿಟಿಸಿಎಲ್‌ಗೆ ಸಂಬಂಧಿಸಿದ ತಾಂತ್ರಿಕ ಜರ್ನಲ್ ಅನ್ನು ಮಂಗಳವಾರ ಖಾಸಗಿ ಹೋಟೆಲ್‌ನಲ್ಲಿ ಕರ್ನಾಟಕ ಪವರ್ ಎಂಜಿನಿಯರ್ಸ್ ಅಕಾಡೆಮಿ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ತಾಂತ್ರಿಕ ಜರ್ನಲ್ ಸಮಿತಿ ಅಧ್ಯಕ್ಷ ಯು.ಎಸ್.ನಾಯ್ಕ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, 'ಅರ್ಥಿಂಗ್ ಮತ್ತು ಗ್ರೌಂಡಿಂಗ್' ವಿದ್ಯುತ್ ಸಂಪರ್ಕದ ಬಹು ಮುಖ್ಯ ಅಂಗವಾಗಿದ್ದು, ಅಪಾಯಗಳ ವಿರುದ್ಧ ರಕ್ಷಣೆ ನೀಡುವ ಪ್ರಮುಖ ವ್ಯವಸ್ಥೆಗಳು. ವಿದ್ಯುತ್ ವ್ಯವಸ್ಥೆಗಳು ಸುರಕ್ಷಿತವಾಗಿರಲು, ಗ್ರೌಂಡಿಂಗ್ ಅತ್ಯಗತ್ಯ. ಇದು ವಿದ್ಯುತ್ ಆಘಾತ, ಶಾರ್ಟ್ ಸರ್ಕ್ಯೂಟ್, ಉಪಕರಣಗಳು ಮತ್ತು ಸಲಕರಣೆ ಹಾನಿಯ ವಿರುದ್ಧ ರಕ್ಷಣೆ ನೀಡುತ್ತದೆ ಎಂದರು.

'ಎಲೆಕ್ಟ್ರಿಕಲ್ ಅರ್ಥಿಂಗ್' ಕೃತಿ ಮತ್ತು ಸಂಸ್ಥೆಯ ಜರ್ನಲ್ ಹೊರತಂದಿರುವುದು ಯುವ ಎಂಜಿನಿಯರ್‌ಗಳಿಗೆ ಪ್ರೇರಣೆಯಾಗಲಿದೆ. ಇದರಿಂದ ಸಂಸ್ಥೆಯ ಕಾರ್ಯಚಟುವಟಿಕೆ ತಿಳಿದುಕೊಳ್ಳಲು, ಉಪಯುಕ್ತವಾಗಲಿದೆ. ಅಲ್ಲದೆ, ನಮ್ಮ ಸಂಘಟನೆ ಬಲಪಡಿಸಲು ನಾವೇ ಮುಂದಾಗಬೇಕು. ಮೊಬೈಲ್ ಬಳಕೆಯಿಂದ ನಮ್ಮ ಜೀವನ ನಿಷ್ಕ್ರಿಯವಾಗುತ್ತಿದೆ. ಬರವಣಿಗೆ ಕಲೆ ರೂಢಿಸಿಕೊಳ್ಳಬೇಕು. ನಿತ್ಯ ಕೆಲಸದ ಜೊತೆಗೆ ಹೊರಗಿನ ಪ್ರಪಂಚ ಅರಿಯಬೇಕು. ಪುಸ್ತಕ ಓದಿ ವಿಚಾರ ತಿಳಿದುಕೊಳ್ಳುವಂತೆ ಕೆಪಿಟಿಸಿಎಲ್ ನೌಕರರಿಗೆ ಸಲಹೆ ನೀಡಿದರು.

ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ ಮಾತನಾಡಿ, ಕೃತಿ ಓದಿಗೆ ಮಾತ್ರವಲ್ಲದೆ ಪ್ರಾಯೋಗಿಕವಾಗಿ ಇದನ್ನು ಬಳಕೆ ಮಾಡಿಕೊಳ್ಳಬೇಕು. ಇಂದು ಕೆಪಿಟಿಸಿಎಲ್ ಸ್ಟೇಷನ್‌ಗಳಲ್ಲಿ ಕೆಲಸ ಮಾಡುವವರಿಗೆ ತಾಂತ್ರಿಕವಾಗಿ ಕೆಲವೊಂದು ಮಾಹಿತಿಗಳು ಇರುವುದಿಲ್ಲ. ಈ ನಿಟ್ಟಿನಲ್ಲಿ ಈ ವಿಷಯಗಳ ಬಗ್ಗೆ ತರಬೇತಿ ನೀಡಬೇಕಾದ ಅಗತ್ಯತೆ ಇದೆ ಎಂದರು. ರಾಜ್ಯದ ಎಲ್ಲಾ ಎಸ್ಕಾಂಗಳಿಗಿಂತ ಸೆಸ್ಕ್ ಮುಂಚೂಣಿಯಲ್ಲಿದೆ. ಹೊಸ

> "ಲೇಖಕ ಎಂ.ಎಲ್.ಶೇಷಾದ್ರಿ ರಚಿತ 'ಎಲೆಕ್ಟ್ರಿಕಲ್ ಅರ್ಥಿಂಗ್' ಕೃತಿ ಮತ್ತು ಕೆಪಿಟಿಸಿಎಲ್‌ಗೆ ಸಂಬಂಧಿಸಿದ ತಾಂತ್ರಿಕ ಜರ್ನಲ್ ಬಿಡುಗಡೆಗೊಂಡಿದೆ. ತಾಂತ್ರಿಕ ವಿಚಾರವಾದ ಅರ್ಥಿಂಗ್ ಬಗ್ಗೆ ಸಂಕ್ಷಿಪ್ತವಾಗಿ ಹೇಳಲಾಗಿದೆ. ಅರ್ಥಿಂಗ್ ಎಂಬುದು ವಿದ್ಯುತ್ ವಿಷಯದಲ್ಲಿ ಮುಖ್ಯವಾಗಿದೆ. ಕೇವಲ ಕೆಇಬಿ ಅಥವಾ ಇತರೆ ಎಸ್ಕಾಂಗಳಿಗೆ ಮಾತ್ರವಲ್ಲದೆ, ಹೊರ ರಾಜ್ಯದ ಎಸ್ಕಾಂಗಳಿಗೂ ಹೆಚ್ಚಿನ ಉಪಯೋಗ ಆಗಬೇಕೆಂಬ ಉದ್ದೇಶದಿಂದ ಈ ಪುಸ್ತಕ ಹೊರತರಲಾಗಿದೆ. ಹಿಂದೆ ಇದ್ದಂತಹ ಇಂಜಿನಿಯರ್ಸ್ ಅತ್ಯಂತ ತಾಂತ್ರಿಕ ಪರಿಣತಿ ಹೊಂದಿದ್ದರು. ಆದರೆ ಇಂದಿನ ಪರಿಸ್ಥಿತಿ ಗಮನಿಸಿದರೆ, ತಾಂತ್ರಿಕ ಪರಿಣತಿ ಕಡಿಮೆ ಇದೆ. ಕರ್ತವ್ಯದಲ್ಲಿ ತೃಪ್ತಿಕರ ಮನೋಭಾವ ಕೂಡ ಕಡಿಮೆ ಆಗುತ್ತಿದೆ. –ಮುನಿಗೋಪಾಲರಾಜು, ಅಧ್ಯಕ್ಷರು, ಕೆಪಿಇಎ

ಕೆಲಸ ಮಾಡುವುದಕ್ಕಿಂತ ಇರುವ ಕೆಲಸಗಳನ್ನು ಸಮರ್ಪಕವಾಗಿ ಮಾಡಿದರೆ ಸಾಕಷ್ಟು ಸಮಸ್ಯೆಗಳು ನಿವಾರಣೆ ಆಗಲಿವೆ. ಫೀಡರ್ ನಿರ್ವಹಣೆಯಲ್ಲಿ ಸೆಸ್ಕ್ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಮೂರು ತಿಂಗಳಲ್ಲಿ ಒಮ್ಮೆ ಈ ಕಾರ್ಯಕ್ರಮ ಮಾಡಿದರೆ ಒಳ್ಳೆಯದು. ಇದರಿಂದ ನಮ್ಮ ಎಂಜಿನಿಯರ್‌ಗಳಿಗೂ ಹಾಗೂ ನಮ್ಮಲ್ಲಿರುವ ಪ್ರತಿಭೆಗಳಿಗೆ ಪ್ರೋತ್ಸಾಹ ಸಿಗಲಿದೆ ಎಂದರು.

ಅಕಾಡೆಮಿಯ ಕಾರ್ಯದರ್ಶಿ ಎಂ.ಎಚ್.ಜಗದೀಶ್ ಮಾತನಾಡಿದರು. ಖಜಾಂಚಿ ಎಂ.ಜಿ.ಹಾಲಸ್ವಾಮಿ, ಜಂಟಿ ಕಾರ್ಯದರ್ಶಿ ಟಿ.ಲಕ್ಷ್ಮಿಧರ ಪ್ರಭು, ಜಂಟಿ ಕಾರ್ಯದರ್ಶಿ ಸಿ.ಧನಂಜಯ, ಟಿ.ಎಂ.ಶಿವಪ್ರಕಾಶ್, ಕೆಪಿಟಿಸಿಎಲ್ ಮೈಸೂರು ವಲಯ ಎಸ್‌ಇ ರಂಗರಾಜು, ಸಮಿತಿ ಸದಸ್ಯರಾದ ಬಿ.ಸಿ.ಪಾಲನೇತ್ರ, ಎಂ.ಸುರೇಶ್, ಎಂ.ಎಲ್.ರಾಜೋಜಿರಾವ್, ಪಿ.ಆರ್.ಚನ್ನಕೇಶವಮೂರ್ತಿ, ಸಿ.ಲೋಕನಾಥ್, ಜಿ.ವಿ.ಚಲಪತಿ, ಎಲ್.ಕಾರ್ತಿಕ್, ಎಸ್.ಪ್ರೀತಂ, ಸಿ.ಬಸವಣ್ಣ, ಟಿ.ಮಾರುತಿ, ರಮೇಶ, ಎಂ.ಬಿ.ಚಂದ್ರಶೇಖರ್, ವಿ.ಎಚ್.ವೆಂಕಟೇಶಪ್ಪ, ಶ್ರೀನಿವಾಸ ಬಿ.ಮಂತ್ರೋಡಿ, ಆಯುಷಾ ಬೇಗಂ, ಎಚ್.ಡಿ.ಚನ್ನಕೇಶವ, ಬಿ.ಎಲ್.ನರಸಿಂಹಮೂರ್ತಿ, ಎಂ.ರವೀಂದ್ರ, ಪಿ.ಆರ್.ಅಶೋಕ್, ಬಿ.ಎನ್.ಜಿತೇಂದ್ರ ಕುಮಾರ್, ಸಿ.ಮಲ್ಲಿಕಾರ್ಜುನ, ಮಾನಸ ಪಿ.ಗೌಡ, ಜರ್ನಲ್ ಉಪಸಮಿತಿ ಸದಸ್ಯರಾದ ಪ್ರಧಾನ ಸಂಪಾದಕ ಯು.ಎಸ್.ನಾಯ್ಕ, ಎಸ್.ರಂಗರಾಜು, ಎಂ.ಪಿ.ಆರ್.ಆಕಾಶ್, ಎಚ್.ಎನ್.ನವೀನ್ ಕುಮಾರ್, ಎಂ.ಕುಮಾರ ಉಪಸ್ಥಿತರಿದ್ದರು.

ನಿಧನ




ಶ್ರೀಮತಿ ರತ್ನಮ್ಮ.ಎಚ್.ಸಿ ಬಸವಣ್ಣ

8/9 ಎ, ರಾಜೇಂದ್ರ ಕೃಪಾ, 5ನೇ ಮುಖ್ಯ ರಸ್ತೆ ಸರಸ್ವತಿಪುರಂ, ಮೈಸೂರು
ದಿವಂಗತ ಶ್ರೀ ಎಚ್. ಸಿ. ಬಸವಣ್ಣ ಕಾರ್ಯದರ್ಶಿಗಳು JSS ಮಹಾವಿದ್ಯಾಪೀಠ ಮೈಸೂರು ಹಾಗೂ ಮಹಾನಂದಿ ದಿನಪತ್ರಿಕೆ ಸಂಸ್ಥಾಪಕ ಸಂಪಾದಕರು, JSS ಪ್ರೆಸ್ ಮಾಲೀಕರು, ಮೈಸೂರು ಇವರ ಧರ್ಮಪತ್ನಿ ಇವರು ದಿನಾಂಕ 07–01–2025 ಮಂಗಳವಾರ ಬೆಳಗ್ಗೆ 11 ಗಂಟೆಯಲ್ಲಿ ಶಿವೈಕ್ಯರಾಗಿದ್ದು. ಮೃತರ ಅಂತ್ಯಕ್ರಿಯೆ ದಿನಾಂಕ 08–01–2025 ಬುಧವಾರ 12 ಗಂಟೆಗೆ ಮೈಸೂರು ನಂಜನಗೂಡು ರಸ್ತೆ ಟೋಲ್ ಸಮೀಪದ ಅವರ ಜಮೀನಿನಲ್ಲಿ ನೆರವೇರಲಿದೆ.

ದುಃಖತಪ್ತರು: ಮಗ : ಹೆಚ್.ಬಿ.ಶಿವಕುಮಾರ್ (ಬಾಬು), ಹೆಚ್‌ಸಿಬಿ ಪ್ರಿಂಟಿಂಗ್ ಪ್ರೆಸ್ ಮಾಲೀಕರು, ಮೈಸೂರು, ಪುತ್ರಿಯರು, ಅಳಿಯಂದಿರು ಮತ್ತು ಮೊಮ್ಮಕ್ಕಳು

7ನೇ ವರ್ಷದ ಸವಿನೆನಪು



ಪಿ.ಸೋಮಶೇಖರ್
PRO, BEML

ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಮಂಜುಳ ಧ್ವನಿ & ಬೆಳಕು ಕುಟುಂಬ, ಸುಣ್ಣದಕೇರಿ, ಮೈಸೂರು

ಮೊದಲನೇ ವರ್ಷದ ವೈಕುಂಠ ಸಮಾರಾಧನೆ



ಶ್ರೀಮತಿ ಜಯಲಕ್ಷ್ಮಿ
ಲೇ॥ ಕೃಷ್ಣಚಾರಿಯವರ ಧರ್ಮಪತ್ನಿ
ದಿ: 08.01.2025 ಬುಧವಾರ, ಮಧ್ಯಾಹ್ನ 1 ಗಂಟೆಗೆ
ಸ್ಥಳ: ಸ್ವಗೃಹ # 823, ಕಾಮಾಟಗೇರಿ 1ನೇ ಕ್ರಾಸ್, ಮಂಡಿಮೊಹಲ್ಲಾ, ಮೈಸೂರು
ದುಃಖತಪ್ತರು: ಮಗ್ದೇವು ಹಾಗೂ ಕುಟುಂಬವರ್ಗದವರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕಾಮಗಾರಿ ವಿಭಾಗ, ಮೈಸೂರು

ಸಂ:ಕರಾಸಾ/ಕಾನಿಅ/ಮೈ/ಕಿಅ/397/2024–25 ದಿನಾಂಕ:07.01.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ. 05/2024–25

ಕರ್ನಾಟಕ ಲೋಕೋಪಯೋಗಿ ಇಲಾಖೆ/ಸಿ.ಪಿ.ಡಬ್ಲ್ಯೂ.ಡಿನಲ್ಲಿ ನೋಂದಾಯಿತರಾಗಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಗಿನ ಕಾಮಗಾರಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ http://kppp.karnataka.gov.in ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರ್ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)
1	ಮೈಸೂರು ಬನ್ನಿಮಂಟಪದಲ್ಲಿ ನೂತನ ಬಸ್ ನಿಲ್ದಾಣ ಮತ್ತು ವಾಣಿಜ್ಯ ಸಂಕೀರ್ಣ ನಿರ್ಮಿಸುವುದು.	99.36	99,36,000/-

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **28.02.2025**. 2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ವಿವರಗಳನ್ನು ದಿನಾಂಕ : **15.01.2025** ರ ನಂತರ ಪಡೆಯಬಹುದು. 3) ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕ.ರಾ.ರ.ಸಾ.ನಿಗಮ, ಮೈಸೂರು, ನೆಲ್ಸನ್ ಮಂಡೇಲ ರಸ್ತೆ, ಬನ್ನಿ ಮಂಟಪ, ಮೈಸೂರು ಇಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ : 0821–2498828.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಮೈಸೂರು

ವಾಸಾಸಂಇ/ವಾಪ್ರ/ಜಿಎ/4195/2024–25